ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ, ಹಂದಿ ಸಾಕುವವರು ಫೈನಾನ್ಷಿಯಲ್ ಇನ್ಸ್ಟಿಟ್ಯೂಷನ್ನಿಂದ ಸಾಲ ತೆಗೆದುಕೊಂಡಿರುವುದರಿಂದ ಅದನ್ನು ಊರಿನ ಭಾಗದಿಂದ ಬೇರೆಡೆಗೆ ಸ್ಥಳಾಂತರಿಸುವುದಕ್ಕೆ ಹಿಂಜರಿಯುತ್ತಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ/ಮತ್ತು ಈ ಖಾಯಿಲೆ ಬಗ್ಗೆ ಸಾರ್ವಜನಿಕರಿಗೆ ಏನಾದರೂ ತಿಳಿವಳಿಕೆ ನೀಡಿದ್ದೀರಾ ?

SRI A. K. ABDUL SAMAD.— Sir 4 taluks have been covered — (1) Mandya Taluk, 17 villages, (2) Maddur Taluk, 23 villages, (3) Srirangapatna, 1 village and (4) Malavalli Taluk, 1 village. It has not spread to other places. We have taken steps to segregate and to avoid its occurrence in other places. We have also taken steps to have intense health education of the people in a villages and I am sure our Joint Director of Health has also met our Hon. Member when he visited the entire area to supervise whether effective steps have been taken or not even State level zonal committee to review this disease has also been formed and they are investigating.

FINANCIAL BUSINESS

Voting of Demands for Grants Demands Nos. 1,3,54 & 55

† ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).— ಮಾನ್ಯ ಉಪಾಧ್ಯಕ್ಷರೇ, ವ್ಯವಸಾಯ ಮತ್ತು ಸಹಕಾರ ಇಲಾಖೆಗಳ ಬೇಡಿಕೆಯನ್ನು ನಾನು ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಇಲ್ಲಿ ಬಹಳ ಮುಖ್ಯವಾಗಿರತಕ್ಕುದು ವ್ಯವಸಾಯ ಇಲಾಖೆ. ನಾವೆಲ್ಲರೂ ಕೂಡ ರೈತಾಪಿ ಜನಗಳೇ. ರೈತರ ಮಕ್ಕಳೇ ಮತ್ತು ರೈತರಿಂದ ಆಯ್ಕೆಯಾಗಿ ಬಂದಿರತಕ್ಕ ಪ್ರತಿನಿಧಿಗಳೇ. ಆದರೆ, ನಾವು ಎಷ್ಟರ ಮಟ್ಟಿಗೆ ರೈತರ ಹಿತವನ್ನು ರಕ್ಷಿಸಿದ್ದೇವೆ ಎನ್ನುವುದು ಇನ್ನೂ ದೊಡ್ಡ ಪ್ರಶ್ನೆಯಾಗಿ ಉಳಿದಿದೆ. ಇಂದು ರೈತ ಖಂಡಿತವಾಗಿಯೂ ತೊಂದರೆಗೀಡಾಗಿದ್ದಾನೆ. ಇದಕ್ಕೆ ಕಾರಣವೇನೆಂಬುದನ್ನು ಕೂಲಂಕಷವಾಗಿ ವಿಚಾರ ಮಾಡಿದರೆ, ಪ್ರಕೃತಿ ವಿಕೋಪದಿಂದಾಗಿ ರೈತ ಕಂಗಾಲಾಗಿದ್ದಾನೆಂದು ಹೇಳಿದರೆ ತಪ್ಪಾಗಲಾರದು. ರೈತನ ತೊಂದರೆಗೆ ಶೇಕಡ ಎಪ್ಪತ್ತು ಭಾಗ ಪ್ರಕೃತಿ ವಿಕೋಪವೇ ಕಾರಣ. ಮತ್ತೆ ಕೆಲವು ಭಾಗ ರಾಜಕಾರಣಿಗಳಾಗಿರತಕ್ಕ ನಾವೂ ಕೂಡ ಕಾರಣವಾಗಿದ್ದೇವೆ. ರಾಜಕಾರಣಿಗಳೆಂದರೆ ನಾವೇನಲ್ಲ; ಕಳೆದ ಮೂವತ್ತು ವರ್ಷಗಳಿಂದಲೂ ಇದ್ದಂಥ ಎಲ್ಲ ರಾಜಕಾರಣಿಗಳು ಇದರಲ್ಲಿ ಪಾಲುದಾರರಾಗಿದ್ದಾರೆ. ವ್ಯವಸಾಯಗಾರರ ಉದ್ಧಾರಕ್ಕಾಗಿಯೇ ವ್ಯವಸಾಯ ಇಲಾಖೆ ನಮ್ಮಲ್ಲಿದೆ. ಈ ಇಲಾಖೆಯ ಬಹು ಮುಖ್ಯವಾದ ಕೆಲಸ ಎಂದರೆ ಅಧ್ಯಯನ ಮತ್ತು ಸಂಶೋಧನೆ. ಇದು ಒಂದು ಭಾಗ. ರೈತರಿಗೆ ಒಳ್ಳೆಯ ಉಪಕರಣಗಳನ್ನು ಒದಗಿಸುವ, ಬೀಜ ಮತ್ತು ಗೊಬ್ಬರಗಳನ್ನು ಸರಬರಾಜು ಮಾಡುವ ಹಾಗೂ ಉತ್ಪನ್ನ ಹೆಚ್ಚುವ ದಿಸೆಯಲ್ಲಿ ನಾನಾ ಯೋಜನೆಗಳನ್ನು ಹಾಕಿಕೊಂಡು ಈ ಇಲಾಖೆ ಕೆಲಸ ಮಾಡುತ್ತಿದೆ. ನಮ್ಮ ಭಾಗದಲ್ಲಿ ಈ ಇಲಾಖೆ ಮಾಡಬೇಕಾದ ಕೆಲಸವೆಂದರೆ ಒದು ಹಾಕಿಸುವುದು. ಇದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಶೇಕಡ ಎಂಬತ್ತರಷ್ಟು ಜನ ರೈತರಿರುವ ಈ ರಾಜ್ಯದಲ್ಲಿ ಅವರಿಗಾಗಿ ಇರುವ ಇಲಾಖೆಯಿಂದ ಖರ್ಚು ಮಾಡುವ ಹಣದಲ್ಲಿ ನೇರವಾಗಿ ಅವರಿಗೆಷ್ಟು ತಲುಪುತ್ತದೆ ಎನ್ನುವ ಬಗ್ಗೆ ನಾವು ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆಯಲ್ಲದೆ ಇದಕ್ಕೆ ಹೆಚ್ಚಿನ ಗಮನವನ್ನು ಸರ್ಕಾರ ಕೊಡಬೇಕೆಂದು ಸಲಹೆ ಮಾಡಬಯಸುತ್ತೇನೆ. ರೈತಗಲ್ಲಿ ಒಗ್ಗಟ್ಟು ಮೂಡಿರುವುದನ್ನು ನಾವೀಗಾಗಲೇ ನೋಡಿದ್ದೇವೆ. ಶಾಂತಪ್ರಿಯರಾದ ರೈತರು ಯಾವತ್ತೂ ಕೂಡ ಸರ್ಕಾರದ ವಿರುದ್ಧ ಬೀದಿಗಿಳಿಯುವಂಥ ಕೆಲಸ ಮಾಡುತ್ತಿದ್ದವರಲ್ಲ. ಆದರೆ, ಇಂದು ಅಂಥ ಪರಿಸ್ಥಿತಿ ಬಂದಿರುವುದನ್ನು ನಾವು ಗಮನಿಸಬೇಕಾಗಿದೆ. ಇದು ನಮಗೆ ಬುದ್ಧಿ ಕಂಡ ಮೇಲೆ ಆಗಿರುವ ಬೆಳವಣಿಗೆ. ಇದಕ್ಕೆ ಕಾರಣ, ಒಂದು ಕಡೆ ಅತಿವೃಷ್ಟಿಯಾದರೆ ಇನ್ನೊಂದು ಕಡೆ ಅನಾ

ವೃಷ್ಟಿ. ಮಳೆ ಬೆಳೆ ಎನ್ನುವುದೇ ಸರಿಯಾಗಿ ಆಗುತ್ತಿಲ್ಲ. ಮುಂದೆ ಸರಿಯಾಗಿ ಆಗುವಂಥ ಸಂದರ್ಭ ಕೂಡ ಕಾಣುತ್ತಿಲ್ಲ. ದಿನೇ ದಿನೇ ಕಾಡು ಹಾಳಾಗುತ್ತಿರುವುದೇ ಇದಕ್ಕೆ ಕಾರಣ. ಇನ್ನು ಮುಂದೆ ಸಕಾಲಕ್ಕೆ ಮಳೆ ಬಂದು ಸಮೃದ್ಧವಾಗಿ ಬೆಳೆಯಾಗುತ್ತದೆನ್ನುವ ಆಸೆಯನ್ನು ಯಾರೂ ಇಟ್ಟುಕೊಳ್ಳುವ ಹಾಗಿಲ್ಲ. ಈಗಾಗಲೇ ನಾವು ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಆದುದರಿಂದ, ಇದಕ್ಕೆ ಪರಿಹಾರ ಹುಡುಕತಕ್ಕ ಕೆಲಸವನ್ನು ಸರ್ಕಾರ ಕೂಡಲೇ ಬಹಳ ಪ್ರಾಮುಖ್ಯವಾಗಿ ಮಾಡಬೇಕಾಗಿದೆ. ಮಾಡದಿದ್ದರೆ ರೈತ ಇನ್ನಷ್ಟು ಕಂಗಾಲಾಗುತ್ತಾನೆಂದು ಹೇಳದೆ ವಿಧಿ ಇಲ್ಲ, ಹೆಚ್ಚು ಇಳುವರಿ ತೆಗೆಯುವ ಕಡೆ ನಾವು ಆದ್ಯ ಗಮನ ನೀಡಬೇಕಾಗಿದೆ ನಮ್ಮ ದೇಶದಲ್ಲಿ ರೈತರು ವ್ಯವಸಾಯ ಮಾಡುವಲ್ಲಿ ಅನುಸರಿಸುವ ಹಳೆಯ ಪದ್ಧತಿಗಳನ್ನು ತೆಗೆದು ಹಾಕಿ ಹೊಸ ಪದ್ಧತಿಗಳನ್ನು ಅನುಸರಿಸಬೇಕು. ಹೊಸ ತಳಿಯ ಬೀಜಗಳನ್ನು ರೈತರಿಗೆ ಕೊಡಬೇಕು. ರೈತರಿಗೆ ಬೀಜ ಒದಗಿಸುವ ಪ್ರಮುಖ ಜವಾಬ್ದಾರಿಯನ್ನು ರಾಜ್ಯದ ಬೀಜಗಳ ನಿಗಮ ಹೊತ್ತಿದೆ. ಈ ನಿಗಮ ಎಷ್ಟರಮಟ್ಟಿಗೆ ಕೆಲಸ ನಿರ್ವಹಿಸುತ್ತಿದೆ ಮತ್ತು ಇದರಿಂದ ರೈತರಿಗೆ ಯಾವ ರೀತಿ ಬೀಜ ಸಿಗುತ್ತಿದೆ ಎನ್ನುವುದರ ಬಗ್ಗೆ ನಾನು ಅನೇಕ ಸಾರಿ ಗಮನ ಸೆಳೆಯುವ ಸೂಚನೆ ಮತ್ತು ಪ್ರಶ್ನೆಗಳ ಮುಖಾಂತರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಬಿತ್ತನೆ ಕಾಲ ಬಂದಾಗ ರೈತರಿಗೆ ಬಿತ್ತನೆ ಬೀಜಗಳು ಸಿಗುವುದೇ ಬಹಳ ಕಷ್ಟಕರ. ಬೀಜ ಸಿಕ್ಕಬೇಕಾದರೆ ರೈತರು ಊರಿಂದೂರಿಗೆ ಅಲೆದಾಡುವ ಪರಿಸ್ಥಿತಿ ಇದೆ. ಒಂದು ವೇಳೆ ಬಿತ್ತನೆ ಬೀಜ ಸಿಕ್ಕಿದರೂ ಕೂಡ ಅವುಗಳಲ್ಲಿ ನಕಲಿ ಬೀಜಗಳೇ ಜಾಸ್ತಿ ಇರುತ್ತವೆ. ಇದರಿಂದ ಲಾಭ ಯಾರಿಗೋ ಆಗಿ ನಷ್ಟ ಮಾತ್ರ ರೈತರಿಗಾಗುತ್ತದೆ. ಇದು ಸರ್ಕಾರಕ್ಕೆ ಗೊತ್ತಿರುವ ವಿಚಾರ. ಬೀಜಗಳ ನಿಗಮದಿಂದ ರೈತರಿಗೆ ಸಹಾಯವಾಗುವುದಕ್ಕಿಂತ ಹೆಚ್ಚಾಗಿ ಅನಾನುಕೂಲಗಳೇ ಆಗುತ್ತಿವೆ. ಬೀಜಗಳ ನಿಗಮ ಇಲ್ಲದಿದ್ದರೆ ಹಳೇ ಬೀಜಗಳನ್ನೇ ಹಾಕಿಕೊಂಡು ರೈತರು ಬಿತ್ತನೆ ಮಾಡುತ್ತಿದ್ದರು. ಆದರೆ, ಹೆಚ್ಚು ಇಳುವರಿ ತೆಗೆಯಬೇಕೆಂಬ ಬಯಕೆಯಿಂದ ರೈತರು ಬೀಜಗಳ ನಿಗಮ ಸರಬರಾಜು ಮಾಡಿದ ಬೀಜದಿಂದ ಬಿತ್ತನೆ ಮಾಡಿದರೆ ರೈತರು ಬಹಳ ತೊಂದರೆಯನ್ನನುಭವಿಸಬೇಕಾಗುತ್ತದೆ. ಇದನ್ನು ಸರ್ಕಾರ ತೀವ್ರವಾಗಿ ಗಮನಿಸಬೇಕಾಗಿದೆ ಮತ್ತು ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ತಡೆಗಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇಂದಿನ ಬೆಳೆಗಳಿಗೆ ನಾವು ಹಿಂದೆಂದೂ ಕೇಳದಿದ್ದ ಮತ್ತು ಮುಂದೆಂದೂ ಕೇಳದಂಥ ರೋಗಗಳು ಬರುತ್ತಿವೆ. ಔಷಧಿಗಳನ್ನು ಒದಗಿಸುವ ಜವಾಬ್ದಾರಿಯನ್ನೂ ಸಹ ಸರ್ಕಾರ ಹೊತ್ತಿದೆ. ನಾನು ರೈತನಾಗಿದ್ದು ಸ್ವತಃ ವ್ಯವಸಾಯ ಮಾಡುತ್ತಿದ್ದೇನೆ. ನನಗಿದರಲ್ಲಿ ಅನುಭವವಿದೆ. ರೈತರಿಗೆ ಕೊಡುವ ಔಷಧಿಗಳನ್ನು ಸಕಾಲದಲ್ಲಿ ಒದಗಿಸಬೇಕು. ಈ ಔಷಧಿಗಳನ್ನು ಎಲ್ಲಿಂದ ತರಿಸುತ್ತಾರೋ ಏನೋ ಅವೊಂದೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಈ ಔಷಧಿಗಳಿಂದ ಸೊಣ ತಿಗಣೆಗಳೂ ಕೂಡ ಸಾಯದಿರುವಾಗ ಇನ್ನು ಗಿಡಗಳಿಗೆ ಹತ್ತಿರುವ ವಿಷ ಕ್ರಿಮಿಗಳು ಹೇಗೆ ಸಾಯುತ್ತಾವೆಂಬುದನ್ನು ವಿಚಾರ ಮಾಡಬೇಕಾಗಿದೆ. ಈ ಇಲಾಖೆ ಸಂಶೋದನೆಯ ಜವಾಬ್ದಾರಿಯನ್ನೂ ಹೊತ್ತುಕೊಂಡಿದೆ. ಒಂದು ದೊಡ್ಡ ವಿಶ್ವವಿದ್ಯಾಲಯವೇ ಇದಕ್ಕಿದೆ. ಆದರೂ ಸಂಶೋದನೆಯಲ್ಲಿ ನಾವು ಬಹಳಷ್ಟು ಹಿಂದುಳಿದಿದ್ದೇವೆ. ನಾವು ಸಂಶೋದನೆಯಲ್ಲಿ ಮುಂದೆ ಬರದಿದ್ದರೆ ರೈತರಿಗೆ ಯಾವ ರೀತಿಯಲ್ಲೂ ಸಹಾಯವಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಅಮೇರಿಕಾ ದೇಶದಲ್ಲಿ ಪ್ರಕೃತಿದತ್ತವಾದ ಎಲ್ಲ ಸೌಕರ್ಯಗಳೂ ಇರಬಹುದು, ಆದರೆ ಅವರಲ್ಲಿರುವಷ್ಟು ಸಂಶೋಧನಾ ಶಕ್ತಿ ಮತ್ತು ಪ್ರವೃತ್ತಿ ನಮ್ಮಲ್ಲಿಲ್ಲ. ಶೇಕಡ ೮೦ರಷ್ಟು ಜನ ರೈತರು ನಮ್ಮ ರಾಜ್ಯದಲ್ಲಿದ್ದರೂ ಆಹಾರಕ್ಕಾಗಿ ನಾವು ಬೇರೆ ರಾಜ್ಯವನ್ನೂ ಮತ್ತು ನಮ್ಮ ದೇಶವು ಪರದೇಶವನ್ನೂ ಮೊರೆಹೊಕ್ಕತಕ್ಕ ಪರಿಸ್ಥಿತಿ ಇದೆ. ಆದರೆ, ಇಂಥಾ ಪರಿಸ್ಥಿತಿ ಬೇರೆ ದೇಶಗಳಲ್ಲಿಲ್ಲ. ಇದಕ್ಕೆ ಕಾರಣ. ನಾವು ಸಂಶೋಧನೆಯಲ್ಲಿ ಸಾಕಷ್ಟು ಮುಂದುವರಿಯದಿರುವುದೇ ಆಗಿದೆ. ಆದುದರಿಂದ, ಇದರಲ್ಲಿ ನಾವು ಮುಂದುವರಿಯಬೇಕೆಂದು ಸಲಹೆ ಮಾಡಬಯಸುತ್ತೇನೆ ನಾವು ಸಂಶೋದನೆಯಲ್ಲಿ ಎಷ್ಟು ಹಿಂದುಳಿದಿದ್ದೇವೆಂದರೆ, ಇವತ್ತು ರೇಷ್ಮೆ ಬೆಳೆಗೆ ಊಜಿ ನೊಣದ ಕಾಯಿಲೆ ಬಂದಿದೆ, ನಮ್ಮ ಕಡೆಗಳಲ್ಲಿ ಅಡಕೆ ಮತ್ತು ತೆಂಗು ಬೆಳೆಗೆ ಒಂದಲ್ಲ ಒಂದು ರೋಗ ಇದ್ದೇ ಇರುತ್ತದೆ. ತೋಟಗಾರಿಕೆ ಸಚಿವರಾದ ಶ್ರೀ ವೆಂಕಟಪ್ಪನವರೂ ಇಲ್ಲೇ ಇದ್ದಾರೆ. ತೆಂಗು ಮತ್ತು ಅಡಕೆ ಬೆಳೆಗೆ ತಗಲಿರುವ ರೋಗಕ್ಕೆ ಇಲಾಖೆಯವರು ಕೆಲವು ಔಷಧಿಗಳನ್ನು ಶಿಫಾರಸ್ಸು ಮಾಡಿದ್ದರೂ ಅದನ್ನು ತಡೆಗಟ್ಟುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ ಎನ್ನುವುದನ್ನು ಅವರು ಗಮನಿಸಬೇಕು. ಇದಕ್ಕೆಲ್ಲ ನಾವು ಸಂಶೋಧನೆಯಲ್ಲಿ ಹಿಂದುಳಿದಿರುವುದೇ ಕಾರಣವಾಗಿದೆ. ನಾವು ಸಂಶೋಧನೆಯಲ್ಲಿ ಮುಂದೆ ಬರದಿದ್ದರೆ ನಮ್ಮೆಲ್ಲ ಬೆಳೆ ಹಾಳಾಗುವ ಪರಿಸ್ಥಿತಿ

ಬಂದು ರೈತರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಆದುದರಿಂದ, ಸಂಶೋಧನೆ ಕಡೆಗೆ ಹೆಚ್ಚು ಗಮನ ನೀಡಬೇಕೆಂದು ಹೇಳಬಯಸುತ್ತೇನೆ.

ನಮ್ಮ ಭಾಗದಲ್ಲಿ ಬದು ಹಾಕಿಸುವುದು ಒಂದು ವಿಶೇಷವಾದ ಕೆಲಸ. ಆದರೆ, ನಮ್ಮ ಭಾಗದಲ್ಲಿ ಬದು ಹಾಕಿಸುವ ಮತ್ತು ಪಿಕ್ ಅಪ್ ಹಾಕಿಸುವ ಕೆಲಸ ಹೆಚ್ಚಾಗಿ ಕಾರ್ಯಗತವಾಗುತ್ತಿಲ್ಲ. ಹೀಗಾಗಿ, ನಮ್ಮ ಪ್ರದೇಶದಲ್ಲಿ ತೆಂಗು ಮತ್ತು ಅಡಿಕೆ ಬೆಳೆಯುತಕ್ಕ ಪ್ರದೇಶಗಳು ಬರಡಾಗುತ್ತಿವೆ.

ಶ್ರೀ ಕೆ. ಯಂಕಟಪ್ಪ.— ಇವತ್ತು ನನ್ನ ಇಲಾಖೆಯ ಮೇಲೆ ಚರ್ಚೆ ಇಲ್ಲ. ಬಹುಶಃ ಮಾನ್ಯ ಸದಸ್ಯರು ಇಂದು ಯಾವ ಇಲಾಖೆಯ ಚರ್ಚೆ ನಡೆಯುತ್ತಿದೆ ಎಂಬುದನ್ನು ಮರೆತಿರಬಹುದೆಂದು ಕಾಣುತ್ತದೆ !

ಶ್ರೀ ಟಿ. ಬಿ. ಜಯಚಂದ್ರ.— ನಮ್ಮ ಕಡೆ ಹೆಚ್ಚು ಬದು ಹಾಕಿಸಬೇಕಾಗಿದೆ ಮತ್ತು ಹೆಚ್ಚು ಹೆಚ್ಚಾಗಿ ಪಿಕ್ ಅಪ್ ಕೆಲಸಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಭೂಮಿಯಲ್ಲಿರುವ ಸಾರಾಂಶ ನಾಶವಾಗಿ ತೋಟಗಳು ಹಾಳಾಗುತ್ತವೆ. ಆದುದರಿಂದ, ಹೆಚ್ಚು ಹಣವನ್ನು ಒದಗಿಸಿ ಪಿಕ್–ಅಪ್ ಮತ್ತು ಬದುಗಳನ್ನು ಹಾಕಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ಮಣ್ಣು ಪರೀಕ್ಷೆ ಮಾಡತಕ್ಕದ್ದು. ನಾವು ಬಸ್ಸುಗಳಲ್ಲಿ ಹೋಗುತ್ತಿರಬೇಕಾದರೆ ಮಣ್ಣು ಪರೀಕ್ಷೆಗಾಗಿ ಇಟ್ಟಿರುವ ಮೊಬೈಲ್ ಯೂನಿಟ್‌ಗಳು ಹೋಗುತ್ತಿರುವುದನ್ನು ನೋಡುತ್ತಿರುತ್ತೇವೆ. ಅದರ ಬಗ್ಗೆ ವರದಿಯಲ್ಲೂ,ಅದು ಮಾಡಿದೆ, ಇದು ಮಾಡಿದೆ ಎಂದು ಹೇಳಲಾಗಿದೆ. ಒಟ್ಟಿನಲ್ಲಿ ಅದರ ಕೆಲಸ ಸಮರ್ಪಕವಾಗಿ ನಡೆದಿಲ್ಲವೆಂದು ಹೇಳಬೇಕಾಗಿದೆ. ಆದುದರಿಂದ, ನಾನಿದರ ಬಗ್ಗೆ ಒಂದು ಸಲಹೆ ಮಾಡಬಯಸುತ್ತೇನೆ. ಈ ಇಲಾಖೆ ಸಾಕಷ್ಟು ದೊಡ್ಡದಾಗಿದೆ. ನಿರ್ದೇಶಕರ ಕೈಗೆ, ಕಾಲಿಗೆ ಮತ್ತು ಬಾಲಕ್ಕೆಲ್ಲ ಜಂಟಿ ನಿರ್ದೇಶಕರಿದ್ದಾರೆ ಮತ್ತು ಜಂಟಿ ನಿರ್ದೇಶಕರ ಕೈ ಕೆಳಗೂ ಬಹಳ ಜನ ಅಧಿಕಾರಿಗಳಿದ್ದಾರೆ. ಬಹುಶ: ಕೈ ತುಂಬ ಸಂಬಳ ಇರುವ ಇಲಾಖೆ ನಮ್ಮ ಸರ್ಕಾರದಲ್ಲಿ ಇದೊಂದೇ ಎಂದು ನನಗನ್ನಿಸುತ್ತದೆ. ಆದರೂ ಈ ಇಲಾಖೆಯಲ್ಲಿ ಸರಿಯಾಗಿ ಕೆಲಸವಾಗುತ್ತಿಲ್ಲವೆಂದು ನಾನು ಖಡಾಖಂಡಿತವಾಗಿ ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲೆಲ್ಲ ಕ್ಲಾಸ್ 1 ಅಧಿಕಾರಿಗಳಿದ್ದಾರೆ. ಅವರೆಲ್ಲ ಸಮೀಕ್ಷೆ ನಡೆಸಿ, ಯಾವ ಯಾವ ಭಾಗಗಳಲ್ಲಿ ಯಾವ ಯಾವ ಮಣ್ಣು ಇದೆ ಮತ್ತು ಅಲ್ಲಿ ಯಾವ ಬೆಳೆ ಬೆಳೆಯಬಹುದೆಂಬ ಬಗ್ಗೆ ಒಂದು ಪಕ್ಷಿ ನೋಟವನ್ನು ತಯಾರಿಸಬೇಕೆಂದು ಹೇಳುತ್ತೇನೆ.

ಉಪ್ಪಿನಿಂದ ಕೂಡಿರತಕ್ಕ ಜಮೀನಿನಲ್ಲಿ ಯಾವ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯ? ರೈತನಿಗೆ ತನ್ನ ಜಮೀನಿನಲ್ಲಿ ಯಾವ ಬೆಳೆಯನ್ನು ಇಡಬೇಕು. ನನ್ನ ಜಮೀನಿನ ಮಣ್ಣು ಯಾವ ಸಾರಾಂಶದಿಂದ ಕೂಡಿದೆ ಎನ್ನುವ ಬಗ್ಗೆ ಮನೆ ಮನೆಗೆ ತಲುಪಿಸುವಂತ ವ್ಯವಸ್ಥೆಯಾಗಬೇಕು ರೈತರುಗಳಿಗೆ ಬೇಸಾಯದ ಬಗ್ಗೆ ಬಾಯಿಮಾತಾಗುವಂತ ಶೋಧನೆಗಳನ್ನು ಕಂಡುಹಿಡಿದರೆ ಇದರಿಂದ ಪ್ರಯೋಜನವಾಗುತ್ತದೆ. ಇಲ್ಲದೇ ಹೋದರೆ ನಿಮ್ಮ ಶೋಧನೆ ಬರೀ ಅಧಿಕಾರಿಗಳಿಗೆ ಮಾತ್ರ ಗೊತ್ತಿದ್ದರೆ ಸಾಲದು. ಇವತ್ತು ಗ್ರಾಮಸೇವಕರು, ವ್ಯವಸಾಯ ವಿಸ್ತರಣಾಧಿಕಾರಿಗಳು ಎಲ್ಲಿರುತ್ತಾರೆಂಬುದೇ ಗೊತ್ತಿಲ್ಲ. ಅವರಿಗೆ ಹೆಡ್ ಕ್ವಾರ್ಟರ್ಸ್ ಇಲ್ಲ, ಕಛೇರಿಗಳಿಲ್ಲ. ಅವರು ಕೊಟ್ಟಂತ ವರದಿಗಳ ಮೇಲೆ ನೀವು ಇರುತ್ತೀರಿ. ಅವರ ಮೇಲೆ ಹೆಚ್ಚಿನ ಗಮನಕೊಟ್ಟು ಅವರನ್ನು ಕಂಟ್ರೋಲಿನಲ್ಲಿಟ್ಟುಕೊಂಡು ಅವರಿಂದ ಕೆಲಸ ತೆಗೆದುಕೊಳ್ಳದೇ ಇದ್ದರೆ ಇಲಾಖೆಗೂ ಕೆಟ್ಟ ಹೆಸರು ಬರುತ್ತದೆ. ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆಂದು ಹೇಳುತ್ತೇನೆ.

ಸಂಶೋಧನೆ ವಿಷಯದಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದ್ದೀರಿ. ನನ್ನ ಕ್ಷೇತ್ರದ ಚಿಕ್ಕನಹಳ್ಳಿಯಲ್ಲಿ ಒಂದು ಫಾರಂ ಇದೆ. ಸಾಕಷ್ಟು ಹಣವನ್ನು ಕೂಡ ಖರ್ಚು ಮಾಡಿದ್ದಾರೆ, ನಾನು ಸ್ವಾಗತಿಸುತ್ತೇನೆ. ಹಿಂದೆ ಮಾನ್ಯ ಕೆ.ಹೆಚ್. ರಂಗನಾಥರವರು ಮಂತ್ರಿಗಳಾಗಿದ್ದಾಗ ಒಂದು ಕಾಗದ ಬರೆದಿದ್ದೆ. ಫಾರಂನ ಪಕ್ಕದಲ್ಲಿ ಸರ್ಕಾರಿ ಜಮೀನು ಇದೆ, ಅದನ್ನು ಉಪಯೋಗಿಸಿಕೊಂಡು ಒಳ್ಳೆಯ ರೀತಿಯಲ್ಲಿ ಫಾರಂ ಅಭಿವೃದ್ಧಿಪಡಿಸಬೇಕೆಂದು ತಿಳಿಸಿದ್ದೆ, ಇಲ್ಲಿಯವರೆಗೂ ಅದು ಕಾರ್ಯಗತವಾಗಿಲ್ಲ, ದಯವಿಟ್ಟು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಇವತ್ತು ಅಗ್ರಿಕಲ್ಚರ್ ಟ್ರೈನಿಂಗ್ ಕಾಲೇಜ್ ಮಾಡಿದ್ದಾರೆ. ಸೆಲೆಕ್ಷನ್ ಕಮಿಟಿಯಲ್ಲಿ ನಾನು ಕೂಡ ಇದ್ದೇನೆ. ಇವತ್ತು ಏನಾಗಿದೆ ಅಂದರೆ, ಓದಿದರೆ ಉದ್ಯೋಗ ಸಿಕ್ಕುವುದಿಲ್ಲ. ಆದಷ್ಟು ಬೇಸಾಯವನ್ನು ಅಭಿವೃದ್ಧಿಗೊಳಿಸಬೇಕೆಂಬ ಮನೋಭಾವನೆ ಯುವಕರಲ್ಲಿ

ಬಂದಿದೆ. ಆದುದರಿಂದ ತರಬೇತಿ ಕಾಲದಲ್ಲಿ ಕೊಡತಕ್ಕ ಸ್ಟೈಫಂಡನ್ನು ಜಾಸ್ತಿ ಮಾಡಿ, ರೈತರುಗಳಿಗೆ ಹೆಚ್ಚಿನ ತಿಳಿವಳಿಕೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೃಷಿ ವಿಜ್ಞಾನಕಾಲೇಜು ಏನಿದೆ, ಅದು ವ್ಯವಸಾಯ ಇಲಾಖೆಗಾಗಿ, ವ್ಯವಸಾಯ ಮಾಡತಕ್ಕ ವರಿಗಾಗಿ ಇದೆಯೋ ಎಂದು ನೋಡಿದಾಗ. ನಮಗೆ ಹಾಗೆ ಅನ್ನಿಸುವುದಿಲ್ಲ. ಅಲ್ಲಿ ವ್ಯಾಸಂಗ ಮಾಡುವಂತಹ ಮಕ್ಕಳನ್ನು ನೋಡಿದರೆ ವ್ಯವಸಾಯ ಮಾಡತಕ್ಕವರ ಮಕ್ಕಳು ಕಾಣುವುದೇ ಇಲ್ಲ. ಅಲ್ಲಿರತಕ್ಕವರ ಅಧಿಕಾರಿಗಳ ಮಕ್ಕಳು. ಬೇರೆ ರಾಜ್ಯದಿಂದ ಬಂದಿರತಕ್ಕ ಹುಡುಗರು ಇದ್ದಾರೆ. ತಾವು ಉತ್ತರ ಕೊಡುವಾಗ ರೈತರ ಮಕ್ಕಳಿಗೆ ಆದ್ಯತೆ ಕೊಡುತ್ತೇವೆ. ೧೦ ಪರ್ಸೆಂಟ್ ಎಕ್ಸಟ್ರಾ ಮಾರ್ಕ್ಸ್ ಕೊಡುತ್ತೇವೆಂದು ಹೇಳಬಹುದು. ನೀವು ಚಾಪೆ ಕೆಳಗೆ ತೂರಿದರೆ ಅಧಿಕಾರಿಗಳು ರಂಗೋಲಿ ಕೆಳಗೆ ತೂರತಕ್ಕವರು ಇದ್ದಾರೆ. ಪ್ರೊ. ಬಂಗ, ಇವರು ಆಂಧ್ರದಿಂದ ಬಂದಿರತಕ್ಕವರು ಇವರ ಮಗನಿಗೆ ಸೀಟು ಕೊಟ್ಟಿದ್ದಾರೆ. ರೈತನ ಮಗ ಎಂದು ಸರ್ಟಿಫಿಕೇಟ್ ಕೊಟ್ಟು ಸೀಟು ಕೊಟ್ಟಿದ್ದಾರೆ. ಈ ವಿಷಯ ನನ್ನ ಗಮನಕ್ಕೆ ಬಂದಮೇಲೆ ಮಾನ್ಯ ಮುಖ್ಯಮಂತ್ರಿಯವರನ್ನು ಕಂಡು ಬಹಳ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸಬೇಕೆಂದು ಕೇಳಿಕೊಂಡಮೇಲೆ. ರಿಪೋರ್ಟು ತರಿಸಿ ಕೊಟ್ಟಿರತಕ್ಕ ಸೀಟನ್ನು ಕಿತ್ತು ಹಾಕಿದರು. ಇಲ್ಲಿ ಕಿತ್ತುಹಾಕಿದ ಮೇಲೆ ಕೋರ್ಟಿನಿಂದ ಸ್ಟೇ ತಂದು, ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಮುಂದುವರಿದಿದ್ದಾನೆ. ಎಷ್ಟೋ ಜನ ಐ.ಎ.ಎಸ್. ಆಫೀಸರ್ ಮಕ್ಕಳು ಕಾಲೇಜಿನಲ್ಲಿದ್ದಾರೆ. ಮಾನ್ಯ ಮಂತ್ರಿಗಳಿಗೆ ಹೆಸರುಗಳನ್ನು ಬೇಕಾದರೆ ಕೊಡುತ್ತೇನೆ. ಐ.ಎ.ಎಸ್. ಆಫೀಸರ್ ಮಕ್ಕಳು ರೈತರ ಕೋಟಾದಲ್ಲಿ ಸೀಟು ತೆಗೆದು ಕೊಂಡಿದ್ದಾರೆ. ಉತ್ತರ ಪ್ರದೇಶದಿಂದ ಬಂದಿರತಕ್ಕ ಡೆಪ್ಯುಟಿ ಕಮೀಷನರ್ ಮಗನೊಬ್ಬನಿಗೆ ರೈತರ ಕೋಟದಲ್ಲಿ ಸೀಟು ತೆಗೆದುಕೊಂಡಿದ್ದಾರೆ. ಕಾಲೇಜಿನ ಆಡಳಿತದಲ್ಲಿ ಅಡ್ಮಿಷನ್ ಮಾಡಿಕೊಳ್ಳುವುದರಲ್ಲಿ ಮೋಸ ನಡೆಯುತ್ತಿದೆ. ಹೋದಸಾರಿ ಹೆಚ್ಚು ಪರ್ಸೆಂಟೇಜ್ ರೈತರ ಮಕ್ಕಳಿಗೆ ಸೀಟು ಕೊಡಿಸುವುದಕ್ಕೆ ಶಿಫಾರಸ್ಸು ಮಾಡಿದೆ, ಆದರೆ. ನಿಜವಾದ ರೈತರ ಹುಡುಗರಿಗೆ ಸೀಟು ಸಿಗಲಿಲ್ಲವೆಂದು ಬಹಿರಂಗವಾಗಿ ಹೇಳುತ್ತಿದ್ದೇನೆ, ಕಾರಣ ಏನು ಎಂದರೆ ಅಲ್ಲಿ ಹಣದ ವಹಿವಾಟು ನಡೆಯುತ್ತಿದೆ. ಇದನ್ನು ತಪ್ಪಿಸುವಂತ ಕೆಲಸವನ್ನು ಮೊದಲು ಮಾಡಬೇಕು. ವೇಸ್ಟೆಡ್ ಇಂಟರಸ್ಟ್ ಇರತಕ್ಕ ಪಾರ್ಟಿಯವರಿಗೆ ಯಾವುದಾದರೂ ಒಂದು ರೂಪದಲ್ಲಿ ಸೀಟು ಕೊಡುವುದನ್ನು ತಪ್ಪಿಸುವ ದಿಸೆಯಲ್ಲಿ ಮಾನ್ಯ ಮಂತ್ರಿಯವರು ಮನಸ್ಸು ಮಾಡಿದರು ಪರಿಸ್ಥಿತಿ ಸುಧಾರಿಸುವುದೆಂದು ನಾನು ಸಲಹೆ ಕೊಡುತ್ತೇನೆ. ಸ್ವಾಮಿ, ರೈತರ ಬಗ್ಗೆ ಸಾಕಷ್ಟು ಮಾತನಾಡುತ್ತೀರಿ, ಆದರೆ ಅವನ ಅಭಿವೃದ್ಧಿ ಕಾರ್ಯತಃ ಕಾರ್ಯಗತವಾಗಿಲ್ಲ ಇವತ್ತು ರಾಜ್ಯದಲ್ಲಿ ಶಾಶ್ವತವಾದ ಕ್ಷಾಮ ಇದೆ. ಕ್ಷಾಮ ನಿವಾರಣೆ ಮಾಡಬೇಕಾದರೆ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ಹೆಚ್ಚು ಮಾಡಬೇಕು. ರಾಜ್ಯದಲ್ಲಿ ಸುಮಾರು ೨೭ ಲಕ್ಷ ಹೆಕ್ಟೇರು ಭೂಮಿ ನೀರಾವರಿಯಾಗತಕ್ಕಂಥಾದ್ದು ಇದೆ. ಅಣೆಕಟ್ಟುಗಳನ್ನು ಕಟ್ಟಿದ್ದರೆ ಸಾಲದು. ಕಾಲುವೆಗಳ ಕೆಲಸವನ್ನು ಕಾಲಕ್ಕೆ ಸರಿಯಾಗಿ ಮಾಡದೇಹೋದರೆ ಉಪಯೋಗವಾಗುವುದಿಲ್ಲ. ಕಾಲುವೆಗಳ ಕೆಲಸವನ್ನು ಬೇಗ ಮುಗಿಸಿ ರೈತರಿಗೆ ನೀರಿನ ಅನುಕೂಲ ಮಾಡಿಕೊಟ್ಟರೆ, ಆಹಾರಕೋಸ್ಕರ ಹಾಹಾಕಾರ ಪಡುವುದು ತಪ್ಪುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರಸರ್ಕಾರದಲ್ಲಿ ಬಹಳ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿರತಕ್ಕ ಪ್ರಭಾವಶಾಲಿಯಾಗಿರತಕ್ಕವರಾಗಿದ್ದಾರೆ. ಗಂಗಾ, ಕಾವೇರಿ ಸಂಗಮ ಮಾಡುವ ವಿಷಯವನ್ನು ಹಿಂದೆ ಪತ್ರಿಕೆಗಳಲ್ಲಿ ಕೇಳಿದ್ದೆವು. ಇದಕ್ಕಾಗಿ ಎಷ್ಟು ಕೋಟಿ ಖರ್ಚಾದರೂ ಚಿಂತೆಯಿಲ್ಲ. ೧೦೦ ವರ್ಷಗಳಾದರೂ ಚಿಂತೆಯಿಲ್ಲ ಬಹಳ ಉತ್ತಮವಾದ ಯೋಜನೆ ಇದನ್ನು ಮಾಡಿದರೆ ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡನ್ನೂ ಕೂಡ ಹೋಗಲಾಡಿಸಿ, ಆಹಾರ ಸ್ವಾವಲಂಬನೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ತಾವು ಈ ಯೋಜನೆಯ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಈ ಇಲಾಖೆಯನ್ನು ಹೊತ್ತಿರತಕ್ಕಂಥ ಮಾನ್ಯ ಮಂತ್ರಿಗಳು ಮುಖ್ಯಮಂತ್ರಿಗಳ ಬೆಂಬಲಕ್ಕಿದ್ದು ಯುವಕರೂ ವಿಶೇಷವಾದ ಆಸಕ್ತಿಯುಳ್ಳವರೂ ಆಗಿದ್ದಾರೆ. ಈ ಒಂದು ಕೆಲಸವನ್ನು ಮಾಡಿದರೆ. ಪಕ್ಷಕ್ಕೂ. ಸರ್ಕಾರಕ್ಕೂ ಹಾಗೂ ನಾಯಕರಿಗೂ ಒಳ್ಳೆಯ ಹೆಸರು ಬರುತ್ತದೆಂದು ಹೇಳುತ್ತೇನೆ. ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆ ಶಾಶ್ವತವಾಗಿ ಕ್ಷಾಮಕ್ಕೆ ಒಳಗಾಗಿವೆ. ಇದಕ್ಕೆ ನಾನು ಹಿಂದೆ ಕೂಡ ಒಂದು ಸಲಹೆ ಮಾಡಿದ್ದೆ, ಭದ್ರಾ ಮೇಲ್ದಂಡೆಯಿಂದ ಈ ಎರಡು ಜಿಲ್ಲೆಗಳಿಗೆ ನೀರಾವರಿ ಸೌಕರ್ಯ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು. ನಮ್ಮ ಮುಖ್ಯಮಂತ್ರಿಗಳು ವಿಶೇಷವಾದ ಆಸಕ್ತಿಯನ್ನು ವಹಿಸಿ, ೬ನೇ ಯೋಜನೆಯಲ್ಲಿ ಈ ಕೆಲಸವನ್ನು ಸೇರಿಸುವ ದಿಕ್ಕಿನಲ್ಲಿ ಯಶಸ್ವಿಯಾಗಿದ್ದಾರೆ. ಈ ಸಾಲಿ

ನಲ್ಲಿ ೧೦ ಕೋಟಿ ರೂಪಾಯಿ ದುಡ್ಡನ್ನು ಕೂಡ ಒದಗಿಸಿದ್ದಾರೆ ನಿಜವಾಗಿಯೂ ಮಾನ್ಯಮುಖ್ಯಮಂತ್ರಿಗಳ ಪ್ರಯತ್ನದಿಂದ ನಮಗೆ ಬಹಳ ಸಂತೋಷವಾಗಿದೆ. ನಾನು ಸರ್ಕಾರವನ್ನು ಈ ಯೋಜನೆಗೆ ಹೆಚ್ಚು ಹೆಚ್ಚು ಹಣ ಒದಗಿಸಿ, ಆದಷ್ಟು ಜಾಗ್ರತೆ ಕಾರ್ಯಗತಗೊಳಿಸಬೇಕೆಂದು ಒತ್ತಾಯ ಮಾಡುತ್ತೇನೆ. ಈ ಯೋಜನೆ ಆಗುವುದರೊಳಗೆ ನಾವು ಉಳಿಯುತ್ತೇವೆಯೋ ಇಲ್ಲವೋ, ಮುಂದಿನ ಪೀಳಿಗೆಗಾದರೂ ಇದರ ಅನುಕೂಲ ದೊರೆಯಲಿಯೆಂದು ಹೇಳುತ್ತೇನೆ.

ಇನ್ನು ಚಿಕ್ಕನಾಯಕನಹಳ್ಳಿ, ಗುಬ್ಬಿ ಹಾಗೂ ಶಿರಾ ತಾಲ್ಲೂಕುಗಳಲ್ಲಿ ಅಂತರಜಲ ಸಾಕಷ್ಟು ಪ್ರಮಾಣದಲ್ಲಿದೆ. ಲಿಫ್ಟ್ ಇರಿಗೇಷನ್ ಮೂಲಕ ಬಳಸುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಬಹಳಷ್ಟು ಬಡ ರೈತರಿಗೆ ಸಹಾಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಸಹಕಾರ ಇಲಾಖೆಯ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಂತ್ರಿಯವರು ಬಹಳ ಅನುಭವಶಾಲಿಗಳು. ಅವರಿಗೆ ನಾವು ಏನೂ ಹೇಳಿದರೂ ಚಿಕ್ಕದೇ, ಸಹಕಾರ ಕ್ಷೇತ್ರದ ಎಲ್ಲ ವಿಷಯಗಳೂ ಅವರಿಗೆ ಗೊತ್ತಿದೆ. ಇಂಥ ಒಬ್ಬ ಅನುಭವಶಾಲಿ ಮಂತ್ರಿಗಳಿದ್ದರೂ ಕೂಡ ಅವ್ಯವಹಾರಗಳು ನಡೆಯುತ್ತವೆ, ಇದಕ್ಕೆ ಕಾರಣ, ಮಾನ್ಯ ಮಂತ್ರಿಗಳು ಹೆಚ್ಚಿನ ಗಮನಹರಿಸಿಲ್ಲವೆಂದಲ್ಲ. ಅವರ ಒಂದು ಧಾರಾಳ ಮನಸ್ಸಿನಿಂದ ಸಹಕಾರ ಇಲಾಖೆಯಲ್ಲಿ ಸಮರ್ಪಕವಾಗಿ ಕೆಲಸಗಳಾಗುತ್ತಿಲ್ಲ, ಇದು ಅವರಿಗೂ ಗೊತ್ತಿದೆ, ನಾವು ಅನೇಕ ಸಾರಿ ಪ್ರಶ್ನೆಗಳನ್ನು ಹಾಕಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮುಖ್ಯವಾಗಿ ಲೆಕ್ಕಪರಿಶೋಧನಾ ಇಲಾಖೆ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡಬೇಕು. ಮಿಸ್‌ಅಪ್ರೋಪ್ರಿಯೇಷನ್ ಒಳಗಾಗಿರತಕ್ಕ ಒಬ್ಬ ವ್ಯಕ್ತಿಯ ಬಗ್ಗೆ ನಾನು ಒಂದು ಸಾರಿ ವಿಧಾನ ಸಭೆಯಲ್ಲಿ ಚರ್ಚೆ ಮಾಡಿದಾಗ, ಆ ವ್ಯಕ್ತಿ, ಸ್ವಾಮಿ, ನನ್ನ ಹತ್ತಿರ ಬಂದು ಹೇಳಿದ, ನೀವು ಏತಕ್ಕೆ ನನ್ನ ಹೆಸರನ್ನು ಶಾಸನಸಭೆಯಲ್ಲಿ ತರುತ್ತೀರಿ, ನನ್ನನ್ನು ಏನೂ ಮಾಡುವುದಕ್ಕಾಗುವುದಿಲ್ಲವೆಂದು, ಇವರೆಲ್ಲಾ ಆಡಿಟ್‌ನಲ್ಲಿ ಸರಿ ಮಾಡಿಕೊಂಡಿರುತ್ತಾರೆ. ಆಡಿಟ್‌ನವರಿಗೆ ೫ ಪರ್ಸೆಂಟ್ ಕೊಟ್ಟರೆ, ಯಾವರೀತಿ ಬೇಕಾದರೂ ವರದಿ ಕೊಡುತ್ತಾರೆ. ತಮ್ಮ ಇಲಾಖೆಯಲ್ಲಿ ವಿಜಿಲೆನ್ಸ್ ಇದ್ದರೆ ಒಳ್ಳೆಯದೆಂದು ಹೇಳುತ್ತೇನೆ. ಆಡಿಟ್ ಮಾಡಿರತಕ್ಕದ್ದು ಸರಿಯೋ ತಪ್ಪೋ ಎನ್ನುವುದನ್ನು ವಿಚಾರ ಮಾಡುವಂತ ವ್ಯವಸ್ಥೆಯಿರಬೇಕು. ಬಹುಶಃ ಇದು ಇದ್ದರೆ ಅಲ್ಲಿ ದುಡ್ಡು ತಿನ್ನಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ತಾವು ಆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ಇಲಾಖೆಯವರು ಯಾವುದೇ ರೀತಿಯ ಕಂಟ್ರೋಲ್ ಇಲ್ಲದ ಮಟ್ಟದಲ್ಲಿ ಸಾಗುತ್ತಿದ್ದಾರೆ. ನಮ್ಮ ಸೊಸೈಟಿಗಳು ಪಿ.ಎಲ್.ಡಿ. ಬ್ಯಾಂಕುಗಳ ಬಗ್ಗೆ ಕಥೆಯನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ಗ್ರಾಮಾಂತರ ಪ್ರದೇಶದ ಜನರಿಗೆ ಎಸೆನ್‌ಷಿಯಲ್ ಕಮಾಡಿಟೀಸ್ ಸಪ್ಲೈ ಮಾಡತಕ್ಕಂಥ ಏಜೆಂಟರುಗಳಿಂದ ಸರಿಯಾಗಿ ವಿತರಣೆಯಾಗುವುದಿಲ್ಲ. ಇಲಾಖೆಯವರು ಕೊಡತಕ್ಕ ರಿಪೋರ್ಟ್ ನೋಡಿದರೆ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಕೊಡುತ್ತಾರೆ. ಎರಡು ಮೂರು ವರ್ಷದ ಚರಿತ್ರೆಯನ್ನು ತೆಗೆದುಕೊಂಡರೆ ಅವರ ಕೆಲಸ ಖಂಡಿತವಾಗಿ ಸಮರ್ಪಕವಾಗಿ ನಡೆಯುತ್ತಿಲ್ಲ. ರೈತರಿಗೆ ಯಾವುದೇ ಸೌಲಭ್ಯಗಳು ನೇರವಾಗಿ ಸಿಕ್ಕುತ್ತಿಲ್ಲ. ಇಲ್ಲದೇ ಇರತಕ್ಕ ಕರಪ್ಷನ್‌ಗಳು ನಡೆಯುತ್ತಿದೆ. ಇವೊತ್ತು ಈ ಒಂದು ಇಲಾಖೆಯನ್ನು ಉದ್ಧಾರ ಮಾಡುವುದಾದರೆ, ಆದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡುವುದಾದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಮೂಲಭೂತವಾಗಿ ಡಿಸ್ಟ್ರಿಬ್ಯೂಷನ್ ಸಿಸ್ಟಂ ಇರತಕ್ಕದ್ದು ಏಜೆಂಟ್‌ಗಳಿಂದ. ಅವರಿಂದ ವಿತರಣೆ ಸರಿ ಇಲ್ಲದೆ ಬಹಳ ತೊಂದರೆ ಇದೆ. ಇದರ ಬಗ್ಗೆ ತೀವ್ರವಾಗಿ ಗಮನಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸೊಸೈಟಿಗಳು ಏನಿವೆ ಅವುಗಳೆಲ್ಲಾ ರಾಜಕೀಯ ಕ್ಷೇತ್ರಗಳಾಗಿವೆ. ರಾಜಕೀಯ ಕೇಂದ್ರವಾಗಿರತಕ್ಕ ಸೊಸೈಟಿಗಳನ್ನು ರಾಜಕೀಯ ಪರಿಮಿತಿಯಿಂದ ರಾಜಕೀಯ ಹಸ್ತಕ್ಷೇಪವಿಲ್ಲದಂತೆ ಮಾಡಿದರೆ ಸಹಕಾರ ಕ್ಷೇತ್ರ ಯಾವ ದಿಸೆಯಲ್ಲಿ ಸಾಗಬೇಕೆಂದು ಮಾಡಿದ್ದೀರೋ ಆ ದಿಸೆಯಲ್ಲಿ ಸಾಗಲಿಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಅದು ಆ ದಿಸೆಯಲ್ಲಿ ಸಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇವೊತ್ತು ಅಲ್ಲಿ ದುಡ್ಡು ತಿನ್ನುವಂತಹವನೆ ಪುಣ್ಯವಂತನಾಗಿದ್ದಾನೆ. ಇವೊತ್ತು ಅವರನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಆ ರೀತಿಯಾಗಿದೆ. ಬಹಳ ಸೊಸೈಟಿಗಳಲ್ಲಿ ದುಡ್ಡು ತಿಂದಂಥ ಜನರು ಸುಖವಾಗಿದ್ದಾರೆ. ಅಂತಹವರ ಬಗ್ಗೆ ಸರ್ಕಾರ ಹೆಚ್ಚಿನ ಗಮನಕೊಡಬೇಕೆಂದು ಹೇಳುತ್ತೇನೆ. ಇನ್ನು ಡಿ.ಸಿ.ಸಿ. ಬ್ಯಾಂಕುಗಳಲ್ಲಿ, ತಾಲೂಕುಗಳಲ್ಲಿ ಸಾಲವನ್ನು ಕೊಡತಕ್ಕ ವ್ಯವಸ್ಥೆ ಏನಿದೆ ಅದರಲ್ಲಿ ಏನಾಗುತ್ತದೆಂದರೆ, ರೈತರು ಬೇಸಿಗೆ ಕಾಲಕ್ಕೆ ಅರ್ಜಿ ಹಾಕಿದರೆ ಮಳೆಗಾಲಕ್ಕೆ

ದುಡ್ಡು ಕೊಡುತ್ತಾರೆ. ಆಗ ಅವನು ಆ ದುಡ್ಡನ್ನು ವ್ಯವಸಾಯಕ್ಕಾಗಿ ಉಪಯೋಗಿಸಲಿಕ್ಕೆ ಆಗುವುದಿಲ್ಲ. ಆಗ ಅವನು ಆ ದುಡ್ಡನ್ನು ತನ್ನ ಮಗಳ ಮದುವೆಗೋ ಅಥವಾ ಇನ್ನಾವುದಕ್ಕೋ ಖರ್ಚು ಮಾಡಿಕೊಂಡು ಕೊನೆಗೆ ನಿಮ್ಮ ಸಾಲವನ್ನು ವಾಪಸ್ಸು ಕೊಡಲಿಕ್ಕೆ ಆಗದೆ, ತನ್ನ ಮನೆಮಂತಗಳನ್ನು ಹರಾಜು ಹಾಕಿಸಿಕೊಳ್ಳುವ ಪರಿಸ್ಥಿತಿಗೆ ಬಂದಿದೆ. ಆತ ಮರುಪಾವತಿ ಏತಕ್ಕೆ ಮಾಡಲಿಕ್ಕೆ ಆಗುವುದಿಲ್ಲ ಎಂದರೆ ಅದು ಸರ್ಕಾರದ ತಪ್ಪು ಎಂದು ನಾನು ಹೇಳುತ್ತೇನೆ. ಈ ಬಗ್ಗೆ ನಾನು ಒಂದು ಸಲಹೆ ಮಾಡುತ್ತೇನೆ ನೀವು ಕೊಡತಕ್ಕ ಸಾಲವನ್ನು ಬೇಗ ಕೊಡುವಂಥ ಏರ್ಪಾಡು ಮಾಡಬೇಕು. ಆತ ಅರ್ಜಿ ಹಾಕಿದ್ದರೆ ಮುಂಗಾರು ಬೆಳೆಗೆ ಸಾಲ ಕೊಡುವುದಾಗಿದ್ದರೆ ಅದನ್ನು ಬೇಗ ಕೊಡಿ. ಇವೊತ್ತು ಬ್ಯಾಂಕಿನವರು ಸಾಲವನ್ನು ಕೊಡಬೇಕಾದರೆ ಅಲ್ಲಿ ಎನ್‌ಕ್ವಯಿರಿ ಮಾಡಬೇಕು ಇಲ್ಲಿ ಎನ್‌ಕ್ವಯಿರಿ ಮಾಡಬೇಕು ಎನ್ನುವುದೆಲ್ಲಾ ಇರುತ್ತದೆ ಇದನ್ನು ತಪ್ಪಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಹಿಂದಿನ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಪಂಚಾಯಿತಿಗಳು ಇರತಕ್ಕ ವ್ಯಾಪ್ತಿಯಲ್ಲಿ ಒಂದೊಂದು ಸೊಸೈಟಿ ಇರಬೇಕೆಂದು ಮಾಡಿದ್ದರು. ಅದು ಆದಮೇಲೆ ಮಾನ್ಯ ಶ್ರೀಕಂಠಯ್ಯನವರು ಅಧಿಕಾರ ವಹಿಸಿಕೊಂಡ ಮೇಲೆ ಒಂದು ಸ್ಟೇಟ್‌ಮೆಂಟ್ ಕೊಟ್ಟು ಎಲ್ಲೆಲ್ಲಿ ಹೆಡ್‌ಕ್ವಾರ್ಟರ್ಸ್ ಇವೆ ಅಲ್ಲಿ ಇರತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದರು ಅದು ಇನ್ನು ಕಾರ್ಯಗತವಾಗಿಲ್ಲ ಎಂದು ಕಾಣುತ್ತದೆ. ಅದರ ಬಗ್ಗೆ ಗವರ್ನ್‌ಮೆಂಟ್ ಆರ್ಡರ್ ಇಷ್ಯೂ ಆಗಿದ್ದರೂ ಸೊಸೈಟಿಗಳು ಬೈಫರ್‌ಕೇಟ್ ಆಗಿಲ್ಲ. ಅದನ್ನು ಬಹು ಬೇಗ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಶಿರಾ ತಾಲ್ಲೂಕಿನಲ್ಲಿರತಕ್ಕಂತಹ ಸೊಸೈಟಿಗೆ ಯಾರು ಯಾರೂ ಡೈರೆಕ್ಟರ್ ಆಗಿರುತ್ತಾರೆ, ಯಾರು ಪ್ರೆಸಿಡೆಂಟ್ ಆಗಿರುತ್ತಾರೆ ಒಂದೂ ಗೊತ್ತಾಗುವುದಿಲ್ಲ. ಅಲ್ಲಿ ಜನರಲ್ ಬಾಡಿ ಆಗುವುದಿಲ್ಲ, ಅಂತೂ ಏನೋ ಒಂದು ಮಾಡುತ್ತಾರೆ. ಇನ್ನು ನಮ್ಮ ಮುಖ್ಯಮಂತ್ರಿಗಳು ಕೆ. ಹೆಚ್. ಪಾಟೀಲ್ ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಈ ಸಹಕಾರ ಮಸೂದೆ ಏನಿದೆ ಅದನ್ನು ಬದಲಾವಣೆ ಮಾಡಿ ಉತ್ತಮ ಮಸೂದೆಯನ್ನು ತರಲಿಕ್ಕೆ ಮಾಡಿದ್ದಾರೆ. ಅದನ್ನು ಆದಷ್ಟು ಬೇಗ ತಂದರೆ ನಾವು ಮಾನ್ಯ ಮಂತ್ರಿಗಳಿಗೆ ಚಿರಋಣಿಯಾಗಿರುತ್ತೇವೆ. ಆ ಕೆಲಸವನ್ನು ಬೇಗ ಮಾಡಬೇಕೆಂದು ಹೇಳುತ್ತೇನೆ. ಇನ್ನು ತೂಕ ಮತ್ತು ಅಳತೆ ಇಲಾಖೆಯು ನಿಮ್ಮ ವ್ಯಾಪ್ತಿಯಲ್ಲಿಯೇ ಬರುತ್ತದೆ. ಅಲ್ಲಿಯೂ ಕೂಡ ಅವರು ಮಾಡತಕ್ಕ ಕೆಲಸ ಖಂಡಿತವಾಗಿಯೂ ಸಮರ್ಪಕವಾಗಿಲ್ಲ. ಅಲ್ಲಿಯೂ ಕೂಡ ಅನ್ಯಾಯ ಮತ್ತು ಮೋಸ ನಡೆಯುತ್ತಿದೆ. ನಿಮ್ಮ ಇಲಾಖೆಯವರು ಆಸಕ್ತಿ ವಹಿಸಿ ಕೆಲಸ ಮಾಡಿದ್ದರೆ ಇಷ್ಟೊಂದು ಅನ್ಯಾಯ ಆಗುತ್ತಿರಲಿಲ್ಲ. ಮೊನ್ನೆ ನಾನು ಒಂದು ಸಿಲ್ಕ್ ಎಂಪೋರಿಯಮ್‌ ಹೋಗಿದ್ದಾಗ ಅಲ್ಲಿ ಸೀರೆ ಮಾರಾಟ ಮಾಡತಕ್ಕವರು ಇದು ೬ ಮೀಟರ್ ಇದೆ ಎಂದು ಹೇಳುತ್ತಾರೆ. ಅದನ್ನು ಅಳತೆ ಮಾಡಿದರೆ ನಾಲ್ಕೂವರೆ ಅಥವಾ ಐದು ಮೀಟರ್ ಇರುತ್ತದೆ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟವರು ಒಬ್ಬರು ಅದರ ಬಗ್ಗೆ ರಿಪೋರ್ಟ್ ಮಾಡಿ ಅದನ್ನು ವಿಜಿಲೆನ್ಸ್‌ನಿಂದ ಚೆಕ್ ಮಾಡಿಸಿದರು. ಇವೊತ್ತು ಕಚ್ಚಾ ಮಾಲುಗಳನ್ನು ತಯಾರು ಮಾಡಿದಾಗ ಅದು ಎಷ್ಟು ಮೀಟರ್ ಇದೆ, ಅದರ ಬೆಲೆ ಎಷ್ಟು ಎನ್ನುವುದನ್ನು ಅದರ ಮೇಲೆ ಅಚ್ಚು ಹಾಕಿಸಿದರೆ, ಅನುಮಾನ ಬಂದಾಗ ಅದರ ಬಗ್ಗೆ ವಿಚಾರಣೆ ಮಾಡಲಿಕ್ಕೆ, ಶಿಕ್ಷೆಗೆ ಗುರಿ ಮಾಡಲಿಕ್ಕೆ ಅವಕಾಶ ಇರುತ್ತದೆ. ಇಲ್ಲದೇ ಹೋದರೆ ಬಹಳ ಕಷ್ಟ ಅನಂತರ ಸಿಲ್ಕ್ ಎಂಪೋರಿಯಮ್ ಅವರನ್ನು ಅವೊತ್ತು ಚೆಕ್ ಮಾಡಿಸಿದ್ದರ ಬಗ್ಗೆ ಏನಾಯಿತು ಎಂದು ಕೇಳಿದರೆ, ನಾವೆಲ್ಲಾ ಸರಿಮಾಡಿಕೊಂಡೆವು ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಅದರ ಬಗ್ಗೆ ಎನ್‌ಕ್ವಯಿರಿ ಮಾಡಿ ಎಂದು ಬಂದಿರತಕ್ಕದ್ದು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಕ್ರಿಮಿನಲ್ ಕೇಸ್ ಹಾಕಿದ್ದೀರಾ? ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ವರ್ತಕರು ಪ್ರತಿ ತಿಂಗಳು ಇಷ್ಟು ಅಂತ ಸ್ಪೆಷಲ್ ಪೇಮೆಂಟ್ ಮಾಡುತ್ತಿರುತ್ತಾರೆ. ಆದ್ದರಿಂದ ಯಾರೂ ಅವರನ್ನು ಚೆಕ್ ಮಾಡುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಅದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಇವೊತ್ತು ಮಾರುಕಟ್ಟೆ ಇಲಾಖೆ ಮುಖ್ಯವಾದಂಥ ಇಲಾಖೆ. ರೈತರಿಗೆ ಸಂಬಂಧಪಟ್ಟಂಥ ಇಲಾಖೆ. ಅದರ ಜವಾಬ್ದಾರಿಯನ್ನು ನಮ್ಮ ಯುವಕ ಮಂತ್ರಿಗಳು ಹೊತ್ತಿದ್ದಾರೆ. ಅವರು ಅದರ ಜವಾಬ್ದಾರಿಯನ್ನು ಹೊತ್ತಮೇಲೆ ಬಹಳ ಹೆಚ್ಚಿನ ಸುಧಾರಣೆಯಾಗಿದೆ. ನಾವು ಅದರ ಬಗ್ಗೆ ಅಲ್ಲಗಳೆಯಬೇಕಾದ್ದು ಏನೂ ಇಲ್ಲ. ಯಶವಂತಪುರ ಮಾರ್ಕೆಟ್‌ಯಾರ್ಡಿನ ವಿಚಾರದಲ್ಲಿ ಹತ್ತಾರು ವರ್ಷಗಳಿಂದಲೂ ಇತ್ಯರ್ಥವಾಗದೇ ಇದ್ದಂತಹ ಕೇಸನ್ನು ಸುಪ್ರೀಮ್ ಕೋರ್ಟಿನಲ್ಲಿ ಅವರ ಪರವಾಗಿ ವಕೀಲರನ್ನು ಕಳುಹಿಸಿ ಇತ್ಯರ್ಥ ಮಾಡಿ ಸರ್ಕಾರದ ಪರವಾಗಿ ಕೇಸ್ ಡಿಸೈಡ್ ಮಾಡಿ ಷಿಫ್ಟ್ ಮಾಡಿಸಿದ್ದಾರೆ. ಅವರ ಮೇಲೆ ಎಂತಹ ಒತ್ತಡ

ಬಂದರೂ ಅದಕ್ಕೆ ಮಣಿಯದೆ ಮಾರ್ಕೆಟ್ ಯಾರ್ಡ್‌ಗೆ ಷಿಫ್ಟ್ ಆಗಲೇ ಬೇಕೆಂಬ ನಿಲುವನ್ನು ತೆಗೆದು ಕೊಂಡರು. ಇವೊತ್ತು ಸುಪ್ರೀಮ್ ಕೋರ್ಟಿನಲ್ಲಿ ಕೇಸ್ ತೀರ್ಮಾನವಾದಮೇಲೆ ಮತ್ತೆ ಹೈಕೋರ್ಟಿನವರು ಇಂಟರ್‌ಫಿಯರ್ ಆಗಿ ಕೇಸ್ ಕೊಡುತ್ತಿದ್ದಾರೆ ಎಂದರೆ ಏನು ಎನ್ನುವುದೇ ನನಗೆ ಅರ್ಥವಾಗುವುದಿಲ್ಲ. ಮಾರ್ಕೆಟ್ ಷಿಫ್ಟ್ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಇನ್ನು ಮಾರ್ಕೆಟ್ ಎಂಪ್ಲಾಯೀಸ್ ಬಗ್ಗೆ ಒಂದು ದೊಡ್ಡ ಪ್ರಶ್ನೆ ಇದೆ. ಮಾರ್ಕೆಟ್ ಎಂಪ್ಲಾಯೀಸ್ ಅವರನ್ನು ಸರ್ಕಾರದ ನೌಕರರನ್ನಾಗಿ ಮಾಡಬೇಕೆಂಬುವ ವಿಚಾರವು ಸರ್ಕಾರ ತ್ರೀವ್ರ ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ಕೇಳಿದ್ದೇವೆ. ಅವನ್ನು ಆದಷ್ಟು ಬೇಗ ಮಾಡಿ, ಅವರ ಸೇವೆಯನ್ನು ಖಾಯಂ ಗೊಳಿಸಿ ಎಲ್ಲರನ್ನೂ ಸರ್ಕಾರಿ ನೌಕರರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಊರುಗಳಲ್ಲಿ, ಹೋಬಳಿ ಮಟ್ಟದಲ್ಲಿ ಸಂತೆಗಳು ಆಗುತ್ತವೆ ಇವೊತ್ತು ಮಾರ್ಕೆಟ್‌ಯಾರ್ಡಿಗೆ ಕೋಟ್ಯಾಂತರ ರೂಪಾಯಿ ಬರುತ್ತದೆ ಕೊಡುತ್ತೀರಾ ? ನಿಮಗೆ ಬರತಕ್ಕ ಹಣದಲ್ಲಿ ಒಂದು ಲಕ್ಷ, ಎರಡು ಲಕ್ಷ ಹಣ ಖರ್ಚುಮಾಡಿ ಪ್ರತಿ ಸಂತೆಗಳಿಗೂ ನೀರಿನ ಸೌಲಭ್ಯ ಒದಗಿಸಿ, ಅಲ್ಲಿಯೂ ಕೂಡ ಮಳಿಗೆಗಳನ್ನು ತೆಗೆಯುವಂಥ ಏರ್ಪಾಡು ಮಾಡಬೇಕು. ರೈತ ಬೆಳೆಯತಕ್ಕದ್ದು. ಸೇರು, ಪಾವು, ಅವನು ಮೂಟೆ ಗಟ್ಟಲೆ ಬೆಳೆಯಲಿಕ್ಕೆ ಹೋಗುವುದಿಲ್ಲ. ರೈತ ಅಲ್ಪ ಸ್ವಲ್ಪ ಬೆಳೆಯುವುದರಿಂದ ಅದನ್ನು ಹೊತ್ತು ಕೊಂಡು ಮಾರ್ಕೆಟ್ ಕಮಿಟಿಗೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ಹೋಬಳಿ ಮಟ್ಟದಲ್ಲಿ ಆಗತಕ್ಕಂಥ ಸಂತೆಗಳು ಎಲ್ಲಿವೆ ಅಲ್ಲಿಗೆ ಸರ್ಕಾರ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇನ್ನು ತರಕಾರಿ ಮಾರಾಟ ಮಾಡತಕ್ಕ ಮಾರ್ಕೆಟನ್ನು ಎಲ್ಲರೂ ನೋಡಿರಬೇಕು. ಆ ಮಾರ್ಕೆಟ್ಟಿಗೆ ಹೋದರೆ ದುರ್ವಾಸನೆ ಬರುತ್ತಾ ಇರುತ್ತದೆ. ಒಂದು ಕಡೆ ಕೊಳೆತಿರತಕ್ಕ ತರಕಾರಿಯನ್ನು ತುಳಿದುಕೊಂಡು ಓಡಾಡುವುದು ಇದೆ. ಇವೊತ್ತು ಬಂದಂಥ ತರಕಾರಿ ಒಂದು ಕಡೆ ಇರುತ್ತದೆ, ಸುಮಾರು ಎರಡು ಮೂರು ದಿವಸ ಆಗಿರತಕ್ಕಂಥ, ಕೊಳೆತು ಕೆಟ್ಟು ಹೋಗಿರತಕ್ಕಂಥ ತರಕಾರಿ ಒಂದು ಕಡೆ ಇರುತ್ತದೆ. ಕೆಟ್ಟು ಹೋಗಿರತಕ್ಕ ತರಕಾರಿ ಇರತಕ್ಕ ಕಡೆಯೇ ಡಿಮ್ಯಾಂಡ್ ಹೆಚ್ಚು ಏಕೆಂದರೆ ತರಕಾರಿ ಬೆಲೆ ಇವೊತ್ತು ಒಂದು ಕೆ.ಜಿ.ಗೆ ನಾಲ್ಕು ರೂ.ಗಳಿಂದ ಎಂಟು ರೂ.ಗಳವರೆಗೆ ಇದೆ. ಆದ್ದರಿಂದ ಅದರ ಬಗ್ಗೆ ರೆಗ್ಯುಲೇಟ್ ಮಾಡಿ ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತೆ ಮಾಡಿ ಅದಕ್ಕೆ ಒಂದು ಸೆಪರೇಟ್ ಮಾರ್ಕೆಟ್ ಯಾರ್ಡ್ ಮಾಡಿ ಅಲ್ಲಿ ಕೋಲ್ಡ್ ಸ್ಟೋರೇಜ್ ಇಟ್ಟು. ಇವೊತು ಬಂದಂಥ ತರಕಾರಿಯನ್ನು ಈ ಒಂದು ಸ್ಟೋರೇಜ್‌ನಲ್ಲಿ ಇಟ್ಟು ಅದನ್ನು ನಾಳೆ ಉಪಯೋಗಿಸಲಿಕ್ಕೆ ಅನುಕೂಲವಾಗುವಂಥ ಸಹಾಯವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಸಬ್ ಮಾರ್ಕೆಟ್ ಇದೆ ಈ ಮಾರ್ಕೆಟ್ ರೈತರಿಗೆ ಹೆಚ್ಚು ಹೆಚ್ಚಾಗಿ ಸಹಾಯಕಾರಿಯಾಗುವಂತೆ ಮಾಡಬೇಕು. ರಾಜಕೀಯ ಒತ್ತಡ ಬಂತು ಅಂತ ಇದನ್ನು ಇನ್ನೊಂದು ಕಡೆಗ ಸೇರಿಸಬೇಡಿ. ಈ ಮಾರ್ಕೆಟ್‌ಗೆ ಸಂಬಂಧಪಟ್ಟಂತೆ ಒಂದು ಬಿಲ್ಡಿಂಗ್ ಕಟ್ಟಲು ಎಸ್ಟಿಮೇಟ್ ತಮಗೆ ಬಂದಿದೆ. ಇದರ ಬಗ್ಗೆ ತಾವು ಏನೂ ಕ್ರಮ ತೆಗೆದುಕೊಂಡಂತೆ ನನಗೆ ಕಾಣುತ್ತಿಲ್ಲ. ಆದಷ್ಟುಬೇಗ ಇದನ್ನು ತಾವು ಮಾಡಬೇಕೆಂದು ನನ್ನ ವಿನಂತಿ. ಇವತ್ತು ವಿಶ್ವ ಬ್ಯಾಂಕ್‌ನಿಂದ ತಾವು ಸಾಕಷ್ಟು ಹಣವನ್ನು ಸಾಲ ತಂದು ದೊಡ್ಡ ದೊಡ್ಡ ಮಾರ್ಕೆಟ್‌ಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಉಪಯೋಗಿಸುತ್ತಿದ್ದೀರಿ. ನಮ್ಮ ಹಳಿಯಾರಿನಲ್ಲಿ ಒಂದು ಮಾರ್ಕೆಟ್ ಇದೆ. ಇದು ಒಳ್ಳೆಯ ವ್ಯಾಪಾರ ಸ್ಥಳ ಅಲ್ಲಿಗೆ ಹೊರಗಡೆಯಿಂದ ಅನೇಕ ಜನ ವ್ಯಾಪಾರಿಗಳು ಬಂದು ಹೋಗುತ್ತಾರೆ ಆದ್ದರಿಂದ ಈ ಮಾರ್ಕೆಟ್‌ನ್ನೂ ಕೂಡ ತಮ್ಮ ಈ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳಿ ಈ ಎಲ್ಲ ಕೆಲಸಗಳನ್ನೂ ನಮ್ಮ ಸಚಿವರು ನೆರವೇರಿಸಿಕೊಡುತ್ತಾರೆ. ಇವರಿಗೆ ಧಾರಾಳವಾದ ಮನಸ್ಸಿರುವುದರಿಂದ ಇದನ್ನು ಖಂಡಿತವಾಗಿ ಮಾಡಿಯೇ ಮಾಡುತ್ತಾರೆಂದು ಅಂದುಕೊಂಡು ನಾನು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ. – (ಹಾಸನ).—ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ದಿವಸ ವ್ಯವಸಾಯ, ಸಹಕಾರ, ಹಾಗೂ ರೆಗ್ಯುಲೇಟೆಡ್ ಮಾರ್ಕೆಟ್, ಈ ಮೂರು ಖಾತೆಗಳ ಸಚಿವರುಗಳು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸಿ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ವ್ಯವಸಾಯ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಈ ಇಲಾಖೆ ಬೃಹದಾಕಾರವಾಗಿ ಬೆಳೆದಿರತಕ್ಕದ್ದು. ಇದರ ಬೆಳವಣಿಗೆಯನ್ನು ಹೇಳುವುದಕ್ಕೆ ತೀರದು ಇದು ಏತಕ್ಕೆ ಇಷ್ಟು ಬೃಹದಾಕಾರವಾಗಿ ಬೆಳೆಯುತ್ತಿದೆ ಎಂಬುದು ಗೊತ್ತಿಲ್ಲ. ಈ ಇಲಾಖೆಯಲ್ಲಿ ಈಗ್ಗೆ ೬–೭ ವರ್ಷಗಳ ಹಿಂದೆ ಇದ್ದಂಥ ಅಧಿಕಾರಿಗಳು ಬಹಳ ಉತ್ತಮವಾದ ಕೆಲಸಗಳನ್ನು ಮಾಡಿ ಜನರ ಮೆಚ್ಚುಗೆಯನ್ನು ಪಡೆದಿದ್ದರು. ಆದರೆ ಇತ್ತೀಚೆಗೆ ವಿಶ್ವಬ್ಯಾಂಕ್‌ನಿಂದ ಸುಮಾರು ೫–೬ ಕೋಟಿ ರೂಪಾಯಿಗಳನ್ನು ಸಾಲ ತಂದು ಈ ಇಲಾಖೆಯನ್ನು ಚೆನ್ನಾಗಿ ಬೆಳೆಸಿದಮೇಲೆ ಇದರಿಂದ ರೈತರಿಗೆ ಆಗಿರತಕ್ಕ ಉಪಯೋಗ ಎಷ್ಟೆಂದು ನೋಡಿದಾಗ, ಇದು ಕೇವಲ ಅತ್ಯಲ್ಪವೆಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರು ಯಾವ ಉದ್ದೇಶದಿಂದ ಈ ವ್ಯವಸಾಯ ಖಾತೆಗೆ ಇಷ್ಟೊಂದು ಹಣ ಖರ್ಚು ಮಾಡಿದಿರಿ, ಅದರ ಉದ್ದೇಶ ಸಫಲವಾಗಲಿಲ್ಲವೆಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿ ಇರತಕ್ಕ ಪ್ರದೇಶದಲ್ಲಿ ೪೦೦ ಸಂಸಾರಗಳಿಗೆ ಒಬ್ಬ ಗ್ರಾಮ ಸೇವಕರು, ನೀರಾವರಿ ಇಲ್ಲದಿರತಕ್ಕ ಪ್ರದೇಶದಲ್ಲಿ ೮೦೦ ಸಂಸಾರಗಳಿಗೆ ಇಬ್ಬರು ಗ್ರಾಮ ಸೇವಕರು, ತಾಲೂಕು ಮಟ್ಟದಲ್ಲಿ ಒಬ್ಬ ಕ್ಲಾಸ್ ಒನ್ ಅಧಿಕಾರಿ, ಎರಡು ಜಿಲ್ಲೆಗಳಿಗೆ ಒಬ್ಬ ಜಾಯಿಂಟ್ ಡೈರೆಕ್ಟರ್ ಇದ್ದಾರೆ. ಸ್ವಾಮಿ, ಇಷ್ಟೊಂದು ಜನ ಅಧಿಕಾರಿಗಳಿದ್ದು ಇವರು ಮಾಡಿರತಕ್ಕ ಕೆಲಸವನ್ನು ಈ ಇಲಾಖೆಯವರೇ ಕೇಳಿಕೊಳ್ಳಬೇಕು. ಇವರು ರಿಟೈರ್ ಆದಾಗ ನೀನು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಅಷ್ಟೊಂದು ಸಂಬಳ ತೆಗೆದುಕೊಂಡೆ ಅಷ್ಟೊಂದು ಟಿ.ಎ, ಡಿ.ಎ. ತೆಗೆದುಕೊಂಡೆ, ಅಷ್ಟು ತೆಗೆದುಕೊಂಡಿದ್ದಕ್ಕೆ ಜನರಿಗೆ ಏನು ಒಳ್ಳೆಯ ಕೆಲಸ ಮಾಡಿದೆ ಎಂದು ದೇವರು ಕೇಳಿದರೆ ಇವರು ಏನು ಉತ್ತರ ಕೊಡುತ್ತಾರೋ ಗೊತ್ತಿಲ್ಲ.

ಮಾನ್ಯ ಉಪ ಸಭಾಧ್ಯಕ್ಷರೇ, ತಾವು ಎಲ್ಲೇ ಹೋಗಿ ನೋಡಿ, ಯಾವ ಗ್ರಾಮ ಸೇವಕರೂ ಅವರ ಜಾಗದಲ್ಲಿ ವಾಸ ಇರುವುದಿಲ್ಲ. ಎಲ್ಲರೂ ಬೇರೆ ಎಲ್ಲೆಲೋ ಇರುತ್ತಾರೆ ನಾನು ಒಂದುಸಾರಿ ಒಬ್ಬ ಗ್ರಾಮ ಸೇವಕನನ್ನು ಕೇಳಿದೆ. ಏನಪ್ಪಾ ನೀವು ಈ ಊರಿನಲ್ಲೇ ಇರುವುದಿಲ್ಲ, ಏನಾದರೂ ಬೇಕಾದರೆ ಜನ ಯಾರನ್ನು ಕೇಳಬೇಕು ? ನಿಮ್ಮ ಪತ್ತೆಯೇ ಇರುವುದಿಲ್ಲ ಅಲ್ಲದೇ ನಿಮ್ಮ ಮೇಲ್ಪಟ್ಟ ಅಧಿಕಾರಿಗಳೂ ಕೂಡ ಇಲ್ಲಿ ಇರುವುದಿಲ್ಲ, ಎಲ್ಲಾ ಎಲ್ಲಿ ಹೋಗುತ್ತೀರಿ, ಎಂದು ಕೇಳಿದ್ದಕ್ಕೆ ಅವರು ಹೇಳಿದ್ದು, ಸ್ವಾಮಿ, ನಮ್ಮ ಅಧಿಕಾರಿಗಳೂ ಹೀಗೆಯೇ ? ಅವರು ಇಲ್ಲಿ ಇರುವುದಿಲ್ಲ, ಅಲ್ಲದೆ ಅವರು ನಮ್ಮನ್ನು ಕೇಳುವುದೂ ಇಲ್ಲ. ಎಂದರು ಸ್ವಾಮಿ ಈ ಇಲಾಖೆಯ ಅಧಿಕಾರಿಗಳಿಗೆ ಜೀಪು ಕೊಟ್ಟು, ಪೆಟ್ರೋಲ್ ಕೊಟ್ಟಿದ್ದರ ಪ್ರತಿಫಲ ಏನು ಎಂದರೆ ಟನ್‌ಗಟ್ಟಲೆ ಪೇಪರ್ ಖರ್ಚುಮಾಡಿ ರಿಪೋರ್ಟ್ ಕೊಡುವುದೊಂದನ್ನು ಬಿಟ್ಟರೆ, ಈ ದೇಶದ ಜನರಿಗೆ ಇನ್ನು ಯಾವುದೇ ರೀತಿಯಲ್ಲೂ ಉಪಯೋಗವಾಗುವಂಥ ಕೆಲಸ ಆಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು ಸ್ವಾಮಿ ಕೆಲವು ವರ್ಷಗಳ ಹಿಂದೆ ಒಬ್ಬ ತಜ್ಞರು ಸಲಹೆ ನೀಡಿ ಈ ಇಲಾಖೆಯನ್ನು ತೆಗೆದು ರೈತರಿಗೆ ಬೇಕಾಗಿರತಕ್ಕ ಬೀಜ ಗೊಬ್ಬರ, ಔಷಧಿ, ಹಾಗೂ ವ್ಯವಸಾಯೋತ್ಪನ್ನಗಳನ್ನು ಒದಗಿಸಿಕೊಟ್ಟರೆ ಅದರಿಂದ ಬಹಳ ಅನುಕೂಲವಾಗುತ್ತದೆಂದು ಹೇಳಿದ್ದರಂತೆ. ಈ ವಿಚಾರವನ್ನು ನಾನು ಕೇಳಿದ್ದೇನೆ. ಈ ವ್ಯವಸಾಯ ಇಲಾಖೆಯಲ್ಲಿ ನಡೆಯುತ್ತಿದ್ದ ಕೆಲಸವನ್ನು ನೋಡಿ ಅವರು ಈರೀತಿ ಹೇಳಿರಬಹುದೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಇವರು ಗೊಬ್ಬರ ವಿತರಣೆ ಮಾಡುವುದಿಲ್ಲ, ಔಷಧಿ ಕೊಡುವುದಿಲ್ಲ. ರೈತರು ಇವರ ಹತ್ತಿರ ಬಂದು ಸ್ವಾಮಿ ಬಿತ್ತನೆ ಬೀಜ ಕೊಡಿ ಎಂದು ಕೇಳಿದರೆ ಆಗ್ರೋ ಇಂಡಸ್ಟ್ರೀಸ್‌ನವರು ಕೊಡುತ್ತಾರೆ ಅಲ್ಲಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ, ಔಷಧಿ ಕೊಡಿ ಎಂದರೆ, ಅಂಗಡಿಯಲ್ಲಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಬೆಳೆಗಳಿಗೆ ರೋಗ ಬಂದಿದೆ ಆದಕ್ಕೆ ಔಷಧಿ ಸ್ಪ್ರೇ ಮಾಡಬೇಕೆಂದು ರೈತರು ಕೇಳಿದರೆ, ಇದಕ್ಕೂ ನಮಗೂ ಸಂಬಂಧ ಇಲ್ಲ ತಾಲ್ಲೂಕು ಮಟ್ಟದಲ್ಲಿ ನಮ್ಮ ಅಧಿಕಾರಿಗಳಿದ್ದಾರೆ ಅವರನ್ನು ಹೋಗಿ ಕಾಣಿ ಎಂದು ಹೇಳುತ್ತಾರೆ. ಸ್ವಾಮಿ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ತಮಗೆ ಹೇಳಬಯಸುತ್ತೇನೆ, ನಾನು ಒಂದುಸಾರಿ ಸುಬ್ರಮಣ್ಯಕ್ಕೆ ಹೋಗಿದ್ದೆ. ಅಲ್ಲಿ ನೋಡಿದ್ದೇನೆ. ಅಲ್ಲದೆ ನಮ್ಮ ಕಡೆಯಲ್ಲೂ ಕೂಡ ''ಸುಬ್ರಮಣ್ಯ ಪಾರುಪತ್ಯ'' ಎಂದು ಒಂದು ಮಾತುಹೇಳುತ್ತಾರೆ ಅಂದರೆ ಇದರ ಅರ್ಥ ಆ ಜಾತ್ರೆಯಲ್ಲಿ ಯಾರೋ ಭಕ್ತಾದಿಗಳು ಪದಸ ತಂದುಹಾಕುವವರು ತಂದು ಹಾಕುತ್ತಾರೆ, ಅಡಿಗೆ ಮಾಡುವವರು ಮಾಡುತ್ತಾರೆ. ಊಟಕ್ಕೆ ಬಡಿಸುವವರು ಬಡಿಸುತ್ತಾರೆ. ಇದಕ್ಕೆ ಮುಂಚಿತವಾಗಿಯೇ ಒಬ್ಬ ಶಾಸ್ತ್ರಿ ಹೊಟ್ಟೆತುಂಬಾ ಊಟಮಾಡಿ, ಒಂದು ಶಲ್ಯವನ್ನು ಹೆಗಲಮೇಲೆ ಹಾಕಿಕೊಂಡು ಊಟಕ್ಕೆ ಬಡಿಸುವ ಜಾಗದಲ್ಲಿ ಮುಂದೆ ನಿಂತುಕೊಂಡು, ಏನಪ್ಪಾ ಅನ್ನ ತಂದೆಯಾ, ಅದನ್ನು ಇಲ್ಲಿ ಬಡಿಸು ಸಾರು ತಂದೆಯೊ ಅಲ್ಲಿ ಬಡಿಸು, ಎಂದು ಹೇಳುತ್ತಾ ಇರುತ್ತಾನೆ. ಇವನು ಮಾತ್ರ ಕೆಲಸಮಾಡುವುದಿಲ್ಲ

ಅದೇರೀತಿ ನಿಮ್ಮ ಈ ಇಲಾಖೆಯ ಅಧಿಕಾರಿಗಳೂ ಕೂಡ ಇಂಥ ಕಡೆ ಔಷಧಿ ಸಿಕ್ಕುತ್ತದೆ, ಇಂಥ ಕಡೆ ಬಿತ್ತನೆ ಬೀಜ ಸಿಕ್ಕುತ್ತದೆ, ನೀವು ಇಂಥ ಕಡೆ ಹೋಗಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇದೇ ಇವರ ಕೆಲಸ. ಮಾನ್ಯ ಉಪಾಧ್ಯಕ್ಷರೇ, ಈ ಇಲಾಖೆಯ ಅಧಿಕಾರಿಗಳು ಏನಿದ್ದಾರೆ, ಇವರು ಏನು ಕೆಲಸಮಾಡಿದ್ದಾರೆ ಎಂಬುದನ್ನು ನೋಡತಕ್ಕದ್ದು ಸಂಬಂಧಪಟ್ಟ ಮಂತ್ರಿಗಳ ಅಥವಾ ಆ ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳ ಆದ್ಯಕರ್ತವ್ಯ. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಪಾರ್ಥೇನಿಯಂ ಕಳೆ, ಇದೊಂದು ಕೆಟ್ಟ ಕಳೆ. ದೇಶದ ಎಲ್ಲ ಕಡೆಯೂ ಇದು ಹರಡಿದೆ. ಇದನ್ನು ಬೇರುಸಹಿತ ಕಿತ್ತುಹಾಕತಕ್ಕದ್ದು ವ್ಯವಸಾಯ ಇಲಾಖೆಯ ಕೆಲಸ. ಇದನ್ನು ಮುಟ್ಟಿದವರಿಗೆ ಕ್ಷಯ ರೋಗ ಬರುತ್ತದೆ. ಹಾಲುಕೊಡತಕ್ಕ ದನಗಳು ಈ ಗಿಡಗಳನ್ನು ತಿಂದು ಹೋದಮೇಲೆ ಅದರಿಂದ ಹಾಲನ್ನು ಕರೆದು ಉಪಯೋಗಿಸಿದರೆ ಅದರಿಂದಲೂ ಕೂಡ ಕಾಯಿಲೆ ಬರತಕ್ಕ ಸಂದರ್ಭ ಇದೆಯೆಂದು ವೈದ್ಯರು ಹೇಳುತ್ತಾರೆ. ನಿಮ್ಮ ವ್ಯವಸಾಯ ಇಲಾಖೆಯವರು ಈ ಗಿಡವನ್ನು ನಿರ್ಮೂಲಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ನಾನು ಅವರನ್ನು ಅಭಿನಂದಿಸುತ್ತಿದ್ದೆ. ಈ ವಿಚಾರದಲ್ಲಿ ತಜ್ಞರೂ ಹೇಳಿದ್ದಾರೆ, ಈ ಸದನದಲ್ಲೂ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಸದನಕ್ಕೆ ತಿಳಿಸಬೇಕು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಈ ವ್ಯವಸಾಯ ಇಲಾಖೆ ಇದ್ದರೆ ಏನು ? ಇಲ್ಲದಿದ್ದರೆ ಏನು ? ಒಳ್ಳೆಯ ಬಿತ್ತನೇ ಬೀಜದ ಹಂಚಿಕೆ ಮಾಡುವುದು ವ್ಯವಸಾಯ ಇಲಾಖೆಯ ಜವಾಬ್ದಾರಿ. ರೈತರಿಗೆ ಉತ್ತಮ ಬಿತ್ತನೆ ಬೀಜಗಳು ದೊರೆಯುತ್ತಿಲ್ಲವೆಂದು ಅನೇಕ ದೂರುಗಳು ಬಂದಿರುವುದನ್ನು ನಾವು ನೋಡಿದ್ದೇವೆ. ಸ್ವಾಮಿ, ತಾವು ಹಳ್ಳಿಗಳ ಕಡೆ ಹೋಗಿ ರೈತರನ್ನು ಭೇಟಿ ಮಾಡಿ ಕೇಳಿನೋಡಿ, ನೂರಕ್ಕೆ ೧೦ ಜನ ಕೂಡ ನಮಗೆ ಒಳ್ಳೆಯ ಬಿತ್ತನೆ ಬೀಜ ಸಿಕ್ಕಲಿಲ್ಲವೆಂದು ಹೇಳುತ್ತಾರೆ. ಒಳ್ಳೆಯ ಮಳೆ ಬಂದರೂ ಕೆಟ್ಟ ಬೀಜದಿಂದ ಬೆಳೆ ಬರಲಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಈ ಇಲಾಖೆಯವರು ಮಾಡಿದ್ದಾದರೂ ಏನು ? ೧೯೬೬ರ ಸೀಡ್ಸ್ ರೆಗ್ಯುಲೇಷನ್ ಆ್ಯಕ್ಟ್ ೧೯೬೯ನೇ ಇಸವಿಯಿಂದ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿದೆ. ೫ ಸಾವಿರ ಚಿಲ್ಲರೆ ಸ್ಯಾಂಪಲ್ ಸೀಡ್ಸ್‌ನ್ನು ತೆಗೆದುಕೊಂಡು ಲ್ಯಾಬೊರೇಟರಿಗೆ ಕಳುಹಿಸಿಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇದರಲ್ಲಿ ಎಷ್ಟು ಬೀಜ ಚೆನ್ನಾಗಿದೆ, ಎಷ್ಟು ಬೀಜ ಚೆನ್ನಾಗಿಲ್ಲ, ಏನು ಲೋಪದೋಷ ಇದೆ. ಕೆಟ್ಟ ಬೀಜವನ್ನು ಸಪ್ಲೈ ಮಾಡಿರುವವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಇಲ್ಲಿ ಒಂದೇ ಒಂದು ಚಕಾರವನ್ನೂ ಕೂಡ ಹೇಳಿಲ್ಲ. ನಾನು ಕೇಳುತ್ತಾ ಇದ್ದೇನೆ, ಎಷ್ಟು ಜನ ಅಧಿಕಾರಿಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಉತ್ತಮವಾದ ಬೀಜಗಳನ್ನು ಸರಬರಾಜು ಮಾಡುವುದರ ಬಗ್ಗೆ ವ್ಯವಸ್ಥೆಯನ್ನು ಮಾಡಿದ್ದಾರೆ. ಅವರು ಎಷ್ಟು ಸ್ಯಾಂಪಲ್‌ಗಳನ್ನು ಡ್ರಾಮಾಡಿ ಆಕ್ಷನ್ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಯಾರು ತಪ್ಪು ಮಾಡಿರುತ್ತಾರೆ, ಯಾರು ತಪ್ಪಿತಸ್ಥರಿರುತ್ತಾರೆ, ಅವರ ಮೇಲೆ ಏನು ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುತ್ತಾರೆ ಅದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯ ಪಕ್ಷ ಜಿಲ್ಲೆಗೆ ಒಂದಾದರೂ ಕೂಡ ಸೀಡ್ಸ್ ಪ್ರೊಸೆಸಿಂಗ್ ಯೂನಿಟನ್ನು ಸ್ಥಾಪನೆ ಮಾಡಬೇಕು. ಜಿಲ್ಲೆಗೆ ಬೇಕಾದಂಥ, ರೈತರಿಗೆ ಬೇಕಾದಂಥ ಉತ್ತಮವಾದ ಬೀಜಗಳನ್ನು ವಿತರಣೆ ಮಾಡಬೇಕು. ಈ ವಿಚಾರದಲ್ಲಿ ಪದೇ ಪದೇ ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಿರುತ್ತೇವೆ. ಎಲ್ಲೋ ಒಂದುಕಡೆ, ಒಂದೆರಡು ಜಿಲ್ಲೆಗಳಲ್ಲಿ ಮಾಡಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಸಿಡ್ ಪ್ರೊಸೆಸ್‌ಗೆ ಬೇಕಾದಂಥ ಬೀಜಗಳನ್ನು ಬೆಳೆಯುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಮೂರನೆಯದಾಗಿ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಉತ್ತಮವಾದ ಬೀಜಗಳನ್ನು ದಾಸ್ತಾನುಮಾಡಿ ಸಕಾಲದಲ್ಲಿ ರೈತರಿಗೆ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಈ ಸಂದರ್ಭದಲ್ಲಿ ವ್ಯವಸಾಯ ಇಲಾಖೆಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ರೈತರಿಗೆ ಬೇಕಾದಂಥ ಗೊಬ್ಬರ. ಈವತ್ತಿನದಿವಸ ಗೊಬ್ಬರ, ಕೆಮಿಕಲ್, ಇವುಗಳ ಬೆಲೆ ಬಹಳವಾಗಿ ಜಾಸ್ತಿಯಾಗಿರುತ್ತದೆ. ಹಿಂದೆ ಇವುಗಳ ಬೆಲೆ ಕಡಿಮೆ ಇದ್ದಂಥ ಸಂದರ್ಭದಲ್ಲಿ ಇಲಾಖೆಯವರು ಸರ್ಕಾರದವರು ಬಹಳವಾಗಿ ಪ್ರಚಾರ ಮಾಡುತ್ತಿದ್ದರು. ಈಗ ಪ್ರಚಾರ ಮಾಡಬೇಕಾಗಿಲ್ಲ. ಎಲ್ಲ ರೈತರು ಉಪಯೋಗಿಸತಕ್ಕಂಥ ವಿಧಾನಗಳನ್ನು ಚೆನ್ನಾಗಿಯೇ ತಿಳಿದುಕೊಂಡಿರುತ್ತಾರೆ. ಆದರೆ ತೊಂದರೆ ಏನು ಎಂದರೆ ಇವುಗಳ ಬೆಲೆಯು ಜಾಸ್ತಿಯಾಗಿರುವುದರಿಂದ ಕೊಂಡು ಕೊಳ್ಳುವುದಕ್ಕೆ ಈವತ್ತಿನ ದಿವಸ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೆಲೆಯನ್ನು ಸಬ್‌ಸಿಡೈಸ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇದು ಕೇಂದ್ರ ಸರ್ಕಾರದ ಜವಾಬ್ದಾರಿ ಹಾಗೆ ಹೀಗೆ ಎಂದು ಹೇಳುವುದರಿಂದ ರೈತರಿಗೆ

ಯಾವವಿಧವಾದ ಪ್ರಯೋಜನವೂ ದೊರೆಯುವುದಿಲ್ಲ. ರೈತರ ಹಿತದೃಷ್ಟಿಯಿಂದ, ರೈತರು ದವಸ ಧಾನ್ಯಗಳನ್ನು ಸಮೃದ್ಧಿಯಾಗಿ ಬೆಳೆದು ನೆರೆರಾಜ್ಯಗಳಿಗೂ ಕೊಡಬೇಕು ಎನ್ನುವ ದೃಷ್ಟಿ ಸರ್ಕಾರಕ್ಕೆ ಇದ್ದರೆ ಈ ಕೆಮಿಕಲ್ಸ್ ಮತ್ತು ಮ್ಯಾನ್ಯೂರ್ ರೇಟನ್ನು ಸಬ್‌ಸಿಡೈಸ್‌ಮಾಡಿ ರೈತರಿಗೆ ವಿತರಣೆ ಮಾಡು ವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಎರಡನೆಯ ವಿಚಾರ ಎಂದರೆ ಸೇಲ್ಸ್‌ಟ್ಯಾಕ್ಸ್. ಇದು ಗಾಯದ ಮೇಲೆ ಬರೆ ಹಾಕಿದಂತಾ ಗಿರುತ್ತದೆ ಕೇಂದ್ರ ಸರ್ಕಾರದವರು ಗೊಬ್ಬರಗಳ ಬೆಲೆಯನ್ನು ಜಾಸ್ತಿ ಮಾಡಿರುತ್ತಾರೆಂದು ರಾಜ್ಯ ಸರ್ಕಾರದವರು ಜಾಸ್ತಿ ಮಾಡತಕ್ಕಂಥದ್ದು ಸೂಕ್ತವಲ್ಲ. ಕೇಂದ್ರ ಸರ್ಕಾರದವರು ಜಾಸ್ತಿ ಮಾಡಿದ್ದರೆ ಮೇಲೆ ರಾಜ್ಯ ಸರ್ಕಾರದವರು ನಾಲ್ಕು ಪರ್ಸೆಂಟ್‌ನಿಂದ ಹತ್ತು ಪರ್ಸೆಂಟ್‌ವರೆಗೆ ಜಾಸ್ತಿಮಾಡಿರುತ್ತೀರಿ. ಕೊನೆಪಕ್ಷ ರಾಜ್ಯಸರ್ಕಾರದವರು ಕೆಮಿಕಲ್ಸ್ ಮತ್ತು ಮ್ಯಾನ್ಯೂರ್ಸ್ ಮೇಲೆ ತೆರಿಗೆಯನ್ನು ವಿಧಿಸದಿದ್ದರೆ ಸುಮಾರು ಒಂದು ಟನ್‌ಗೆ ೪೦ ರಿಂದ ೫೦ ರೂಪಾಯಿಗಳವರೆಗೆ ಹಣ ಉಳಿತಾಯವಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಈಗ ಒದಗಿಸುತ್ತಿರತಕ್ಕಂಥ ಗೊಬ್ಬರ ತೂಕ ಮತ್ತು ಗುಣ ಬಹಳ ಕೆಳಮಟ್ಟಕ್ಕೆ ಇಳಿದಿರುತ್ತದೆ. ಗೊಬ್ಬರ ದಲ್ಲಿ ಇಷ್ಟೇ ಪ್ರಮಾಣದಲ್ಲಿ ಕಂಟೆಂಟ್ಸ್ ಇರಬೇಕೆಂಬ ನಿಗದಿ ಇದ್ದರೂ ಕೂಡ, ಅಷ್ಟು ಕಂಟೆಂಟ್ಸ್ ಇರುವುದಿಲ್ಲವೆಂದು ದೂರು ಇರುತ್ತದೆ. ಇದನ್ನು ಕಂಡುಹಿಡಿಯಲು ಜಿಲ್ಲೆಗೆ ಒಬ್ಬೊಬ್ಬ ಸೂಪರ್‌ವೈಸರ್ ಇದ್ದರೂ ಕೂಡ ಅವರು ಏನು ಕೆಲಸ ಮಾಡುತ್ತಿಲ್ಲ. ಅವರು ಎಷ್ಟು ಸ್ಯಾಂಪಲ್‌ಗಳನ್ನು ಡ್ರಾ ಮಾಡಿದ್ದಾರೆ, ಕಂಟೆಂಟ್ಸ್ ಇಲ್ಲದಿರತಕ್ಕಂಥ ಗೊಬ್ಬರವನ್ನು ತಯಾರು ಮಾಡಿದಂಥ ಕಂಪೆನಿಗಳ ಮೇಲೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತಾರೆ. ಎಷ್ಟು ಕಂಪೆನಿಗಳ ವಿರುದ್ಧ ಕೋರ್ಟ್‌ಗೆ ಹೋಗಿದ್ದಾರೆ ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ ಕಳೆದ ಮೂರು ವರ್ಷಗಳ ಹಿಂದೆ ಹಾಸನದಲ್ಲಿ ಒಲಂಪಸ್ ಸೀಡ್ ಕಾರ್ಪೊ ರೇಷನ್‌ರವರು ಮಾರಾಟ ಮಾಡಿದಂಥ ಗೊಬ್ಬರದ ಬಗ್ಗೆ ಕಂಪ್ಲೇಂಟ್ ಕೊಟ್ಟು ಸ್ಯಾಂಪಲ್ ಡ್ರಾ ಮಾಡಿ ೧೫ ಪರ್ಸೆಂಟ್ ಫಾಸ್ಫರಸ್ ಇರುವ ಬದಲು ೧೨, ೧೨½ ಪರ್ಸೆಂಟ್ ಫಾಸ್ಫರಸ್ ಇದ್ದುದರ ಬಗ್ಗೆ ಸರ್ಟಿಫೈಡ್ ಮಾಡಿದಾಗ ಅದರ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ತಂದು ಗಲಾಟೆ ಮಾಡಿದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಅವರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅವರು ಭಾರಿ ಶ್ರೀಮಂತರು, ಅವರು ಏನು ಇನ್‌ಫ್ಲೂಯೆನ್ಸ್ ಮಾಡಿದರೋ ನನಗಂತೂ ಗೊತ್ತಿಲ್ಲ. ಅಧಿಕಾರಿಗಳ ಮೇಲೆ ಒತ್ತಡ ತಂದು ಕೇಸ್ ವಿತ್ ಡ್ರಾ ಮಾಡಿರುತ್ತಾರೆ, ೧೫ ಪರ್ಸೆಂಟ್ ಕೆಮಿಕಲ್ಸ್ ಇರುವ ಬದಲು ೧೨½ ಪರ್ಸೆಂಟ್ ಕೆಮಿಕಲ್ ಇದೆ ಎಂದು ಸರ್ಟಿಫೈ ಮಾಡಿದ ಮೇಲೆ ಅವರು ತಪ್ಪಿತಸ್ಥರು ಎಂದು ಕಂಡು ಬಂದ ಮೇಲೆ ಕ್ರಿಮಿನಲ್ ಕೇಸ್ ಆಗಿದ್ದರೂ ಅವರ ಮೇಲೆ ಯಾವ ವಿಧವಾದ ಕ್ರಮ ವನ್ನು ಸರ್ಕಾರದವರು ತೆಗೆದುಕೊಳ್ಳದೆ ಕೇಸ್ ವಿತ್‌ಡ್ರಾ ಮಾಡಿಕೊಂಡಿದ್ದಾರೆಂದರೆ ಮಾನ್ಯ ಸಚಿವರು ಇದರ ಬಗ್ಗೆ ತಿಳಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತರ ಹಿತ ದೃಷ್ಟಿಯಿಂದ, ರೈತರಿಗೆ ಒಳ್ಳೆಯ ಬೀಜ ಮತ್ತು ಗೊಬ್ಬರ ಸಿಕ್ಕುತ್ತದೆಯೋ ಎನ್ನುವುದನ್ನು ನೋಡಿ ರೈತರ ಹಿತ ರಕ್ಷಣೆಯನ್ನು ಮಾಡಬೇಕೆ ವಿನಾ ಯಾರೋ ಒಬ್ಬರು ದೊಡ್ಡ ಮನುಷ್ಯರು, ಕೋಟ್ಯಾಂತರ ರೂಪಾಯಿಗಳ ವ್ಯವಹಾರ ವನ್ನು ಮಾಡತಕ್ಕಂಥವರು ಎಂದು ಹೇಳಿ ಅಧಿಕಾರಿಗಳು ಮನ್ನಣೆ ಕೊಟ್ಟು ಕೇಸ್‌ನ್ನು ವಿತ್‌ಡ್ರಾ ಮಾಡಿ ಕೊಂಡಿದ್ದಾರೆಂದು ಹೇಳಿದರೆ ಮಾನ್ಯ ಅಧ್ಯಕ್ಷರೇ ದಯವಿಟ್ಟು ಈ ವಿಚಾರವನ್ನು ಯೋಚನೆ ಮಾಡ ಬೇಕಾಗಿರುತ್ತದೆ. ಎಷ್ಟರ ಮಟ್ಟಿಗೆ ವ್ಯವಸಾಯ ಇಲಾಖೆಯ ಅಧಿಕಾರಿಗಳು ರೈತರ ಹಿತರಕ್ಷಣೆ ಮಾಡುತ್ತಾರೆ ಎನ್ನುವುದನ್ನು ದಯವಿಟ್ಟು ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದ ಅಧೀನದಲ್ಲಿಯೇ ಇರತಕ್ಕಂಥ ಮಂಗಳ ಫರ್ಟಿಲೈಸರ್ಸ್‌ನಲ್ಲಿ ಯೂರಿಯ ೬ ಪರ್ಸೆಂಟ್‌ನಿಂದ ೭ ಪರ್ಸೆಂಟ್‌ವರೆಗೆ ಕಡಿಮೆ ಎಂದು ಹೇಳುತ್ತಿದ್ದಾರೆ. ಸರ್ಕಾರದ ವತಿಯಿಂದಲೇ ನಡೆಯುತ್ತಿರತಕ್ಕಂಥ ಫ್ಯಾಕ್ಟರಿಯಲ್ಲಿ ಅಲ್ಲಿಯೂ ಕೂಡ ಹೇಳುವವರು, ಕೇಳುವವರು ಇಲ್ಲದಂತಾಗಿರು ತ್ತದೆ. ಇದು ನಿಜವೋ ಸುಳ್ಳೋ ಮಾನ್ಯ ಸಚಿವರು ತಿಳಿಸಬೇಕು. ಮಂಗಳೂರು ಫರ್ಟಿಲೈಸರ್ಸ್‌ನಲ್ಲಿ ಯೂರಿಯಾ ಪ್ರಮಾಣ ಕಡಿಮೆ ಇರುತ್ತದೆ, ಇಲ್ಲವೇ ಎನ್ನುವ ಬಗ್ಗೆ ಅಧಿಕಾರಿಗಳು ಸ್ಯಾಂಪಲ್ ಡ್ರಾ ಮಾಡಿ ಟೆಸ್ಟ್ ಮಾಡಿ ರಿಸಲ್ಟ್ ಏನು ಎನ್ನುವುದನ್ನು ಕೊಟ್ಟಿರುತ್ತಾರೆಯೋ ಎನ್ನುವ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಹೇಳುತ್ತೇನೆ.

ಇನ್ನು ಸ್ವಾಮಿ ರೈತರ ಹಿತದೃಷ್ಟಿಯಿಂದ ಒಂದು ದೊಡ್ಡ ಸಂಸ್ಥೆ ಅಂದರೆ ಅಗ್ರೋ ಇಂಡಸ್ಟ್ರೀಸ್ ಎನ್ನ ತಕ್ಕಂಥ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಲಾಯಿತು. ಇದಕ್ಕೆ ಹೂಡಿದ ಬಂಡವಾಳ ೫ ಕೋಟಿರೂಪಾಯಿಗಳು. ೫ ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿದಂಥ ಈ ಸಂಸ್ಥೆಯಲ್ಲಿ ಎಷ್ಟು ಲಾಸಾಗಿದೆ ಎಂದರೆ ೭ ಕೋಟಿ ರೂಪಾಯಿಗಳು ಇಲ್ಲಿ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ, ಬೇರೆ ಅಧಿಕಾರಿಗಳೂ ಇರುತ್ತಾರೆ ಇವರು ಎರಡು ಸಾವಿರ ಮೂರು ಸಾವಿರ ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಿರುತ್ತಾರೆ. ಇಷ್ಟೊಂದು ಸಂಬಳವನ್ನು ತೆಗೆದುಕೊಳ್ಳುತ್ತಿರುವಂಥ ಅಧಿಕಾರಿಗಳು ಕಾರ್ಪೊರೇಷನ್‌ಗಾಗಿ ಹೂಡಿದಂಥ ೫ ಕೋಟಿ ರೂಪಾಯಿಗಳ ಬಂಡವಾಳವನ್ನು ನುಂಗಿ, ಬ್ಯಾಂಕಿನಲ್ಲಿಯೂ ಕೂಡ ಸಾಲವನ್ನು ತೆಗೆದುಕೊಂಡಿರುತ್ತಾರೆ. ಆರು ತಿಂಗಳಾಯಿತು ಈಗ ಎಷ್ಟು ಕೋಟಿ ರೂಪಾಯಿಗಳಾಗಿರುತ್ತದೋ ಗೊತ್ತಿಲ್ಲ. ಈ ರೀತಿಯಾದರೆ ಈ ಇಲಾಖೆಯಿಂದ ರೈತರ ಹಿತರಕ್ಷಣೆಯಾಗುತ್ತದೆಯೇ ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಇದು ಒಂದು ಕರ್ಮಕಾಂಡ, ಮನಸ್ಸಿಗೆ ಬಂದಹಾಗೆ ಬೇಕುಬೇಕಾದ ಹಾಗೆ ಲೂಟಿ ಮಾಡುತ್ತಿರುತ್ತಾರೆ. ರೈತರು ಹತ್ತು ರೂಪಾಯಿ ಕಂದಾಯ ಕೊಡಬೇಕಾದರೆ, ಸಹಕಾರಿ ಸಂಘದ ಸಾಲವನ್ನು ಕೊಡಬೇಕಾಗಿದ್ದರೆ ಇಲಾಖೆಯವರು ಅವರು ವ್ಯವಸಾಯ ಸಾಮಗ್ರಿಗಳನ್ನು ಕಿತ್ತುಕೊಂಡು ಬರುತ್ತಾರೆ. ಇಂಥ ಪರಿಸ್ಥಿತಿ ಇರುತ್ತದೆ. ಏಳುಕೋಟಿ ಎಂಟುಕೋಟಿ ರೂಪಾಯಿಗಳು ಅವ್ಯವಹಾರ ನಡೆದಿರುತ್ತದೆ. ಇದನ್ನು ಕೇಳುವವರೇ ಇಲ್ಲ ದೇಶದ ಜನ ಹೊಟ್ಟೆಬಟ್ಟೆಗಾಗಿ ಕಷ್ಟಪಡುತ್ತಿರಬೇಕಾದರೆ ಅವರನ್ನು ಕೇಳುವವರೇ ಇಲ್ಲ. ಅಧಿಕಾರಿಗಳು ಇದ್ದಾರೆ ಏನೂ ಮಾಡುತ್ತಿದ್ದಾರೋ ತಿಳಿಯುತ್ತಿಲ್ಲ. ಇದರ ಬಗ್ಗೆ, ವೈಟ್ ಪೇಪರ್ ಹೊರಡಿಸುತ್ತೇವೆಂದು ಹೇಳುತ್ತಿದ್ದಾರೆ. ಯಾವಾಗ ಹೊರಡಿಸುತ್ತಾರೋ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ಕಾರ್ಪೊರೇಷನ್‌ನವರು ಒಳ್ಳೆಯ ಸೀಡ್ಸ್‌ನ್ನು ಒದಗಿಸಬೇಕು, ಅಗ್ರಿಕಲ್ಚರ್ ವ್ಯವಸಾಯ ಉತ್ಪನ್ನಗಳನ್ನು ಒದಗಿಸಬೇಕು ರೈತರಿಗೆ ಅಗ್ರಿಕಲ್ಚರ್ ಇನ್‌ಪುಟ್ಸ್ ಸಕಾಲಕ್ಕೆ ಒದಗಿಸಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಐದು ಕೋಟಿ ರೂಪಾಯಿಗಳ ಅವ್ಯವಹಾರ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ನಡೆದಿರುವ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಉತ್ತರವನ್ನು ಕೊಡುವಾಗ ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕೆಂದು ಕೇಳುತ್ತೇನೆ. ಯಾರು ಯಾರೋ ಪ್ರೈವೇಟ್‌ನವರು ಕೇವಲ ೧೦೦ ರೂಪಾಯಿ ಹೂಡಿ, ಲಾಭ ಮಾಡಿ ತಮ್ಮ ಜೀವನ ನಡೆಸುತ್ತಿದ್ದಾರೆ. ಈ ಕಾರ್ಪೊರೇಷನ್‌ನವರು ನೂರಾರು ಟ್ರ್ಯಾಕ್ಟರ್ಸ್‌ಗಳನ್ನು ಕೊಂಡಿದ್ದಾರೆ. ಬುಲ್ಡೋಜರ್‌ಗಳನ್ನು ಕೊಂಡಿದ್ದಾರೆ. ಹಾಗಾದರೂ ಏಕೆ ನಷ್ಟವಾಗಿದೆ ಎಂಬ ಬಗ್ಗೆ ವಿವರಣೆ ಕೊಡಬೇಕೆಂದು ಹೇಳುತ್ತೇನೆ

ಈಗ ವ್ಯವಸಾಯ ಇಲಾಖೆಯ ನಿರ್ದೇಶಕರ ಹುದ್ದೆ ಖಾಲಿ ಇದೆ. ಅಲ್ಲಿಗೆ ಒಬ್ಬ ಐ. ಎ. ಎಸ್. ಅಧಿಕಾರಿಯವರನ್ನು ತರುವ ಬಗ್ಗೆ ತಯಾರಿ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಟೆಕ್ನಿಕಲ್ ಎಜ್ಯುಕೇಷನ್ ಏಕೆ ಇರುವುದು ? ಏನು ಐ. ಎ. ಎಸ್. ಎಂಬುದು ಸಂಜೀವಿನಿಯೇ ? ಈ ಐ. ಎ. ಎಸ್. ನವರು ಅಡ್ಮಿನಿಸ್ಟ್ರೇಷನ್ ಕಡೆ ಹೋಗಲಿ. ಅವರು ಬುದ್ಧಿವಂತರಿರುತ್ತಾರೆ ಅಲ್ಲಿ ಅವರು ದಕ್ಷತೆಯಿಂದ ಕೆಲಸ ಮಾಡಬಹುದು. ಏಕೆ ಈ ವ್ಯವಸಾಯದ ನಿರ್ದೇಶಕರ ಹುದ್ದೆಗೆ ಐ. ಎ ಎಸ್. ಅಧಿಕಾರಿಗಳನ್ನು ತರುವುದು ? ಅಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗಳು ನಡೆಯುವುದು ಬೇಡವೇ ? ಅವುಗಳ ರಿಸಲ್ಟ್ ಕಾರ್ಯಗತ ಆಗುವುದು ಬೇಡವೇ ? ಈ ವಿಶ್ವವಿದ್ಯಾನಿಲಯಗಳ ಪ್ರಯೋಜನ ರೈತರಿಗೆ ತಲುಪುವುದು ಬೇಡವೇ ? ಇಂತಹ ಇಲಾಖೆಗೆ ನಿರ್ದೇಶಕರನ್ನು ಟೆಕ್ನಿಕಲ್ ಸೈಡ್‌ನಿಂದ ತೆಗೆದುಕೊಳ್ಳಬೇಕಾಗುತ್ತದೆ. ಐ. ಎ. ಎಸ್. ಮಾಡಿರುವವರನ್ನು ಎಲ್ಲಿಗೆ ಹಾಕಬೇಕೋ ಅಲ್ಲಿಗೆ ಹಾಕಬೇಕು. ಈ ಐ. ಎ. ಎಸ್. ನವರು ಒಳ್ಳೇ ಸೊಗಸಾಗಿ ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಈ ಐ. ಎ. ಎಸ್. ನಲ್ಲೂ ಸಹಾ ಕೆಲವರು ಉತ್ತಮರು ಇದ್ದಾರೆ ಕೆಲವರು ದಕ್ಷತೆಯಿಂದ ಕೆಲಸ ಮಾಡುವವರೂ ಇದ್ದಾರೆ. ಅಂತಹವರನ್ನು ಅಡ್ಮಿನಿಸ್ಟ್ರೇಷನ್ ಸೈಡ್‌ಗೆ ನೇಮಕ ಮಾಡಬೇಕೋ ಅಥವಾ ಟೆಕ್ನಿಕಲ್ ಕಡೆಗೆ ನೇಮಕ ಮಾಡಬೇಕೋ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಪಾಪ ಇವರು ಸೂಟ್ ಹಾಕಿಕೊಂಡು ಏನೇನೋ ಬರೆಯುತ್ತಾರೆ ಇದರಿಂದಾಗಿ ಅವರು ಇಲ್ಲಿ ಎಂ. ಎಲ್. ಎ. ಹಾಗೂ ಮಿನಿಸ್ಟರುಗಳಿಂದ ಬೈಸಿಕೊಳ್ಳುತ್ತಾರೆ. ಏಕೆ ಹೀಗೆ ? ಈ ಪುರಪತ್ಯ ಏಕೆ ? ಇನ್ನೊಂದು ಏನಾಗುತ್ತದೆಂದರೆ, ಇವರುಗಳು ವಿದ್ಯಾವಂತರಾಗಿ, ಹತ್ತಾರು ಕಡೆ ನಿಸ್ಪೃಹತೆಯಿಂದ ಕೆಲಸ ಮಾಡಿ ಬಂದಿರುತ್ತಾರೆ. ಇಂತಹವರಿಗೆ ಈ ಇಲಾಖೆಯನ್ನು ಕೊಟ್ಟರೆ ಅವರಿಗೆ ಆ ಬಗ್ಗೆ ತಿಳುವಳಿಕೆ

ಇರುವುದಿಲ್ಲ. ಏನೋ ಮಾಡಲು ಹೋಗಿ ಹೆಚ್ಚು ಕಮ್ಮಿಯಾದಾಗ, ನಮ್ಮಿಂದ ನಾಲ್ಕಾರು ಮಾತುಗಳನ್ನು ಕೇಳುವುದರಿಂದ ಅವರಿಗೂ ಸಹಾ ಬೇಜಾರು ಆಗುತ್ತದೆ. ಇದರಿಂದಾಗಿ ತರುಣ ಐ. ಎ. ಎಸ್. ಅಧಿಕಾರಿಗಳಿಗೂ ಜಿಗುಪ್ಸೆಯಾಗುತ್ತದೆ. ಇದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಅಡ್ಮಿನಿಸ್ಟ್ರೇಷನ್ ಸೈಡ್‌ಗೆ ಐ. ಎ. ಎಸ್. ಅಧಿಕಾರಿಗಳನ್ನು ನೇಮಕ ಮಾಡುವುದನ್ನು ಕೊನೆಗಾಣಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ವ್ಯವಸಾಯ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ, ಇದು ಸಂಶೋಧನೆಯಲ್ಲಿ ಬಹಳ ಉತ್ತಮವಾದ ಕೆಲಸ ಮಾಡಿದೆ ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಹೈಬ್ರಿಡ್ ವೆರೈಟಿಯನ್ನು ಸಂಶೋಧಿಸಿದ್ದಾರೆ. ಕೃಷಿ ವಿಜ್ಞಾನಿಗಳು ಇದನ್ನು ಸಂಶೋಧಿಸದೇ ಹೋಗಿದ್ದರೆ ಬಹುಶಃ ಪ್ರಪಂಚದಲ್ಲಿನ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗದಷ್ಟು ಜನರು ಊಟ ಇಲ್ಲದೇ ಸಾಯಬೇಕಾದ ಪರಿಸ್ಥಿತಿ ಬರುತ್ತಾ ಇತ್ತು ಎಂದು ಹೇಳುತ್ತೇನೆ. ಬೇರೆ ವಿಶ್ವವಿದ್ಯಾನಿಲಯದವರೂ ಸಹಾ ಇದನ್ನು ಕಂಡುಹಿಡಿದಿದ್ದು, ನಮ್ಮ ಕೃಷಿ ವಿಶ್ವವಿದ್ಯಾನಿಲಯದವರೂ ಸಹಾ ಈ ವೆರೈಟಿಯನ್ನು ಕಂಡುಹಿಡಿದಿದ್ದಾರೆ. ಅದೇ ರೀತಿ ವರಲಕ್ಷ್ಮಿ ಕಾಟನ್ ಕಂಡುಹಿಡಿದಿದ್ದಾರೆ. ಅದೇ ರೀತಿ ಡಿ. ಸಿ. ಎಚ್-೩೨ ರಿಲೀಸ್ ಮಾಡಿದ್ದಾರೆ. ಇದೇ ರೀತಿ ಅನೇಕ ಉಪಯುಕ್ತವಾದ ಕೆಲಸವನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ವ್ಯವಸಾಯ ಕಾಲೇಜು ಇದೆ. ಅದಕ್ಕೆ ವೈಸ್‌ಚಾನ್ಸಲರ್ ಇದ್ದಾರೆ. ವೆಟರಿನರಿ ಕಾಲೇಜು ಇದೆ. ಸಂಬಂಧಪಟ್ಟ ಡಿಗ್ರಿ ಕೋರ್ಸ್ ಇದೆ. ಧಾರವಾಡದಲ್ಲಿ ವ್ಯವಸಾಯ ಕಾಲೇಜು ಇದೆ. ಅಲ್ಲಿ ಸಂಬಂಧಪಟ್ಟ ಡಿಗ್ರಿ ಕೋರ್ಸ್ ಇದೆ. ಹಾಗೂ ರಾಯಚೂರಿನಲ್ಲಿ ವ್ಯವಸಾಯ ಕಾಲೇಜು ಇದೆ. ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆಯವರು ಮಾತನಾಡುವಾಗ ಇನ್ನೊಂದು ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ ಎಂದು ಹೇಳಿದರು. ಅದನ್ನು ಕೊಡುವುದು ಅಥವಾ ಬಿಡುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು. ನಾನು ಹೀಗೆ ಹೇಳುತ್ತೇನೆಂದು ಆ ಭಾಗದ ಜನರು ಏನೂ ತಿಳಿದುಕೊಳ್ಳಬಾರದು. ಒಂದು ವಿಶ್ವವಿದ್ಯಾನಿಲಯವನ್ನು ಕೊಡಬೇಕಾದರೆ, ಅದರ ಕಾರ್ಯದಕ್ಷತೆಯನ್ನೂ ಸಹಾ ನೋಡಬೇಕಾಗುತ್ತದೆ. ಧಾರವಾಡಕ್ಕೆ ಕೃಷಿ ವಿಶ್ವವಿದ್ಯಾನಿಲಯ ಕೊಟ್ಟರೆ ಒಂದೇ ಒಂದಕ್ಕೆ ಕೊಟ್ಟಹಾಗೆ ಆಗುತ್ತದೆ. ಆದರೆ ಅದಕ್ಕೆ ಒಬ್ಬ ವೈಸ್‌ಚಾನ್ಸಲರ್ ಕೊಟ್ಟು ಸಿಬ್ಬಂಧಿ ವಗೈರೆ ಕೊಡತಕ್ಕ ಹಣದಿಂದ ಇನ್ನೂ ಎರಡು ಮೂರು ವೆಟರ್ನರಿ ಕಾಲೇಜುಗಳನ್ನು ಸ್ಥಾಪನೆ ಮಾಡುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಈ ಬಗ್ಗೆ ವಿಶ್ವವಿದ್ಯಾನಿಲಯ ಕೊಡುವುದರ ಬಗ್ಗೆ ಸರ್ಕಾರ ವಿವೇಚನೆ ಮಾಡಿ ಮಾಡುವುದಾದರೆ ನನ್ನ ಅಭ್ಯಂತರ ಇಲ್ಲ.

ಶ್ರೀ ವಿ. ಎ. ಮತ್ತಿಕಟ್ಟಿ.—ಮಾನ್ಯ ಅಧ್ಯಕ್ಷರೆ.........

MR DEPUTY SPEAKER.—The hon. Member has not yielded. He will complete his speech within five minutes. Let him c mplete his speech.

ಶ್ರೀ ಕೆ. ಎಚ್. ಹನುಮೇಗೌಡ.—ಮಹಾರಾಷ್ಟ್ರದಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ಐ. ಸಿ. ಆರ್. ಸಿ. ಇಂದ ಎಷ್ಟು ಹಣ ಬರುತ್ತದೇ ಅದನ್ನೇ ನಾಲ್ಕು ಭಾಗ ಮಾಡಿ ನಾಲ್ಕಕ್ಕೂ ಹಂಚಲಾಗುತ್ತದೆ ಎಂಬುದನ್ನು ನಾನು ಕೇಳಿದ್ದೇನೆ. ಈ ಒಂದು ರಾಜ್ಯವನ್ನು ಬಿಟ್ಟರೆ ಬೇರೆ ಯಾವ ರಾಜ್ಯಗಳನ್ನೂ ಕೂಡಾ.........

SRI V. A. MATTIKATTI.—Sir. ....

MR. DEPUTY SPEAKER.—The hon· Member has not yielded . It is his right to continue. The hon. Minister will reply on that point.

ಶ್ರೀ ಕೆ. ಎಚ್. ಹನುಮೇಗೌಡ.- ಮಹಾರಾಷ್ಟ್ರ ಬಿಟ್ಟರೆ ದೇಶದ ಬೇರೆ ಎಲ್ಲ ರಾಜ್ಯಗಳಲ್ಲೂ ಒಂದೊಂದೇ ಕೃಷಿ ವಿಶ್ವವಿದ್ಯಾನಿಲಯಗಳಿರುವುದು ಎಂದು ಹೇಳುತ್ತೇನೆ. ಬಹುಶಃ.........

ಉಪಾಧ್ಯಕ್ಷರು.—ಮಹಾರಾಷ್ಟ್ರದಲ್ಲಿ ೬ ವಿಶ್ವವಿದ್ಯಾನಿಲಯಗಳು ಇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಇದರಿಂದ ತೊಂದರೆ ಏನಾಗುತ್ತದೆಂದರೆ, ಐ. ಸಿ. ಆರ್. ಸಿ. ಯಿಂದ ಬರತಕ್ಕ ಹಣವನ್ನು ಎರಡಕ್ಕೂ ಹಂಚಿಕೆಯಾಗುತ್ತದೆ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ. ಈ ಬಗ್ಗೆ ಸರ್ಕಾರ ವಿವೇಚನೆ ಇಟ್ಟುಕೊಂಡು ಕೊಟ್ಟರೆ ನನ್ನ ಅಭ್ಯಂತರ ಇಲ್ಲ. ಇರುವ ಸ್ಥಿತಿಗತಿಗಳನ್ನು ಹೇಳುತ್ತಿದ್ದೇನೆ. ಒಂದು ಅಗ್ರಿಕಲ್ಚರ್ ಕಾಲೇಜಿಗೆ ಒಂದು ವಿಶ್ವವಿದ್ಯಾನಿಲಯ ಕೊಡುವುದು ಎಷ್ಟು ವಿವೇಚನೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ವಿ. ಎ. ಮತ್ತಿಕಟ್ಟಿ.—ಉತ್ತರ ಕರ್ನಾಟಕದ ೯ ಜಿಲ್ಲೆಗಳು ಹಿಂದುಳಿದಿವೆ. ಅವುಗಳು ಮುಂದೆ ಬರಬೇಕು. ಹಿಂದುಳಿದ ಜಿಲ್ಲೆಗಳಿಗೆ ಪ್ರಾಧಾನ್ಯತೆ ಕೊಡುವುದು ಮುಖ್ಯ.

ಶ್ರೀ ಕೆ. ಎಚ್. ಹನುಮೇಗೌಡ.—ಆ ಭಾಗಕ್ಕೆ ಹೆಚ್ಚಿನ ಅನುಕೂಲತೆಯನ್ನು ಕೊಡಲಾಗಿದೆ.

ಶ್ರೀ ವಿ.ಎ. ಮತ್ತಿಕಟ್ಟಿ.—ಮತ್ತೊಂದು ಕಡೆ ವಿಶ್ವವಿದ್ಯಾನಿಲಯವನ್ನು ಕೊಡಬೇಡಿ ಎಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಐ.ಸಿ.ಆರ್.ಸಿ.ನವರೂ ಕೂಡಾ ಧಾರವಾಡದಲ್ಲಿ ವಿಶ್ವವಿದ್ಯಾನಿಲಯ ಆಗಬೇಕೆಂದು ರೆಕಮೆಂಡ್ ಮಾಡಿದ್ದಾರೆ. ಈಗಾಗಲೇ ರಾಯಚೂರಿನಲ್ಲಿ ಡಿಪ್ಲೊಮಾ ಅಗ್ರಿಕಲ್ಚರಲ್ ಕಾಲೇಜು ಇದೆ. ಅದನ್ನು ಅಪ್‌ಗ್ರೇಡ್ ಮಾಡಬೇಕೆಂದೂ ಹೇಳಿದ್ದಾರೆ. ಗುಲ್ಬರ್ಗಾದಲ್ಲೂ ಮಾಡಬಹುದು. ೯ ಜಿಲ್ಲೆಗಳಿಗೆ ಅನುಕೂಲ ಆಗುವ ವ್ಯವಸ್ಥೆ ಮಾಡಬೇಕೆಂದು, ವ್ಯವಸಾಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಹಿಂದಿನಿಂದಲೂ ಪ್ರಯತ್ನ ನಡೆದಿದೆ. ಅದಕ್ಕೆ ಭೂಮಿ ಕೂಡ ಸಹಾ ಇವೆ. ಈ ಬಗ್ಗೆ ಅಲ್ಲಿನ ಜನರಿಗೆ ಹೆಚ್ಚು ಆಸಕ್ತಿ ಇದೆ. ಈ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವುದು ಬೇಡ ಏನು ಹೆಚ್ಚಿನ ಅನುಕೂಲ ಬೇಕೋ, ಏನೇನು ಅಭಿವೃದ್ಧಿ ಕಾರ್ಯಗಳು ಆಗಬೇಕೋ ಆ ಬಗ್ಗೆ ಹೇಳಬೇಕು. ಮತ್ತೊಂದು ಬೇಡ, ಮಗದೊಂದು ಬೇಡ ಎಂದು ಹೇಳುವುದಕ್ಕೆ ಇದು ಯಾರೊಬ್ಬರ ಆಸ್ತಿ ಅಲ್ಲ. ವಿಶ್ವವಿದ್ಯಾನಿಲಯ ಅಗತ್ಯವಾಗಿ ಆಗಬೇಕು.

(ಗೊಂದಲ)

MR. DEPUTY SPEAKER.—This is not the way to maintain the dignity of the House.

ಶ್ರೀ ವಿ.ಎ. ಮತ್ತಿಕಟ್ಟಿ.—ಬೇರೆ ಕಡೆ ವಿಶ್ವವಿದ್ಯಾನಿಲಯಗಳು ಆದಾಗ ನಾವು ಬೇಡ ಎಂದು ಹೇಳಲಿಲ್ಲ. ಶಿವಮೊಗ್ಗದಲ್ಲಿ, ಮಂಗಳೂರಿನಲ್ಲಿ ಆದಾಗ ನಾವು ಬೇಡ ಎಂದು ಹೇಳಿದ್ದೇವೇ ? ಇದನ್ನು ಸಹಿಸುವುದಕ್ಕೆ ನಾವು ತಯಾರಿಲ್ಲ. ಬೇಕಾದರೆ ಹೆಚ್ಚಿನ ಅನುಕೂಲಗಳನ್ನು ಕೇಳಲಿ. ಮತ್ತೊಂದು ಆಗುವುದು ಬೇಡ ಎಂದು ಹೇಳಿದರೆ...

ಶ್ರೀ ಕೆ.ಎಚ್. ಹನುಮೇಗೌಡ.—ನಾನು ಸರ್ಕಾರ ವಿವೇಚಿಸಿ ಕೊಟ್ಟರೆ ಪರವಾಯಿಲ್ಲ...

(ಗೊಂದಲ)

MR. DEPUTY SPEAKER.—Nothing will be recorded.

* * * *

ಶ್ರೀ ಕೆ. ಎಚ್. ಹನುಮೇಗೌಡ.—ನನಗೆ ಏನು ಹೇಳಬೇಕೆಂದು ತೋರುತ್ತದೋ ಅದನ್ನು ಹೇಳುವ ಅಧಿಕಾರ ನನಗಿದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಾದ ಹನುಮೇಗೌಡರು ಮಾತನಾಡುತ್ತಾ ಯೂನಿವರ್ಸಿಟಿಯ ಬಗ್ಗೆ ಹೇಳಿದರೂ, ಅವರು ಹೇಳಿದ್ದರಿಂದ ಏನು ನಿರಾಶೆಯಾಗಬೇಕಿಲ್ಲ, ಅದನ್ನು ಪರಿಶೀಲನೆ ಮಾಡತಕ್ಕದ್ದು ಸರ್ಕಾರದ ಮುಂದಿರುವ ಪ್ರಶ್ನೆ, ಅದರ ಬಗ್ಗೆ ವಾದವಿವಾದಗಳು ಬೇಕಾಗಿಲ್ಲ. ಹನುಮೇಗೌಡರು ಏನು ಹೇಳಿದರು ? ತಾವು ಬೇಕಾದರೂ ಮಾತನಾಡಿ.

(INTERRUPTIONS)

---

*(As ordered by the Chair the matter was not recorded.)

MR. DY. SPEAKER.—Please resume your seats.

(INTERRUPTIONS)

MR. DY. SPEAKER.—Please don't record.

* * * *

(INTERRUPTIONS)

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವಾಗ, ಅದಕ್ಕೋಸ್ಕರ ಇಷ್ಟು ಉದ್ವೇಗದಿಂದ ಮಾತನಾಡಬೇಕಿಲ್ಲ. ಅವರ ಅಭಿಪ್ರಾಯ ಅವರು ಹೇಳಿದರು, ನಿಮ್ಮ ಅಭಿಪ್ರಾಯ ನೀವು ಹೇಳಿ. ತಾವು ಅರ್ಥ ಮಾಡಿಕೊಳ್ಳಬೇಕು ಮಾನ್ಯ ಹನುಮೇಗೌಡರು ಸಾಧಕ ಬಾಧಕಗಳನ್ನು ಹೇಳುತ್ತಿದ್ದಾರೆ. ಯೂನಿವರ್ಸಿಟಿ ಕೊಡುವುದರಿಂದ ಏನೇನು ತೊಂದರೆಗಳಾಗುತ್ತವೆ ಎಂಬುದನ್ನು ಹೇಳಿದರು. ತಾವು ಇನ್ನೊಂದು ಕೊಡಬೇಕೆಂದು ಹೇಳಿ ಯಾರು ಬೇಡ ಅಂದರು.

ಶ್ರೀ ವಿ.ವಿ. ಮತ್ತಿಕಟ್ಟಿ.—ಬೇರೆ ಕಡೆ ಅಗ್ರಿಕಲ್ಚರಲ್ ಯೂನಿವರ್ಸಿಟಿ ಕೊಡುವುದು ಬೇಡವೆಂದು ಹೇಳುವುದು ಬೇಡ. ಇನ್ನೂ ನಾಲ್ಕು ಯೂನಿವರ್ಸಿಟಿ ಕೊಡಲಿ ಎಂದು ಹೇಳಲಿ.

MR. DY. SPEAKER.—I will not allow him to speak further on this subject. Mr. Hanume Gowda, you shift to next point. Already your time is over.

ಶ್ರೀ ವಿ.ಬಿ. ಬಾವಿ.—ಮಾನ್ಯ ಹನುಮೇಗೌಡರು ವ್ಯವಸಾಯ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಬೇಕು. ಅಲ್ಲಿ ಯೂನಿವರ್ಸಿಟಿಯನ್ನು ಕೊಡುವುದು ಬೇಡವೆಂದು ಹೇಳುವುದಕ್ಕೆ ಅವರಿಗೇನು ಅಧಿಕಾರವಿದೆ ?

MR. DY. SPEAKER.—Please resume your seat. You can counter argue the case.

SRI K.H. HANUMEGOWDA.—You have to control the House.

MR. DY. SPEAKER.—I know. Please continue your speech.

ಶ್ರೀ ವಿ.ಬಿ. ಬಾವಿ.— ಅಲ್ಲ ಅವರಿಗೇನು ಅಧಿಕಾರವಿದೆ ?

ಶ್ರೀ ಕೆ.ಎಚ್. ಹನುಮೇಗೌಡ.—ನನ್ನ ಅಭಿಪ್ರಾಯ ನಾನು ಹೇಳುತ್ತೇನೆ. ನನಗೂ ಹೇಳುವ ಅಧಿಕಾರವಿದೆ. ಇನ್ನೊಂದು ಸಾರಿ ಹೇಳುತ್ತೇನೆ.

SRI K. BHASKER NAIDU.—Already there are so many depthsin this sound. Sri Hanume Gowda has blood-pressure let him have patience and speak.

ಶ್ರೀ ಕೆ.ಎಚ್. ಹನುಮೇಗೌಡ.—ಮಾನ್ಯ ಸದಸ್ಯರಾದ ಭಾಸ್ಕರನಾಯ್ಡುರವರು ಹೇಳಿದಂತಹ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. Whether I have get right to speak, Please give a ruling.

(INTERRUPTIONS)

SRI QAMARUL ISLAM.—I am on a point of order. Whether any member can express his feelings. Please give a ruling on this.

---

*As ordered by the Chair, the matter was not recorded.

SRI V. B. BHAVI.—I do agree that any member can express his feeling. But he cannot provocate others.

MR. DY. SPEAKER.—The House has noted your feelings.

KUM. S. PRAMILA.—I am on a point of order.

SRI V.B. BHAVI.—If he goes on talking like this, we should also be given chance to speak.

ಕು. ಎಸ್. ಪ್ರಮಿಳ.—ಮಾನ್ಯ ಸದಸ್ಯರು ಮಾತನಾಡತಕ್ಕಂತಹ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ನಾವೇನು ಕೈಯಲ್ಲಿ ಬಳೆ ಇಟ್ಟುಕೊಂಡಿಲ್ಲವೆಂದು. ನಾನು ಕೇಳುವುದು ಇಷ್ಟೆ, ಬಳೆ ಇಟ್ಟುಕೊಳ್ಳುವುದು ಸೌಭಾಗ್ಯದ ಲಕ್ಷಣ, ಬಳೆ ಇಟ್ಟುಕೊಳ್ಳುವ ಬಗ್ಗೆ ಇದೇರೀತಿ ಹಿಂದೆ ಹಲವಾರು ಸಲ ಪ್ರಸ್ತಾಪ ಮಾಡಲಾಗಿದೆ. ಆದುದರಿಂದ...

MR. DY. SPEAKER.—There is no point of order.

SRI H. SHIVAPPA.—Point of order.

MR. DY. SPEAKER.—What is your point of order.

ಶ್ರೀ ಎಚ್. ಶಿವಪ್ಪ.—ಸದಸ್ಯರು ಮಾತನಾಡುವಾಗ ಅನೇಕ ಜನ ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ, ಇಲ್ಲಿ ಡೆತ್ ಆಗಿರುವುದು ಬೇಡವೆಂದು, ಇದನ್ನು ರೆಕಾರ್ಡ್‌ನಿಂದ ತೆಗೆಯಬೇಕು.

MR. DY. SPEAKER.—There is no point of order. Please resume your seat. Mr. Hanumegowda, are you going to conclude or shall I call next member.

ಶ್ರೀ ಕೆ.ಎಚ್. ಹನುಮೇಗೌಡ.—ಒಬ್ಬ ಸದಸ್ಯರಿಗೆ ಇನ್ನೊಬ್ಬ ಸದಸ್ಯರು ಹೀಗೆ ಮಾತನಾಡಬೇಕೆಂದು ಹೇಳುವ ಅಧಿಕಾರ ಇದೆಯೇ ? ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

MR. DY. SPEAKER.—Whether you will conclude or not ? Please resume your seats Mr. D.T. Ramu and Mathikatti... Mr. Hanumegowda please come to your conclusion.

ಶ್ರೀ ಕೆ.ಎಚ್. ಹನುಮೇಗೌಡ.—ಈಗ ಅರ್ಧ ಗಂಟೆ ಮಾತನಾಡಿದ್ದೇನೆ. ಗಲಾಟೆಯಾದರೆ ನಾನೇನು ಮಾಡಬೇಕು ? ನೀವು ಕಂಟ್ರೋಲ್ ಮಾಡಿ. ವಿಷಯದ ಬಗ್ಗೆ ಮಾತನಾಡಬೇಡವೇ ? ತಾವು ಮೊದಲು ರೂಲಿಂಗ್ ಕೊಡಿ, ಆಮೇಲೆ ಮಾತನಾಡುತ್ತೇನೆ. ನನ್ನ ಅಭಿಪ್ರಾಯ ನಾನು ಹೇಳುತ್ತೇನೆ. ಐ.ಸಿ.ಆರ್. ಇದೆ, ಸರ್ಕಾರ ಇದೆ.

ಉಪಾಧ್ಯಕ್ಷರು.—ಮುಂದೆ ಮಾತನಾಡಿ. ೫ ನಿಮಿಷ ಮಾತ್ರ ಮಾತನಾಡಿ. ಈಗಾಗಲೇ ೨೦ ನಿಮಿಷ ಮಾತನಾಡಿದ್ದೀರಿ.

ಶ್ರೀ ಕೆ.ಎಚ್. ಹನುಮೇಗೌಡ.—ಬೇರೆಯವರು ಮಾತನಾಡುವುದನ್ನು ನಿಲ್ಲಿಸಿ, ನಾನು ಮಾತನಾಡುತ್ತೇನೆ. Is it my duty ?

MR. DY. SPEAKER.—Why do you give scope for this ? ಮಾತನಾಡಿ.

ಶ್ರೀ ಕೆ. ಎಚ್. ಹನುಮೇಗೌಡ.—ಬೇರೆಯವರು ಮಾತನಾಡುವುದನ್ನು ನಿಲ್ಲಿಸಿ, ನಾನು ಮಾತನಾಡುತ್ತೇನೆ.

MR. DY. SPEAKER.—I will give 5 more minutes. Already you have taken 40 minutes. ತಾವು ಮಾತನಾಡದಿದ್ದರೆ ಬೇರೆಯವರಿಗೆ ಮಾತನಾಡಲು ಕರೆಯುತ್ತೇನೆ.

(INTERRUPTIONS)

ಶ್ರೀ ಕೆ. ಎಚ್. ಹನುಮೇಗೌಡ.—ಬೇರೆಯವರು ಮಾತನಾಡುವುದನ್ನು ನಿಲ್ಲಿಸಿ. Please control the House. I have not concluded my speech.

(INTERRUPTIONS)

ಇನ್ನು ಎರಡನೆಯದಾಗಿ ಸಂಶೋಧನೆ ಬಗ್ಗೆ ಹೇಳುವುದಾದರೆ ಇದರಲ್ಲಿ ಸ್ವಲ್ಪ ಉತ್ತಮವಾಗಿ ಕೆಲಸ ನಡೆಯುತ್ತಾ ಇದೆ ಎಂದು ಹೇಳುತ್ತೇನೆ. ಈ ಸಿರಿಕಲ್ಚರ್ ಬಾಬಿನಲ್ಲಿ ಊಜಿ ನೊಣ ಈಗ ಏನು ಬಂದಿದೆಯೋ ಇದರಿಂದ ರೇಷ್ಮೆ ಬೆಳೆಗಾರರು ತಲ್ಲಣಿಸುತ್ತಿದ್ದಾರೆ, ಇದರ ಬಗ್ಗೆ ಆ ರೈತರಿಗೆ ದೊಡ್ಡ ಗಂಡಾಂತರವಾಗಿದೆ. ಆದುದರಿಂದ ಇದರ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆ ಆಗಬೇಕು ಎಂದು ತಿಳಿಯಬಯಸುತ್ತೇನೆ. ಇದುವರೆಗೆ ಬಿ.ಎಸ್.ಸಿ. ಸಿರಿಕಲ್ಚರ್ ಮಾಡಿದವರನ್ನು ಈ ಸಿರಿಕಲ್ಚರ್ ಡಿಪಾರ್ಟ್‌ಮೆಂಟಿನವರು ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಕೊಡುತ್ತಿದ್ದರು. ಹಾಗೆಯೇ ಎಂ.ಎಸ್.ಸಿ. ಸಿರಿಕಲ್ಚರ್ ಆದವರನ್ನು ಈ ಕೃಷಿ ವಿಶ್ವವಿದ್ಯಾನಿಲಯದಲ್ಲಿ ತೆಗೆದುಕೊಂಡು ಟ್ರೈನಿಂಗ್ ಕೊಡಬೇಕು ಎಂದು ಹೇಳುತ್ತೇನೆ.

ಸ್ವಾಮಿ, ನಾನು ಮಾತನಾಡುತ್ತಾ ಇರುವಾಗ ಆ ಕಡೆಯವರು ಗಲಾಟೆ ಮಾಡುತ್ತಿದ್ದಾರಲ್ಲಾ ಇದು ಸರಿಯೇ ? ಅವರು ಮಾತನಾಡಿದರೆ ನನಗೇನೂ ನಷ್ಟವಿಲ್ಲಾ ಆದರೆ ನಾನು ಯಾರ ಕಡೆ ನೋಡಿ ಮಾತನಾಡಬೇಕು ಹೇಳಿ. ಅವರಿಗೆ ಸುಮ್ಮನೆ ಇರುವ ಹಾಗೆ ಹೇಳಿ.

ಉಪಾಧ್ಯಕ್ಷರು.—ನೀವು ನನ್ನ ಕಡೆ ನೋಡಿ ಮಾತಾನಾಡಿ. Why do you speak that side ? I think you are not interested.

ಶ್ರೀ ಕೆ.ಎಚ್. ಹನುಮೇಗೌಡ.—**ನಾನು ಊಜಿ ನೊಣದ ಬಗ್ಗೆ ಮಾತನಾಡುತ್ತಾ ಇರುವಾಗ ಈ ರೀತಿ ಗಲಾಟೆ ಮಾಡುತ್ತಿದ್ದಾರಲ್ಲಾ ಇದು ಸರಿಯೇ ? ಮೊದಲು ಅರ್ಧಗಂಟೆಯೆಲ್ಲಾ ಆ ಗಲಾಟೆಯಾಯಿತು, ಮತ್ತೆ ಇನ್ನೊಂದು ತರಹದಲ್ಲಿ ಈಗ ಗಲಾಟೆ ಮಾಡುತ್ತಿದ್ದಾರೆ.

SRI K. BHASKAR NAIDU.—You please see that saying like that is too much.

(INTERRUPTIONS)

MR. DY. SPEAKER.—There was no intention.

SRI K. BHASKAR NAIDU.—How do you say it ? He is an Hon. Member. He cannot say like that. It has gone into the record. With due respect I say it should be expunged.

MR. DY. SPEAKER.—I will examine it.

ಶ್ರೀ ಕೆ.ಎಚ್. ಹನುಮೇಗೌಡ.—ಮಾನ್ಯ ಸದಸ್ಯರು ಮಾತನಾಡತಕ್ಕಂಥಾದ್ದು ಸರಿಯೇ ? ಅವರು ಎದ್ದು ಗಲಾಟೆ ಮಾಡುತ್ತಾ ಹೋದರೆ ನಾನು ಹೇಗೆ ಮಾತನಾಡಲಿ ?

MR. DY. SPEAKER.—Again you are raising a controversy. It should be examined.

SRI K. BHASKAR NAIDU.—Still I am on my legs. It has to be expunged.

MR. DY. SPEAKER.—I will go into the proceedings. It will be expunged.

SRI K. BHASKAR NAIDU.—He has to be with in his limits.

---

*As ordered by the Chair the words are expunged.

ಶ್ರೀ ಕೆ. ಹೆಚ್. ಹನುಮೇಗೌಡ.—ಹೋಗಲಿ ಬೇಕಾದರೆ ಎಕ್ಸ್‌ಪಂಜ್ ಮಾಡಿಕೊಳ್ಳಿ, ಉಪಾಧ್ಯಕರು ತಮ್ಮ ಭಾಷಣವನ್ನು ಬೇಗನೆ ಮುಗಿಸಿ, ಮತ್ತೊಬ್ಬ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಮೊದಲೇ ಹೇಳಿದ ಹಾಗೆ ಇಂತಹ ಉಪಯುಕ್ತವಾದ ಕೆಲಸವನ್ನು ಈ ಕೃಷಿ ವಿಶ್ವವಿದ್ಯಾನಿಲಯ ಮಾಡುತ್ತಾ ಇದ್ದರೂ ಕೂಡ ಅದಕ್ಕೆ ಸಾಕಷ್ಟು ಹಣವನ್ನು ಒದಗಿಸುತ್ತಾ ಇಲ್ಲ. ತಮಗೆ ಹೇಳಬೇಕಾದರೆ ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ಪ್ಲಾನ್ ಗ್ರಾಂಟ್‌ನಲ್ಲಿ ಬೇರೆ ಕೊಡುತ್ತಿದ್ದಾರೆ ಈ ಬಗ್ಗೆ ಹೆಚ್ಚು ಸಂಶೋಧನೆ ಮಾಡುವುದಕ್ಕೆ ೧೦೦ಕ್ಕೆ ೮೦ ಭಾಗದಷ್ಟು ಹಣವನ್ನು ಅವರಿಂದ ಪಡೆಯುತ್ತಿದ್ದಾರೆ. ಪಂಜಾಬ್ ಮತ್ತು ಹರಿಯಾಣ ಮತ್ತು ಇತರೇ ರಾಜ್ಯಗಳಲ್ಲಿ ಈ ಬಗ್ಗೆ ೮೦೦ ಕೋಟಿ ರೂಪಾಯಿ ಉತ್ಪತ್ತಿ ಇದ್ದರೆ ಅದರಲ್ಲಿ ಕಡೇ ಪಕ್ಷ ಒಂದು ಪರ್ಸೆಂಟ್ ಆದರೂ ಕೊಟ್ಟು ಅಂದರೆ ೮ ಕೋಟಿ ರೂಪಾಯಿ ಆದರೂ ಕೊಟ್ಟರೆ ಇದರ ಬಗ್ಗೆ ಇನ್ನೂ ಹೆಚ್ಚು ಉತ್ಪತ್ತಿ ತೆಗೆಯುವುದಕ್ಕೆ ಸಾಧ್ಯ. ಸರ್ಕಾರದವರು ಈ ಬಗ್ಗೆ ಒತ್ತಾಯ ಮಾಡಬೇಕು ಎಂದು ಹೇಳುತ್ತೇನೆ. ಈಗ ಕೊಡುತ್ತಾ ಇರುವ ಗ್ರಾಂಟ್ ಹೇಗೆ ಇದೆ ಎಂದರೆ ಆರನೇ ಪಂಚವಾರ್ಷಿಕ ಯೋಜನೆಗೆ ೫/- ಕೋಟಿ ರೂಪಾಯಿ ಇಟ್ಟಿದ್ದರೆ ೧೯೮೦-೮೧ ಕ್ಕೆ ೮೧ ಲಕ್ಷ ೧೯೮೧-೮೨ಕ್ಕೆ ಒಂದು ಕೋಟಿ ರೂಪಾಯಿ ೧೯೮೨-೮೩ಕ್ಕೆ ೨½ ಕೋಟಿ ರೂಪಾಯಿ ೧೯೮೩-೮೪ಕ್ಕೆ ೨½ ಕೋಟಿ ರೂಪಾಯಿ, ೧೯೮೪-೮೫ಕ್ಕೆ ಒಂದು ಕೋಟಿ ರೂಪಾಯಿ ೩೫ ಲಕ್ಷ ಕೊಡಬೇಕಾಗುತ್ತದೆ. ಹೀಗೆ ಸಮವಾಗಿ ಹಂಚಿದರೆ ಕಷ್ಟವಾಗುತ್ತದೆ, ಆದುದರಿಂದ ಮುಂದಿನ ೩ ವರ್ಷದಲ್ಲಾದರೂ ಕೊಡಬೇಕಾದಂಥಾ ೬ ಕೋಟಿ ೩೦ ಲಕ್ಷ ರೂಪಾಯಿಯನ್ನು ಮುಂದಿನ ಬಡ್ಜೆಟ್‌ನಲ್ಲಾದರೂ ಅಳವಡಿಸಿಕೊಂಡು ಈ ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಲ್ಲಿ ಸುಮಾರು ೫ ಕೋಟಿ ರೂಪಾಯಿಯನ್ನು ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ಈ ಡ್ರೈ ಕ್ರಾಪ್ಸ್ ಸಂಶೋಧನೆಗೆ ಕೊಟ್ಟಿದ್ದಾರೆ. ಈ ಬಗ್ಗೆ ಬಿಜಾಪುರದಲ್ಲಿ ಒಂದು ಸಂಶೋಧನಾ ಕೇಂದ್ರ, ಬೀದರ್‌ನಲ್ಲಿ ಒಂದು ಸಂಶೋಧನಾ ಕೇಂದ್ರ, ತೆಗೆಯುತ್ತಾರೆ ಹಾಗೆಯೇ ಧರ್ಮಾವರಂನಲ್ಲಿ ಒಂದು ಸಂಶೋಧನಾ ಕೇಂದ್ರ, ನಾಗಮಂಗಲದಲ್ಲಿ ಒಂದು ಸಂಶೋಧನಾ ಕೇಂದ್ರ ಹೀಗೆ ೫-೬ ಸಂಶೋಧನಾ ಕೇಂದ್ರಗಳನ್ನು ತೆಗೆಯಬೇಕಾಗುತ್ತದೆ. ಸುಮಾರು ಇದಕ್ಕೆಲ್ಲಾ ಒಂದೊಂದು ಕೋಟಿ ರೂಪಾಯಿಯನ್ನು ಕೊಡಬೇಕಾಗುತ್ತದೆ. ಏತಕ್ಕೆಂದರೆ ಈ ಸಂಶೋಧನಾ ಕೇಂದ್ರ ತೆರೆಯಲು ಅದಕ್ಕೆ ಬೇಕಾದಂಥಾ ಜಮೀನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಈ ಹಣ ಕೊಡಬೇಕಾಗುತ್ತದೆ. ಆದಷ್ಟು ಜಾಗ್ರತೆ ಈ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಲಿಚ್ಛಿಸುತ್ತೇನೆ. ಈ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಏನು ಹಣವನ್ನು ಇದಕ್ಕೆ ಕೊಡಬೇಕು ಅದನ್ನು ನಿಗದಿ ಮಾಡಿ, ಈ ಕೃಷಿ ವಿಶ್ವವಿದ್ಯಾನಿಲಯಕ್ಕೆ ಆ ಹಣವನ್ನು ಕೊಟ್ಟು ಅದರಲ್ಲಿ ಇನ್ನೂ ಉತ್ತಮವಾದ ಕೆಲಸ ನಡೆಯುವ ಹಾಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಕೋ-ಆಪರೇಷನ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಈ ಸಹಕಾರಿ ಇಲಾಖೆಯವರು ಮಾಡಬೇಕಾದಂಥಾ ಕೆಲಸ ರೈತರಿಗೆ ಸಕಾಲದಲ್ಲಿ ಸಾಲವನ್ನು ಒದಗಿಸಿಕೊಡತಕ್ಕಂಥಾ ಜವಾಬ್ದಾರಿ ಈ ಇಲಾಖೆಗೆ ಸಂಬಂಧಪಟ್ಟಿದ್ದಾಗಿದೆ. ಮೊದಲು ಈ ರೈತರಿಗೆ ಖಾಸಗಿಯವರು ಸಾಲ ಕೊಡುತ್ತಾ ಇದ್ದರು ಈವಾಗ ಕೊಡುತ್ತಾ ಇಲ್ಲ. ಆದುದರಿಂದ ಈ ಇಲಾಖೆಯಲ್ಲಿ ರೈತರಿಗೆ ಸಾಲ ವಿತರಣೆ ಎಷ್ಟರಮಟ್ಟಿಗೆ ಪರಿಪೂರ್ಣವಾಗಿ ಸಫಲವಾಗಿ ನಡೆಯಬೇಕೋ ಅಷ್ಟರ ಮಟ್ಟಿಗೆ ನಡೆದಿಲ್ಲ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಮೊದಲು ಈ ಸಹಕಾರ ಸಂಘಗಳು ಯಾವರೀತಿ ಇತ್ತು ಎಂದರೆ ಒಂದೊಂದು ಪಂಚಾಯಿತಿಗೂ ಒಂದೊಂದು ಸಹಕಾರಿ ಸಂಘ ಇತ್ತು, ಅನಂತರ ಅದನ್ನು ಎರಡು ಪಂಚಾಯಿತಿಗೊಂದು ಸಹಕಾರ ಸಂಘ ಮಾಡಿದರು. ಆ ಸಹಕಾರ ಸಂಘಗಳು ಹೆಚ್ಚು ಬಲಯುತವಾಗಿ ಉತ್ತಮವಾಗಿ ಕೆಲಸ ಮಾಡಲಿ ಅಂತ ಮಾಡಿದರು. ಈಗ್ಗೆ ೨ ವರ್ಷದ ಹಿಂದೆ ಎರಡೆರಡು ಪಂಚಾಯಿತಿಗಳಿಗೊಂದು ಸಹಕಾರೀ ಸಂಘ ಮಾಡಿದರು. ಹೀಗೆ ಅಮಾಲ್ಗಮೇಟ್ ಮಾಡಿ ಮಾಡಿದರೂ ಕೂಡ ಆ ಸೊಸೈಟಿಗಳು ಅಷ್ಟು ಚೆನ್ನಾಗಿ ಕೆಲಸ ಮಾಡಲಿಲ್ಲಾ. ಇದು ಜನರಿಗೂ ಗೊತ್ತಿದೆ, ಸರ್ಕಾರಕ್ಕೂ ಗೊತ್ತಿದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಮೊದಲು ಇದ್ದ ಹಾಗೆ ಒಂದೊಂದು ಪಂಚಾಯಿತಿಗೆ ಒಂದೊಂದು ಸಹಕಾರ ಸಂಘ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ಸಹಕಾರಿ ಇಲಾಖೆ ಎಂದರೆ ದುಡ್ಡು ಹೊಡೆಯುವ ಇಲಾಖೆಎಂದು ಒಂದು ಛಾನ್ಸ್ ಸಿಕ್ಕಿದರೆ ಸಾಕು ಈ ಸಹಕಾರೀ ಸಂಘದಲ್ಲಿ ದುಡ್ಡು ಹೊಡೆಯಬಹುದು ಅನ್ನುವ ಒಂದು ಮಾತು ಜನಸಾಮಾನ್ಯರಲ್ಲಿ ಬಂದುಬಿಟ್ಟಿದೆ. ತಮಗೆ ಹೇಳಬೇಕಾದರೆ ಈ ಸಹಕಾರ ಸಂಘದಲ್ಲಿ ಯಾರೇ ಇರಲಿ ಅಲ್ಲಿ ಸಾಲದ ವಿತರಣೆ ಹೇಗೆ ನಡೆಯುತ್ತಾ ಇದೆ ಎಂದರೆ ಅವನ ಹೆಸರು ಆ ಸಂಘದಲ್ಲಿ ಇರಲಿ ಇಲ್ಲದೇ ಇರಲಿ ಬೇನಾಮಿ ಸಾಲಗಳನ್ನು ಕೊಟ್ಟು ಬಿಡುತ್ತಾರೆ. ಒಂದೊಂದು ಸಾರಿ ಅವರ ಹೆಸರೇ ಇರುವುದಿಲ್ಲ. ಯಾರದೋ ಹೆಸರು ಇರುತ್ತದೆ ಸರಿಯಾದಂಥಾ ದಾಖಲೆ ವಗೈರೆ ಇರುವುದಿಲ್ಲ. ಹೀಗಾಗಿ ನಮ್ಮ ಹಾಸನ ಜಿಲ್ಲೆಯಲ್ಲಿ ಸುಮಾರು ೬೦-೭೦ ಲಕ್ಷ ರೂಪಾಯಿಗಳಷ್ಟು ಹಣ ರಿಕವರಿ ಆಗದೇ ಹಾಗೆಯೇ ಇದೆ. ಹಾಗೆಯೇ ಮಾನ್ಯ ಸದಸ್ಯರೊಬ್ಬರು ಹೇಳಿದರು ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ೧½ ಕೋಟಿ ರೂಪಾಯಿಯಷ್ಟು ಹಣ ರಿಕವರಿ ಆಗದೇ ಇದೆ ಎಂದು. ಈ ಬೇನಾಮಿ ಸಾಲಗಳು ಎಲ್ಲಾ ಕಡೆಯೂ ಇದೆ. ಸುಮಾರು ಕೋಟ್ಯಾಂತರ ರೂಪಾಯಿಗಳಷ್ಟು ಹಣ ಈ ಸಹಕಾರೀ ಸಂಘದಲ್ಲಿ ದುರುಪಯೋಗವಾಗಿದೆ. ಇದನ್ನು ತಪ್ಪಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಹತ್ತಾರು ವರ್ಷಗಳಿಂದಲೂ ಕೂಡ ಹೀಗೆ ನಡೆದ ಕೊಂಡು ಬರುತ್ತಾ ಇದೆ. ಅವರಿಂದ ರಿಕವರಿಯನ್ನೂ ಸಹ ಮಾಡುವುದಕ್ಕಾಗಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಇಲಾಖೆಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಏನು ಇದ್ದಾರೆ ಅವರು ಈ ಬಗ್ಗೆ ಏನು ಮಾಡುತ್ತಿದ್ದಾರೆ, ಏತಕ್ಕಾಗಿ ಅವರು ಇದರ ಬಗ್ಗೆ ಜಾಗೃತಿ ವಹಿಸಲಿಲ್ಲಾ ಎಂದು ಕೇಳುತ್ತೇನೆ. ಅಲ್ಲದೆ ಇದರ ಬಗ್ಗೆ ಕಾನೂನಿನ ಅಡಚಣೆ ಏನಾದರೂ ಇದೆಯೇ ? ಒಂದು ವೇಳೆ ಇದ್ದರೆ ಆ ಬಗ್ಗೆ ಒಂದು ಅಮೆಂಡ್‌ಮೆಂಟ್ ಆದರೂ ತಂದು ತಕ್ಕ ಕ್ರಮ ತೆಗೆದುಕೊಳ್ಳಿ. ಇದಕ್ಕೆ ನೀವು ಸರಿಯಾದ ಒಂದು ವ್ಯವಸ್ಥೆ ಮಾಡದೇ ಹೋದರೆ ಸುಮಾರು ಕೋಟ್ಯಾಂತರ ರೂಪಾಯಿ ಹಣ ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ. ಅಲ್ಲದೆ ಇದರಲ್ಲಿ ಯಾರು ಡೀಫಾಲ್ಟರ್ ಇದ್ದಾರೆ ಅವರನ್ನು ಗುರುತಿಸಿ ಅವರ ಮೇಲೆ ಸರಿಯಾದಂಥಾ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲವಾಗುವಂತೆ ಮಾಡಿ. ತಮಗೆ ಹೇಳಬೇಕಾದರೆ ಈ ಇಲಾಖೆಯಲ್ಲಿ ಉನ್ನತ ಮಟ್ಟದಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅವರನ್ನು ಒಳಗೊಂಡಂತೆ ಈ ಬಗ್ಗೆ ಒಂದು ಕಮಿಟಿ ಮಾಡಿ ಸರ್ಕಾರಕ್ಕೆ ಈ ಸಹಕಾರೀ ಸಂಘದಿಂದ ಬರಬೇಕಾದಂಥಾ ಬೇನಾಮಿ ಸಾಲಗಳು ಏನು ಇವೆ ಅದರ ರಿಕಾರ್ಡ್ ನೋಡಿ ಆ ಹಣವನ್ನು ರಿಕವರಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳು ಏನು ಬೇಕೋ ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಹೀಗಾದರೆ ಆ ರೈತರ ಕಲ್ಯಾಣ ಮಾಡುವುದಕ್ಕೂ ಸಾಧ್ಯ ಇದೆ. ಈ ಬಗ್ಗೆ ನಿಮ್ಮ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳ ಒಂದು ಕಮಿಟಿ ಮಾಡಿ ಅವರಿಂದ ಇದರ ಬಗ್ಗೆ ಒಂದು ರಿಪೋರ್ಟ್ ತರಿಸಿಕೊಂಡು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ತಮಗೆ ಇನ್ನೊಂದು ಉದಾಹರಣೆ ಹೇಳಬೇಕಾದರೆ ಸೌತ್‌ಕೆನರಾದ ಸಿರತಾಡಿ ಸೊಸೈಟಿಯಲ್ಲಿ ಸುಮಾರು ೧೬ ಲಕ್ಷ ರೂಪಾಯಿ ದುರುಪಯೋಗ ಮಾಡಿದ್ದಾರೆ ಎಂದು ತಮಗೆ ತಿಳಿದಿರಬೇಕು. ಅವರು ಒಳ್ಳೆಯ ಪ್ರಭಾವಿ ವ್ಯಕ್ತಿಗಳೇ. ಇದರಲ್ಲಿ ಸುಮಾರು ೧೦-೧೨ ಜನರು ಆಗಲೇ ಸತ್ತುಹೋಗಿ ೮-೧೦ ವರ್ಷವಾಗಿದೆ. ಅವರು ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಏತಕ್ಕೆ ತಡ ಮಾಡಿದರು ? ಮಾನ್ಯ ಸಚಿವರು ಈ ಸಹಕಾರೀ ಸಂಘದಲ್ಲಿ ಆಗತಕ್ಕಂಥಾ ತೊಂದರೆಯನ್ನು ನಿವಾರಿಸುವಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ,

ಅದಕ್ಕೆ ಯಾರ ಯಾರದೋ ರುಜು ಹಾಕಿಸಿದ್ದಾನೆ. ಸಂಬಂಧಪಟ್ಟವರು ರುಜು ಹಾಕಿಲ್ಲ, ಹೀಗೆ ಸುಮಾರು ೧೬ ಲಕ್ಷ ರೂಪಾಯಿಗಳ ದುಡ್ಡನ್ನು ಒಬ್ಬ ಮನುಷ್ಯ ದುರುಪಯೋಗ ಮಾಡಿದ್ದಾನೆ ಎಂದರೆ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇರಲಿಲ್ಲವೆ? ಅವರು ಏನು ಮಾಡಿದ್ದಾರೆ ಈ ಬಗ್ಗೆ ಪೂರ್ಣವಾಗಿ ವಿಚಾರಣೆ ಮಾಡುವುದಕ್ಕೆ ಮಾನ್ಯ ಸಚಿವರು ಸೂಚನೆ ಕೊಡಬೇಕು ಎಂದು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ ಆ ೧೬ ಲಕ್ಷ ರೂಪಾಯಿಗಳಲ್ಲಿ ಒಂದು ಆಣೆಯೂ ಸಹ ವಸೂಲು ಆಗುವ ಹಾಗಿಲ್ಲವಂತೆ. ಆತ ಬಹಳ ಪ್ರಭಾವಯುತನಾದ ವ್ಯಕ್ತಿ. ಅವನು ಏನು ಮಾಡಿದ್ದಾನೆ ಗೊತ್ತೇ ಈ ಕೇಸ್ ಸಿ.ಓ.ಡಿಗೆ ರೆಫರ್ ಆಯಿತು. ಆ ಸಿ.ಓ.ಡಿ. ಇನ್ಸ್‌ಪೆಕ್ಟರ್ ಯಾರಿದ್ದಾರೆ ಅವರ ಟ್ರಾನ್ಸ್‌ಫರ್ ಆಯಿತು. ಏಕೆಂದರೆ ಅವನು ಚಾರ್ಜ್‌ಷೀಟ್ ಕೊಟ್ಟುಬಿಡುತ್ತಾನೆ ಎಂದು ಹೇಳಿ ಅವನನ್ನು ಟ್ರಾನ್ಸ್‌ಫರ್ ಮಾಡಿದರು. ಅದನ್ನು ಯಾರು ಮಾಡಿದರೋ, ಏನೋ ಎಂತೋ ನನಗಂತು ಅದು ಅರ್ಥವಾಗುತ್ತಾ ಇಲ್ಲ, ಇದರ ಕಡೆಗೆ ಮಾನ್ಯಮಂತ್ರಿಯವರು ಗಮನ ಕೊಡಬೇಕು. ಇದರಲ್ಲಿ ಡೆಪ್ಯುಟಿ

ಚೀಫ್ ಆಡಿಟರ್‌ರವರು ಅವರ ಜೊತೆಯಲ್ಲಿ ಸೇರಿಕೊಂಡು ಬಿಟ್ಟಿದ್ದಾರೆ. ಯಾರು ೧೬ ಲಕ್ಷ ರೂಪಾಯಿಗಳನ್ನು ನುಂಗಿದ್ದಾರಲ್ಲ ಅವರ ಜೊತೆಯಲ್ಲಿ ಇವರು ಶಾಮೀಲಾಗಿದ್ದಾರೆ. ಈ ಕೇಸನ್ನು ಬ್ಯಾಡ್‌ಡೆಟ್ ಎಂದು ಟ್ರೀಟ್ ಮಾಡಿ ಅವನು ಎಲ್ಲಾದರೂ ಹಾಳಾಗಿ ಹೋಗಲಿ ಎಂದು ಬಿಟ್ಟುಬಿಡುವ ಮಟ್ಟಕ್ಕೆ ಬಂದಿದ್ದಾರೆ. ಡೆಪ್ಯುಟಿ ಚೀಫ್ ಆಡಿಟರ್‌ರವರು ಅವರ ಜೊತೆ ಸೇರಿಕೊಂಡು ಈ ಕೇಸನ್ನು ಬ್ಯಾಡ್ ಡೆಟ್ ಎಂದು ಟ್ರೀಟ್ ಮಾಡಿ ಕೈಮುಗಿದುಬಿಡೋಣ ಎಂದು ಹೇಳುತ್ತಿದ್ದಾರೆ. ಇದನ್ನು ಕೇಳಿ ನನಗೆ ವ್ಯಥೆಯಾಗುತ್ತಿದೆ. ಇಂತಹ ಕದೀಮರು ಈ ಇಲಾಖೆಯಲ್ಲಿ ಇರುವುದರಿಂದಲೇ ಸಹಕಾರ ಇಲಾಖೆಗೆ ಕೆಟ್ಟ ಹೆಸರು ಬರುತ್ತಿರತಕ್ಕಂಥಾದ್ದು. ಈ ಕೇಸನ್ನು ಸಿ.ಓ.ಡಿ ಗೆ ರೆಫರ್ ಮಾಡಿದ್ದಾರೆ. ಆದರೂ ತಾವೇ ಖುದ್ದಾಗಿ ಈ ಬಗ್ಗೆ ಎನ್‌ಕ್ವೈರಿ ಮಾಡಬೇಕು. ಯಾರು ಹಣವನ್ನು ಲೂಟಿ ಮಾಡಿದ್ದಾರೆ ಅವರಿಂದ ಹಣವನ್ನು ರಿಕವರಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೌತ್‌ಕೆನರಾದಲ್ಲಿ ಬಡವರಿಗೆ ಹಂಚುವುದಕ್ಕಾಗಿ ಪಾಮೋಲಿನ್ ಆಯಿಲ್ಲನ್ನು ಕೊಟ್ಟರು. ಅಲ್ಲಿ ೪೪ ಲಕ್ಷ ರೂಪಾಯಿಗಳ ಎಣ್ಣೆ ದುರುಪಯೋಗವಾಗಿದೆ. ಈ ವಿಚಾರ ಪೇಪರ್‌ನಲ್ಲಿ ಕೂಡ ಬಂದಿದೆ. ನಾನು ಅದನ್ನು ಓದಿದ್ದೇನೆ. ತಾವು ಕೂಡ ಓದಿರಬಹುದು. ೪೪ ಲಕ್ಷ ರೂಪಾಯಿಗಳ ಪಾಮೋಲಿನ್ ಆಯಿಲ್ ಕಂಪ್ಲೀಟ್ ಆಗಿ ದುರುಪಯೋಗವಾಗಿದೆ. ಯಾರೋ ಒಬ್ಬ ನಿರಪರಾಧಿ ಆಫೀಸರ್ ಇದಕ್ಕೆ ಬಲಿಯಾದರು ಎಂದು ಹೇಳುತ್ತಿದ್ದರು. ಅದು ನಿಜವೋ ಸುಳ್ಳೋ ಗೊತ್ತಿಲ್ಲ. ಇದರ ಬಗ್ಗೆ ತನಿಖೆಯಾಗಬೇಕು. ಈ ಬಗ್ಗೆ ತನಿಖೆಯಾಗಿ ಯಾರು ತಪ್ಪಿತಸ್ತರಿದ್ದಾರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಪ್ರತಿದಿವಸ ನಾವು ಈ ಬಗ್ಗೆ ಒಂದಲ್ಲ ಒಂದು ವಿಚಾರವನ್ನು ಕೇಳುತ್ತಿದ್ದೇವೆ, ಪೇಪರ್‌ನಲ್ಲಿ ಓದುತ್ತಿದ್ದೇವೆ, ನಾವು ಇಲ್ಲಿ ಅಸೆಂಬ್ಲಿಯಲ್ಲಿ ಮಾತನಾಡುತ್ತಿದ್ದೇವೆ. ಅಲ್ಲಿ ದುರುಪಯೋಗ, ಇಲ್ಲಿ ದುರುಪಯೋಗ ಎಂದು ವಿಚಾರ ಕೇಳುತ್ತಿದ್ದರೂ ಯಾರ ಮೇಲೂ ಕೂಡ ಕಠಿಣವಾದ ಕ್ರಮ ತೆಗೆದುಕೊಳ್ಳಲಿಲ್ಲ. ತಪ್ಪಿತಸ್ಥ ಜನರು ಯಾರೂ ೧೦ ವರ್ಷ ಜೈಲಿಗೆ ಹೋಗಲಿಲ್ಲ. ಅವರೆಲ್ಲಾ ನುಳುಚಿಕೊಂಡು ಬರುತ್ತಿದ್ದಾರೆ. ಈ ಒಂದು ಅವ್ಯವಹಾರ ಬಹಳ ಸಮರ್ಥನೀಯವಾಗಿ ನಡೆಯುತ್ತಿದೆ. ಇನ್ನು ಮುಂದಾದರೂ ಕೂಡ ಇಂತಹ ಅವ್ಯವಹಾರ ನಡೆಯುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಇನ್ನೊಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ನಮ್ಮ ಹಾಸನ ಟೌನ್‌ನಲ್ಲಿ ಅಂದರೆ ನನ್ನ ಕ್ಷೇತ್ರದಲ್ಲಿ ಡಿಸ್ಟ್ರಿಕ್ ಮಾರ್ಕೆಟಿಂಗ್ ಸೊಸೈಟಿ ಇದೆ. ಅಲ್ಲಿ ೭ ಲಕ್ಷ ರೂಪಾಯಿಗಳ ದುರ್ವ್ಯವಹಾರ ನಡೆದಿದೆ. ಇದೊಂದು ತರಹ ಅವ್ಯವಹಾರ. ಇದರ ಕತೆ ಬಹಳ ಚೆನ್ನಾಗಿ ಇದೆ. ಗೌರ್ನಮೆಂಟ್ ಷೇರಿನಲ್ಲಿ ಒಂದು ಆಣೆಯಷ್ಟೂ ಬಿಟ್ಟಿಲ್ಲ. ರೈತರು ಕೊಟ್ಟಂಥ ಷೇರು ಹಣದಲ್ಲಿ ಒಂದಾಣೆಯೂ ಬಿಟ್ಟಿಲ್ಲ. ಈ ಸೊಸೈಟಿ ಪ್ರಾರಂಭವಾಗಿ ೧೦–೧೨ ವರ್ಷ ನಡೆಯುತ್ತಿದೆ. ಈ ಸೊಸೈಟಿ ಪ್ರಾರಂಭವಾದಾಗ ೪ ಲಕ್ಷ ರೂ. ಗಳನ್ನು ಇದು ಚೆನ್ನಾಗಿ ಕೆಲಸಮಾಡಿ ಲಾಭ ಸಂಪಾದನೆ ಮಾಡಿತ್ತು. ಅದು ಮತ್ತು ಈಗಿನ ಲಾಭ ಎಲ್ಲಾ ಸೇರಿ ಒಟ್ಟು ೭ ಲಕ್ಷ. ಈಗ ೭ ಲಕ್ಷ ರೂಪಾಯಿಗಳಲ್ಲಿ ಒಂದು ನಯಾಪೈಸೆಯನ್ನೂ ಬಿಡದಹಾಗೆ ತಿಂದುಹಾಕಿದ್ದಾರೆ. ತಿನ್ನುವುದು ಎಂದರೆ ಅರ್ಧಂಬರ್ಧ ತಿನ್ನುವುದರ ಬಗ್ಗೆ ನಾನು ಕೇಳಿದ್ದೆ. ಇದರಲ್ಲಿ ಒಂದು ತರಹ ಪೂರ್ತಿಯಾಗಿ ತಿಂದುಬಿಟ್ಟಿದ್ದಾರೆ. ಇದಕ್ಕೆ ಏನು ಒಂದು ಸರಿಯಾದ ಪದ ಹೇಳಬೇಕೋ ನನಗೆ ಅರ್ಥವಾಗುತ್ತಾ ಇಲ್ಲ. ಈ ಒಂದು ವ್ಯವಹಾರ ೩–೪ ವರ್ಷದಿಂದ ನಡೆದಿದೆ. ಹೋದಸಾರಿ ಕೂಡ ನಾನು ಈ ವಿಚಾರದಲ್ಲಿ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ ಮತ್ತು ಮಾನ್ಯ ಮಂತ್ರಿಯವರ ಗಮನವನ್ನೂ ಸೆಳೆದಿದ್ದೆ. ತಪ್ಪಿತಸ್ತರನ್ನು ಇಮ್ಮೀಡಿಯಟ್ ಆಗಿ ಬಲಿ ಹಾಕಿಬಿಡುತ್ತೇನೆ ಎಂದು ಮಾನ್ಯ ಜಕನೂರ್‌ರವರು ಹೇಳಿದ್ದರು. ಅವರು ಹೇಳಿಕೆ ಕೊಟ್ಟಮೇಲೆ ಕೂಡ ಅಲ್ಲಿ ೨ ಮಳಿಗೆಗಳು ಆದವು. ಆ ಮಳಿಗೆಯನ್ನು ಸಗಣಿ ತಟ್ಟುವುದಕ್ಕೆ ೧೫ ಸಾವಿರಕ್ಕೆ ಕೊಟ್ಟುಬಿಟ್ಟು, ಅಲ್ಲಿದ್ದ ಬೋರ್ಡನ್ನು ಕಿತ್ತೊಗೆದು ಮನೆಗೆ ಹೋದರು. ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ, ಇವರ ಇಲಾಖೆ ಇರುವುದು ಏತಕ್ಕೆ ಇವರ ಅಧಿಕಾರಿಗಳು ಇರುವುದು ಏತಕ್ಕೆ ಹಣ ನುಂಗುವವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೇ? ಈ ೭ ಲಕ್ಷ ರೂಪಾಯಿಗಳಲ್ಲಿ ಕೇವಲ ೧೦ ರೂಪಾಯಿಗಳನ್ನು ಬಿಟ್ಟಿದ್ದರೂ ನಾನು ಸಂತೋಷಪಡುತ್ತಾ ಇದ್ದೆ. ಬಡಪಾಯಿ ಒಬ್ಬ ರೈತನ ಷೇರು ಹಣವನ್ನು ಬಿಟ್ಟಿದ್ದರೂ ನಾನು ಸಂತೋಷ ಪಡುತ್ತಾ ಇದ್ದೆ. ಆದರೆ ಅಲ್ಲಿ ೨ ಮಣದಷ್ಟು ಧೂಳು ಬಿಟ್ಟು ಹೋಗಿದ್ದಾರೆ. ಅದನ್ನು ಯಾರೂ ಗುಡಿಸಿಲ್ಲ. ಇಷ್ಟರಮಟ್ಟಿಗೆ ಸೊಸೈಟಿಯ ವ್ಯವಹಾರ ನಡೆಯುವುದಾದರೆ ಇನ್ನು ಎಷ್ಟರ ಮಟ್ಟಿಗೆ ಆ ಜನಗಳಿಗೆ ನಂಬಿಕೆ ಬರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಕೇಳುವುದಕ್ಕೆ ಇಚ್ಛೆಪಡು

ತ್ತಿದ್ದೇನೆ, ಇನ್ನು ಈ ಜನತಾಬಜಾರ್‌ಗಳಲ್ಲಿ ನಡೆಯುತಕ್ಕಂಥ ಕತೆ ಇದಕ್ಕಿಂತ ದೊಡ್ಡ ಕತೆ. ಅಲ್ಲಿ ಎಷ್ಟು ಪರ್ಸೆಂಟ್‌ಗೆ ಬಿಲ್ ಹಾಕಲಿ ಎಂದು ಕೇಳುತ್ತಾರೆ. ೧೦-೧೫-೨೦ ಪರ್ಸೆಂಟ್‌ಗೆ ಬಿಲ್ ಹಾಕು ತ್ತಾರೆ. ೫೦ ರೂಪಾಯಿಗಳನ್ನು ತೆಗೆದುಕೊಂಡಿದ್ದರೆ ಅವನಿಗೆ ಕೊಡುವುದು ಇಷ್ಟು, ಇವನಿಗೆ ಕೊಡು ವುದು ಇಷ್ಟು ಎಂದು ಮಾರ್ವಾಡಿ ಲೆಕ್ಕ ಹಾಕಿ ೧೨೫ ರೂಪಾಯಿಗೆ ಬಿಲ್ ಹಾಕಿ ಮಡಗುತ್ತಾರೆ. ಹೀಗಾದರೆ ಯಾರು ಕೊಂಡುಕೊಳ್ಳುತ್ತಾರೆ ಹೀಗಾಗಿ ಅನೇಕ ಜನತಾ ಬಜಾರ್‌ಗಳು ಲುಕ್ಸಾನ್‌ನಲ್ಲಿ ಕೆಲಸ ಮಾಡುತ್ತಿವೆ. ಅಕೌಂಟಿನಲ್ಲಿ ಮಾತ್ರ ಇಷ್ಟು ಮಾಲು ಇದೆ, ಇಷ್ಟು ಮಾರಾಟವಾಯಿತು, ಇಷ್ಟು ಹರಾಜು ಹಾಕಲಾಯಿತು ಎಂದು ತೋರಿಸಿದ್ದಾರೆ. ನಿಜಕ್ಕೂ ಅಲ್ಲಿಗೆ ಹೋಗಿ ವೆರಿಫೈ ಮಾಡಿದರೆ ಅರ್ಧದಷ್ಟು ದುಡ್ಡು ಬರುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ನಾನು ಒಂದು ಸಲಹೆ ಮಾಡು ವುದಕ್ಕೆ ಇಷ್ಟಪಡುತ್ತೇನೆ, ಎಲ್ಲಿ ಉತ್ಪತ್ತಿ ಆಗುತ್ತದೆಯೋ ಅಲ್ಲಿಂದ ಬಟ್ಟೆಯಾಗಲೀ ಅಥವಾ ಇನ್ನೊಂದು ಪದಾರ್ಥವಾಗಲೀ ಡೈರೆಕ್ಟ್ ಆಗಿ ತರಿಸುವುದಕ್ಕೆ ಜನತಾ ಬಜಾರ್‌ಗಳಲ್ಲಿ ವ್ಯವಸ್ಥೆ ಇರ ಬೇಕು. ಈ ಮಧ್ಯದಲ್ಲಿ ಅಂಗಡಿಗಳಲ್ಲಿ ಎಲ್ಲಾ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದರೆ ಈ ರೀತಿ ಅನ್ಯಾಯವಾಗುತ್ತದೆ ಎನ್ನುವ ಮಾತನ್ನು ನಾನು ತಮಗೆ ತಿಳಿಸುತ್ತಿದ್ದೇನೆ. ಇದರ ಬಗ್ಗೆ ತಾವು ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಇನ್ನು ಕನ್‌ಸ್ಯೂಮರ್ ಮೂವ್‌ಮೆಂಟ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಕನ್‌ಸ್ಯೂಮರ್ ಮೂವ್‌ಮೆಂಟ್ ಬಗ್ಗೆ ಈ ದೇಶದಲ್ಲಿ ಬಹಳ ಒಳ್ಳೆಯ ಪ್ರಚಾರ ನಡೆಯಿತು. ಅದನ್ನು ಓದಿದಾಗ ಕೊಂಡುಕೊಳ್ಳುವವರಿಗೆ ಬಾಯಲ್ಲಿ ನೀರು ಬಂದುಬಿಡಬೇಕು.- ಅಷ್ಟರಮಟ್ಟಿಗೆ ಪ್ರಚಾರ ನಡೆಯಿತು. ಆದರೆ ಅದನ್ನು ಏನೇನೂ ಕಾರ್ಯಗತ ಮಾಡಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ನಿಷ್ಠೆಯಿಂದ ಕೆಲಸಮಾಡತಕ್ಕಂಥ ಅಧಿಕಾರಿಗಳನ್ನು ಹಾಕಿ ಅದು ಸೂಕ್ತವಾಗಿ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳ ಬೇಕೆಂದು ತಿಳಿಸುತ್ತೇನೆ. ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ಬಗ್ಗೆ ಎರಡು ಮಾತುಗಳನ್ನು ಹೇಳು ತ್ತೇನೆ. ಈ ರೆಗ್ಯುಲೇಟೆಡ್ ಮಾರ್ಕೆಟ್-ಇದೊಂದು ತರಹ ಹುಲ್ಲುಗಾವಲು ಇದ್ದಹಾಗೆ ಇದೆ. ಇದನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಇಲ್ಲಿ ಯಾರು ಎಷ್ಟು ಬೇಕಾದರೂ ಹೊಡೆದುಕೊಂಡು ಹೋಗಬಹುದು. ಯಾರು ಏನು ಮಾಡಿದರೂ ಪತ್ತೆಯೇ ಇರುವುದಿಲ್ಲ. ಈ ದೇಶದ ಜನ ಅಂದರೆ ಕಾಡ ಪ್ರಾಣಿಗಳಿಗಿಂತ ಕಡೆಯೇ ಸ್ವಾಮಿ ಆ ರೈತರನ್ನು ದೋಚುವುದು, ವಂಚಿಸುವುದು- ಇದಕ್ಕೆ ಮಿತಿಯೇ ಬೇಡವೇ ಎಲ್ಲೋ ಕೆಲವು ಕಡೆ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಸ್ವಲ್ಪ ಚೆನ್ನಾಗಿ ಕೆಲಸ ಮಾಡಿ ದ್ದಾರೆ. ಬಾಕಿ ಕಡೆ ಏನೂ ಇಲ್ಲ. ಈ ಮಾರ್ಕೆಟ್ ಸೆಸ್ ೧ ಪರ್ಸೆಂಟ್ ಇದ್ದಾಗ ಅಲ್ಲಿ ವ್ಯಾಪಾರ ಚೆನ್ನಾಗಿ ಆಗುತ್ತಿತ್ತು. ಅದನ್ನು ೨ಪರ್ಸೆಂಟ್‌ಗೆ ಏರಿಸಿದರು. ಅದನ್ನು ಏರಿಸಿದಮೇಲೆ ಕೋಟ್ಯಾಂತರ ರೂಪಾಯಿಗಳಷ್ಟು ವ್ಯಾಪಾರ ಆಗುವುದು ಕಡಿಮೆಯಾಗಿದೆ. ಕಾರಣವೇನೆಂದರೆ ಈ ಸೆಸ್ಸನ್ನು ಜಾಸ್ತಿ ಮಾಡಿದರು ಎಂದು ಹೇಳಿ ಮಾಲನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿಕೊಳ್ಳು ತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ತಕ್ಷಣ ಈ ಸೆಸ್ಸನ್ನು ೧ಪರ್ಸೆಂಟ್‌ಗೆ ಇಳಿಸಬೇಕು ಎಂದು ಹೇಳುತ್ತೇನೆ. ಈಗ ರೆಗ್ಯುಲೇಟೆಡ್ ಮಾರ್ಕೆಟ್‌ಗಳಿಗೆ ಜೀಪ್ ಬೇರೆ ಕೊಟ್ಟಿದ್ದಾರೆ. ಅದನ್ನು ಏತಕ್ಕೆ ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಅದು ಎಲ್ಲಿ ಹೋಗುತ್ತದೆಯೋ, ಎಲ್ಲಿ ಬರುತ್ತದೆಯೋ- ಅದು ಬೇರೆ ವಿಚಾರ. ಈಗ ಈ ಜೀಪ್ ಕತೆಯನ್ನು ನಾನು ಹೇಳುವುದಿಲ್ಲ. ಮಾನ್ಯ ಮಂತ್ರಿಯವರೇ ಅದನ್ನು ವೆರಿಫೈ ಮಾಡಿಕೊಳ್ಳಲಿ. ಈ ದನಗಳು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಬಂದರೆ ಅಲ್ಲಿ ೩೦೦೦ ರೂಪಾಯಿಗೆ ಮಾರಾಟವಾಯಿತು ಎಂದರೆ ೨ಪರ್ಸೆಂಟ್ ಕೊಡಿ ಎಂದು ಕೇಳುತ್ತಾರೆ. ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಸಾಮಾನುಗಳನ್ನು ತರುವ ಉದ್ದೇಶ ಏನು ಒಳ್ಳೆಯ ಬೆಲೆ ಸಿಕ್ಕಬೇಕು ಎನ್ನತಕ್ಕಂಥ ದೃಷ್ಟಿಯಿಂದ ತರುತ್ತಾರೆ. ಆದರೆ ಆ ಉದ್ದೇಶದಂತೆ ನಡೆಯುತ್ತಿಲ್ಲ. ಅಲ್ಲಿ ಗ್ರೇಡ್ ಮಾಡಬೇಕು, ಸರಿಯಾಗಿ ತೂಕ ಮಾಡಬೇಕು. ಅಲ್ಲಿ ತೂಕದಲ್ಲಿ ಮೋಸ ಮಾಡುತ್ತಾರೆ. ಇಲಾಖೆಯವರು ಅಲ್ಲಿ ಗ್ರೇಡ್ ಮಾಡು ತ್ತಾರೆಯೋ ತೂಕ ಮಾಡುತ್ತಾರೆಯೋ ಅಥವಾ ಹರಾಜು ಹಾಕುತ್ತಾರೆಯೋ ಏನೂ ಇಲ್ಲ. ಅಲ್ಲಿಗೆ ಹೊಡೆದು ಕೊಂಡು ಬಂದ ದನಗಳಿಗೆ ನೆರಳು ತೋರಿಸುತ್ತಾರೆಯೋ ಹುಲ್ಲು ಸೊಪ್ಪು ನೀರು ಇದನ್ನೇನಾದರೂ ಕೊಡುತ್ತಾರೆಯೋ ಏನೂ ಇಲ್ಲ. ೨ಪರ್ಸೆಂಟ್ ಏತಕ್ಕೆ ಕೊಡಬೇಕು ಇದನ್ನು ಹೇಳುವವರು ಕೇಳುವವರು ಯಾರೂ ಇಲ್ಲವೇ ಅವರಿಗೆ ಜೀಫ್ ಕೊಟ್ಟಿರುವುದು ಇದಕ್ಕೆ ಉಪಯೋಗವಾಗಿದೆ. ಬೆಂಗಳೂರು ತಾಲ್ಲೂಕ್ ನಲ್ಲಿ ಮಾಗಡಿ ತಾಲ್ಲೂಕಿನಲ್ಲಿ, ಇನ್ನು ಯಾವುದಾದರೂ ತಾಲ್ಲೂಕಿನಲ್ಲಿ ೩೦೦೦ ರೂಪಾಯಿಗಳಿಗೆ ಯಾವು ದಾದರೂ ಎತ್ತು ಮಾರಾಟವಾಯಿತು ಎಂದು ಗೊತ್ತಾದರೆ ಸಾಕು ಮಾರನೇದಿವಸ ಬೆಳಿಗ್ಗೆ

ಅವರು ಜೀಪ್‌ನಲ್ಲಿ ಹಾಜರು ಆಲ್ಲಿ. ಏನು ಗೌಡ್ರೇ, ಎತ್ತು ಮಾರಿದ್ರುಂತಲ್ಲ ಹೌದು, ಮಾರಿದೆ ಎಲ್ಲಿ ಕೊಡಿ ಮತ್ತೆ ಅಂತ ಹೇಳಿ ಅವರು, ೧೫೦ ರೂಪಾಯಿಗಳನ್ನು ಕೊಟ್ಟರೆ ಅದನ್ನು ಜೇಬಿಗೆ ಬಿಟ್ಟುಕೊಂಡು ಜೀಪ್‌ನಲ್ಲಿ ಬಂದುಬಿಡುತ್ತಾರೆ. ಇಂತಹ ವ್ಯವಹಾರಕ್ಕೆ ಈ ಜೀಪ್ ಉಪಯೋಗವಾಗುತ್ತಾ ಇದೆ. ರೈತರ ಹಿತದೃಷ್ಟಿಯಿಂದ ಮಾನ್ಯ ಸಚಿವರಲ್ಲಿ ನಾನು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ, ದಯವಿಟ್ಟು ಅವರು ಈ ಒಂದು ಪದ್ಧತಿಯನ್ನು ತೆಗೆದುಹಾಕಬೇಕು. ಗುಜರಾತ ಸ್ಟೇಟ್‌ನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇವೆ, ಅಲ್ಲಿ ಅವು ಬಹಳ ಅಭಿವೃದ್ಧಿ ಸ್ಥಿತಿಗೆ ಬಂದಿದೆಯೆಂದು ನಾನು ಕೇಳಿದ್ದೇನೆ. ಅಲ್ಲಿ ಒಂದು ರಾಸಿಗೆ ೨೦ ಪೈಸೆ ಹಾಕುತ್ತಾರೆ. ಅಲ್ಲಿ ಇವರು ೫೦ ಪೈಸೆ ಹಾಕಲಿ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ೨ ಪರ್ಸೆಂಟ್ ಸೆಸ್ ಹಾಕುತ್ತೇವೆಂದು ಹೇಳಿ ರೈತರನ್ನು ದೋಚುತ್ತಿದ್ದಾರೆ. ಇವರಿಗೆ ದೇವರು ಒಳ್ಳೆಯದನ್ನು ಮಾಡುತ್ತಾನೆಯೇ ಎಂಬುದನ್ನು ತಾವು ಯೋಚನೆ ಮಾಡಿ. ಮಾನ್ಯ ಸಚಿವರು ಇದನ್ನು ತಕ್ಷಣ ನಿಲ್ಲಿಸಬೇಕು. ಇಲ್ಲದಿದ್ದರೆ ಮಾನ್ಯ ಸಚಿವರು ನಮ್ಮ ಭಾಗಕ್ಕೆ ಬಂದಾಗ ರೈತರನ್ನೆಲ್ಲಾ ಅಡ್ಡಡ್ಡ ಮಲಗಿಸಿಬಿಡುತ್ತೇನೆ, ಇನ್ನೇನೂ ಬೇರೆ ಮಾರ್ಗವಿಲ್ಲ. ರೈತರನ್ನು ಅವರ ಎದುರಿಗೇ ನಿಲ್ಲಿಸುತ್ತೇನೆ. ಇಲ್ಲದಿದ್ದರೆ ಏನೂ ರೈತರಿಗೆ ಉಪಯೋಗವಾಗುವುದಿಲ್ಲ. ನಾನು ಅವರಿಗೆ ಹೇಳಿ ಹೇಳಿ ಸಾಕಾಯಿತು. ಅಲ್ಲಿ ಕೆಲಸಮಾಡತಕ್ಕಂಥವರಿಗೆ ನ್ಯಾಯ, ನೀತಿ, ಧರ್ಮ ಯಾವುದೂ ಇಲ್ಲ ಯಾವ ರೂಲ್ಸ್ ಇಲ್ಲ, ಯಾವ ಕಾನೂನೂ ಇಲ್ಲ. ಅವರು ೧೦ ಪರ್ಸೆಂಟ್ ಹಾಕಿದರೂ ಆಯಿತು. ಅಲ್ಲಿ ಹೀಗಾಗುತ್ತಿದೆ. ಅಲ್ಲಿ ಮಾರ್ಕೆಟ್‌ಗೆ ಬಂದಂತಹ ಮಾಲುಗಳನ್ನು ಗ್ರೇಡ್ ಮಾಡಬೇಡವೇ ಅಲ್ಲಿ ಗ್ರೇಡ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ. ಈ ಬಗ್ಗೆ ಏನೂ ವ್ಯವಸ್ಥೆ ಮಾಡಿಲ್ಲ. ಈ ಗ್ರೇಡ್ ಮಾಡದ ಹೊರತು ಆಕ್ಷನ್‌ನಲ್ಲಿ ರೈತರಿಗೆ ಒಳ್ಳೆಯ ರೇಟ್ ಸಿಕ್ಕುವುದಿಲ್ಲ. ಒಂದು ಪಕ್ಷ ರೈತ ತಂದಂತಹ ಮಾಲು ಮಾರಾಟವಾಗದೇ ಹೋದರೆ ಅದನ್ನು ಇಟ್ಟುಕೊಂಡು ಪ್ಲೆಡ್ಜ್ ಮಾಡಿ ಅವನ ಅವಶ್ಯಕತೆಗೆ ತಕ್ಕ ಹಾಗೆ ಒಂದು ರೇಟ್ ಕೊಟ್ಟು ಆ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ದುಡ್ಡು ಕೊಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಡವೆ ಅದನ್ನು ಮಾಡಿಲ್ಲ. ಈ ತೂಕದಲ್ಲಿರತಕ್ಕಂಥ ಅವ್ಯವಸ್ಥೆಯನ್ನು ಹೇಳತೀರದು ಯಶವಂತಪುರದಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಅಲ್ಲಿಗೆ ತಾವು ಹೋಗಿ ನೋಡಿ. ಒಂದು ಕಡೆ ಬೊಟ್ಟು ಇಟ್ಟಿರುತ್ತಾನೆ. ಇನ್ನೊಂದು ಕಡೆ ಮಾಲು ಇಟ್ಟಿರುತ್ತಾನೆ. ತೂಕ ಮಾಡುವಾಗ ಕೊನೆಯಲ್ಲಿ ಕೈಯಿಂದ ಹೆಚ್ಚು ಕಡಿಮೆ ಮಾಡಿಬಿಡುತ್ತಾನೆ. ಹಾಗೆ ಮಾಡುವುದರಿಂದ ೩-೪ ಕೇಜಿ ಜಾಸ್ತಿ ಬರುತ್ತದೆ. ಈ ರೀತಿ ತೂಕದಲ್ಲಿ ಮೋಸ ನಡೆಯುತ್ತಿದೆ. ಅಲ್ಲಿ ವೇಮನ್ಸ್ ಅಂದರೆ ತೂಕ ಮಾಡುವವರು ಪ್ರವೇಟ್‌ನವರು, ಅವರು ಲೈಸೆನ್ಸ್ ತೆಗೆದುಕೊಂಡಿರುತ್ತಾರೆ. ಯಾವನು ಆ ವೇಮನ್‌ಗೆ ದುಡ್ಡು ಕೊಟ್ಟಿರುತ್ತಾನೋ ಅವನಿಗೆ ಅನುಕೂಲವಾಗುವ ಹಾಗೆ ಸರಿಯಾದ ತೂಕವನ್ನು ಕೊಡುತ್ತಾನೆ. ಈ ವೇಮನ್ ಇಡೀ ತಾಲ್ಲೂಕಿಗೆ ಒಬ್ಬ ಇರುತ್ತಾನೆ. ವೈಟ್ ಅಂಡ್ ಮೆಸರ್‌ಮೆಂಟ್ ಇನ್ಸ್‌ಪೆಕ್ಟರ್ಸ್ ಅವರು ಅಲ್ಲಿಗೆ ಬರುವುದಕ್ಕೆ ಅವಕಾಶ ಇಲ್ಲದೇ ಇರುವುದರಿಂದ ಅವರು ಯಥೇಚ್ಛವಾಗಿ ರೈತರನ್ನು ದೋಚುತ್ತಿದ್ದಾರೆ. ಈ ತೂಕದಲ್ಲಿ ಆಗುತ್ತಿರತಕ್ಕಂಥ ಅನ್ಯಾಯ ಅಷ್ಟಿಷ್ಟಲ್ಲ, ಆ ಬಗ್ಗೆ ಎಷ್ಟು ಹೇಳಿದರೂ ತೀರದು. ಆದ್ದರಿಂದ ದೊಡ್ಡ ದೊಡ್ಡ ರೆಗ್ಯುಲೇಟೆಡ್ ಮಾರ್ಕೆಟ್‌ಗಳಿಗೆ ನಿಮ್ಮ ಇಲಾಖೆಯಿಂದ ವೇಯಿಂಗ್ ಇನ್ಸ್‌ಪೆಕ್ಟರ್ಸ್ ಹೋಗುವುದಕ್ಕೆ ನೀವು ವ್ಯವಸ್ಥೆ ಮಾಡಬೇಕು.

ಚಿಂತಾಲ್‌ನಲ್ಲಿ ತೂಕ ಮಾಡುವುದನ್ನು ತಪ್ಪಿಸಿ ಪ್ಲಾಟ್ ಫಾರಂ ಸ್ಕೇಲನ್ನು ಇಂಟ್ರಡ್ಯೂಸ್ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವರಲ್ಡ್ ಬ್ಯಾಂಕ್‌ನಿಂದ ೫೦ ಲಕ್ಷ ರೂಪಾಯಿಗಳನ್ನು ಮಾರ್ಕೆಟ್ ಅಭಿವೃದ್ಧಿಗೋಸ್ಕರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಇದರಲ್ಲಿ ಈಗ ಸುಮಾರು ೪೦ ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳು ನಡೆಯುತ್ತಿದೆ ಎಂದು ಹೇಳಿದ್ದಾರೆ. ಮತ್ತು ಇವರು ಇಂಜನಿಯರಿಂಗ್ ಸೆಲ್ ಎಂದು ಒಂದು ವಿಭಾಗವನ್ನು ತೆರೆದರು. ಆದರೆ ಈ ಇಂಜನಿಯರಿಂಗ್ ಸೆಲ್ ತೆರೆದರೂ ಸಹ ಅಲ್ಲಿ ನಿಗದಿಯಾದ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರು ಈ ಕಡೆ ತಮ್ಮ ಗಮನವನ್ನು ಹರಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನು ಈ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಹಂಗಾಮಿಯಾಗಿ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದಾರೆ ಎಂದು ಗೊತ್ತಾಯಿತು. ಆದರಲ್ಲಿ ರೋಸ್ಟರ್ ಸಿಸ್ಟಮ್ ಫಾಲೋ ಮಾಡುತ್ತಾ ಇಲ್ಲ. ಆದ್ದರಿಂದ ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಿ ಸಾಮಾಜಿಕವಾಗಿ ಹಿಂದುಳಿದ ವರ್ಗದವರಿಗೆ ಹಾಗೂ

ದುರ್ಬಲ ವರ್ಗದವರಿಗೆ ತಾವು ಕೊಡಬೇಕಾದ ಕಾನೂನಿನ ಪ್ರಕಾರ ನ್ಯಾಯವಾದ ಪಾಲನ್ನು ಅವರಿಗೆ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಸಹಕಾರ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಮಾನ್ಯ ಉಪಸಭಾಧ್ಯಕ್ಷರೇ, ಇವತ್ತು ನಮ್ಮ ಸಹಕಾರ ಸಚಿವರು ಈ ಸಭೆಯ ಮುಂದೆ ತಮ್ಮ ಬೇಡಿಕೆಗಳನ್ನು ತಂದಿದ್ದಾರೆ. ಮತ್ತು ವ್ಯವಸಾಯ ಸಚಿವರು ತಮ್ಮ ಬೇಡಿಕೆಗಳನ್ನು ಈ ಸದನದ ಮುಂದೆ ಇಟ್ಟಿದ್ದಾರೆ. ನಮ್ಮ ಸಹಕಾರ ಸಚಿವರು ಈ ಸಭೆಯಲ್ಲಿ ತಂದಿರತಕ್ಕಂತಹ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ಇವತ್ತಿನ ದಿವಸ ಈ ಎರಡು ಇಲಾಖೆಗಳ ಬೇಡಿಕೆಗಳನ್ನು ತಂದಿದ್ದಾರೆ. ಒಂದನೆಯದು ವ್ಯವಸಾಯ ಇಲಾಖೆ. ಹಾಗೆ ಎರಡನೆಯದು ಸಹಕಾರ ಇಲಾಖೆ. ಈ ಸಹಕಾರ ಮತ್ತು ವ್ಯವಸಾಯ ಎನ್ನತಕ್ಕಂತದ್ದು ಒಂದೇ ನಾಣ್ಯದ ಎರಡು ಮುಖಗಳು ಇದ್ದ ಹಾಗೆ. ನಮ್ಮ ಸಹಕಾರ ಇಲಾಖೆಯಿಂದ ಸಾಲವನ್ನು ಒದಗಿಸುತ್ತಾರೆ. ಅವೆಲ್ಲವೂ ಸಹ ವ್ಯವಸಾಯಕ್ಕೋಸ್ಕರವಾಗಿ ಸಹಕಾರ ಇಲಾಖೆಯವರು ಸಾಲವನ್ನು ಒದಗಿಸುತ್ತಾರೆ. ಬಾವಿಯನ್ನು ತೋಡಿಸುವುದಕ್ಕೆ ಸಾಲವನ್ನು ಕೊಡುತ್ತಾರೆ. ಅದೂ ಸಹ ವ್ಯವಸಾಯಕ್ಕೋಸ್ಕರವಾಗಿ ಮತ್ತು ದೀರ್ಘಾವಧಿ ಸಾಲವನ್ನು ಒದಗಿಸುತ್ತಾರೆ ಅದೂ ಸಹ ವ್ಯವಸಾಯಕೋಸ್ಕರವಾಗಿಯೇ ಹಾಗೆಯೇ ಅಲ್ಪಾವಧಿ ಸಾಲವನ್ನು ಕೊಡುತ್ತಾರೆ ಇದೂ ಸಹ ವ್ಯವಸಾಯಕ್ಕೋಸ್ಕರವಾಗಿಯೇ ಒದಗಿಸುತ್ತಾರೆ, ಈ ಕಾರಣಗಳಿಂದ ಈ ಎರಡು ಇಲಾಖೆಗಳ ಮಧ್ಯೆ ಒಂದು ಸಮನ್ವಯ ಇದ್ದರೆ ಆಗ ನಾವು ನಮ್ಮ ರಾಷ್ಟ್ರದ ನಮ್ಮ ರಾಜ್ಯದ ಅಭಿವೃದ್ಧಿಯನ್ನು ಮಾಡಿ ಒಳ್ಳೆಯ ಕೆಲಸವನ್ನು ಮಾಡಬಹುದು ಎಂಬುದು ನನ್ನ ಒಂದು ವೈಯುಕ್ತಿಕವಾದ ಅಭಿಪ್ರಾಯ. ಆದ್ದರಿಂದ ಈ ಎರಡೂ ಇಲಾಖೆಗಳಲ್ಲಿ ಒಂದೇ ವಿಧವಾದ ವೈಯುಕ್ತಿಕವಾದ ಅಭಿಪ್ರಾಯ ಇರಬೇಕು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ೨೧,೫೦೦ ಸಹಕಾರ ಸಂಘಗಳು ಇದ್ದವು. ಆದರೆ ೧೯೮೦ನೇ ಜೂನ್ ವೇಳೆಗೆ ೨೧,೫೧೨ ಸಹಕಾರ ಸಂಘಗಳು ಇವೆ. ಈ ಸಹಕಾರ ಸಂಘಗಳ ಸದಸ್ಯರು ಸುಮಾರು ೭೮ ಲಕ್ಷ ೩೩ ಸಾವಿರ ಸದಸ್ಯರು ಇದ್ದಾರೆ. ಜೊತೆಗೆ ೩೫ ಲಕ್ಷ ರೈತರ ಕುಟುಂಬಗಳು ಈ ಸಹಕಾರ ಸಂಘಗಳನ್ನು ಅವಲಂಬಿಸಿವೆ. ದುರಾದೃಷ್ಟವಶಾತ್ ೩೫ ಲಕ್ಷ ರೈತರ ಕುಟುಂಬಗಳ ಪೈಕಿ ಕೇವಲ ೫ ಲಕ್ಷ ರೈತರ ಕುಟುಂಬಗಳಿಗೆ ಮಾತ್ರ ಸಾಲದ ಒಂದು ವ್ಯವಸ್ಥೆ ಸಿಗುತ್ತಿದೆ. ಈ ಸಹಕಾರ ಸಂಘಗಳ ಇಲಾಖೆ ಅದೃಷ್ಟವಶಾತ್ ಒಳ್ಳೆಯ ಸಚಿವರ ಕೈಗೆ ಸಿಕ್ಕಿದೆ. ಪ್ರಪ್ರಥಮವಾಗಿ ನಮ್ಮ ತೀವ್ರ ಸಮಾಜವಾದಿಗಳಾದ ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರ ಕೈಯಲ್ಲಿ ಈ ಸಹಕಾರ ಇಲಾಖೆ ಇತ್ತು. ಆಗ ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರು ಇದು ಒಂದು ಜಾಡ್ಯದಿಂದ ಕೂಡಿದ ಇಲಾಖೆಯೆಂದು ಇದಕ್ಕೆ ಒಂದು ಶಸ್ತ್ರಚಿಕಿತ್ಸೆಯನ್ನು ಮಾಡಿದರು. ಅದೇನೆಂದರೆ ಕೇವಲ ಪ್ರಭಾವಿ ಕುಟುಂಬಗಳವರೇ ಮಾತ್ರ ಈ ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದಂತಹ ಒಂದು ಪ್ರಭಾವವನ್ನು ಬೀರುತ್ತಿದ್ದರು. ತಮ್ಮದೇ ಆದಂತಹ ಒಂದು ಸ್ವಾರ್ಥ ಸಾಧನೆಯನ್ನು ಈ ಸಹಕಾರ ಸಂಘಗಳಲ್ಲಿ ವಿನಿಯೋಗಿಸಿಕೊಳ್ಳುತ್ತಿದ್ದರು, ಅದನ್ನು ನಮ್ಮ ಸಮಾಜ ವಾದಿಗಳಾದ ಶ್ರೀಮಾನ್ ಕೆ. ಹೆಚ್. ರಂಗನಾಥ್‌ರವರು ಇದನ್ನು ತೆಗೆದು ಹಾಕಿ ಅದನ್ನು ರದ್ದು ಮಾಡಿ ಈ ಸಹಕಾರ ಸಂಘಗಳಲ್ಲಿ ೬ ವರ್ಷಗಳ ಕಾಲಕ್ಕಿಂತಲೂ ಹೆಚ್ಚು ಕಾಲ ಒಬ್ಬರೆ ಅಧಿಕಾರದಲ್ಲಿ ಇರಬಾರದು ಎನ್ನುವ ಒಂದು ಕಾನೂನನ್ನು ತಂದರು. ಆದ್ದರಿಂದ ಈ ಸಹಕಾರ ಕ್ಷೇತ್ರದಲ್ಲಿ ಒಂದು ದೊಡ್ಡ ಕ್ರಾಂತಿಯಾಯಿತು. ಎರಡನೆಯದಾಗಿ ದುರ್ಬಲವರ್ಗಗಳಿಗೆ ಈ ಸಹಕಾರ ಕ್ಷೇತ್ರದಲ್ಲಿ ತಮ್ಮ ಪಾತ್ರವನ್ನು ವಹಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಹರಿಜನ ಮತ್ತು ಗಿರಿಜನರು ಹಾಗೂ ದೀನದಲಿತರಿಗೆ ಸಹಕಾರ ಸಂಘಗಳ ಮುಖಾಂತರ ಅವರಿಗೆ ಹಣವನ್ನು ಕೊಟ್ಟು ಸಹಕಾರ ಸಂಘಗಳ ಸದಸ್ಯರನ್ನಾಗಿ ಮಾಡಿ ಸಹಕಾರ ಆಂದೋಳನದಲ್ಲಿ ತಮ್ಮ ಪಾತ್ರ ಇರಬೇಕೆಂದು ಒಂದು ಕಾನೂನನ್ನು ಮಾಡಿದರು. ಮೂರನೆಯದಾಗಿ ವಿಲೀನಕರಣ ಅಂತ ಹೇಳಿ ೨-೩ ಸಹಕಾರ ಸಂಘಗಳನ್ನು ಒಂದು ಕಡೆ ಸೇರಿಸಿ ಅಮಾಲ್ಗಮೇಷನ್ ಮಾಡಿ ಒಂದು ದೊಡ್ಡ ಸಹಕಾರ ಸಂಘವನ್ನು ಮಾಡಿದರು. ದುರಾದೃಷ್ಟವಶಾತ್ ಈ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಾ ಇಲ್ಲ. ಇದರಲ್ಲಿ ಮಾತ್ರ ಶ್ರೀ ಕೆ. ಹೆಚ್. ರಂಗನಾಥ್‌ರವರು ವಿಫಲರಾದರು. ಇದಾದ ಮೇಲೆ ಸಹಕಾರ ಇಲಾಖೆ ಶ್ರೀಮಾನ್ ಕುಸನೂರ್‌ರವರ ಕೈಸೇರಿತು. ಶ್ರೀಮಾನ್ ಕುಸನೂರ್ ರವರು ಈ ಸಹಕಾರ ಸಂಘಗಳನ್ನು ತಮ್ಮ ಪ್ರಭಾವಿ ತಂತ್ರದಿಂದ ಸಹಕಾರ ಇಲಾಖೆಯನ್ನು ತಮ್ಮದೇ ಆದ ಒಂದು ಧಾಟಿಯಲ್ಲಿ ನಡೆಸಿ

ದರು. ಇದಾದ ಮೇಲೆ ಸ್ವಲ್ಪ ಕಾಲ ಶ್ರೀಮಾನ್ ಜಕನೂರ್ ರವರ ಕೈಗೆ ಸೇರಿತು. ನಂತರ ಈಗ ಹುಟ್ಟು ಸಹಕಾರ ಕ್ಷೇತ್ರದಲ್ಲಿ ಒಂದು ದೊಡ್ಡ ಅಂಧೋಳನವನ್ನೆ ನಡೆಸಿದಂತಹ ಪ್ರಭಾವಿಗಳಾದ ನಮ್ಮ ಶ್ರೀಮಾನ್ ಎಸ್. ಶ್ರೀಕಂಠಯ್ಯನವರ ಕೈಯಲ್ಲಿ ಇವೊತ್ತಿನ ದಿವಸ ಇದೆ. ಶ್ರೀಮಾನ್ ಶ್ರೀಕಂಠಯ್ಯನವರು ತಮ್ಮದೇ ಆದಂತಹ ಒಂದು ಪ್ರಭಾವವನ್ನು ಈ ಸಹಕಾರ ಸಂಘಗಳ ಮೇಲೆ ಬೀರಬೇಕು. ಮತ್ತು ಚಾಕಚಕ್ಯತೆಯಿಂದ ಈ ಇಲಾಖೆಯನ್ನು ಮುಂದುವರಿಸಿಕೊಂಡು ಬರುತ್ತಾರೆ ಎನ್ನುವ ಭರವಸೆಯೂ ಇವತ್ತು ನನಗೆ ಇದೆ. ಮತ್ತು ಸಮಾಜದಲ್ಲಿರತಕ್ಕಂತಹ ಎಲ್ಲಾ ವರ್ಗದ ಜನರನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಮತ್ತು ಈ ಸಹಕಾರ ಕ್ಷೇತ್ರದಲ್ಲಿ ಜೀವನವನ್ನು ನಡೆಸತಕ್ಕಂತಹ ಕುಟುಂಬಗಳಿಗೆ ತಾವು ಸಹಾಯ ಮಾಡುತ್ತಿದ್ದೀರೆಂದು ನನ್ನ ವೈಯುಕ್ತಿಕವಾದ ಅಭಿಪ್ರಾಯ. ಇವತ್ತಿನ ದಿವಸ ನಾವು ನೋಡುತ್ತಿದ್ದೇವೆ ಎಲ್ಲೆಲ್ಲಿಯೂ ಸಹ ಈ ಸಹಕಾರ ಸಂಘಗಳಲ್ಲಿ ಹಣದ ಚಪಾವಣೆ, ಮತ್ತು ಹಣದ ದುರುಪಯೋಗವಾಗುತ್ತಿದೆ. ಮತ್ತು ಈ ಸಹಕಾರ ಸಂಘಗಳಲ್ಲಿ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಸಹಕಾರ ಸಂಘಗಳಲ್ಲಿ ಹಣವನ್ನು ಲೂಟಿ ಮಾಡತಕ್ಕಂತದ್ದು ಒಂದು ಮನೋಭಾವನೆಯಾಗಿದೆ. ನಮ್ಮ ಸಹಕಾರ ಇಲಾಖೆಯ ಆಕ್ಟ್‌ನಲ್ಲಿ ಒಂದು ಕಟ್ಟುನಿಟ್ಟಾದ ಕಾನೂನು ಇಲ್ಲ. ಇವತ್ತಿನ ದಿವಸ ನಮ್ಮ ಸಹಕಾರ ಸಂಘಗಳಲ್ಲಿ ಯಾವ ಒಬ್ಬ ಖಾಸಗೀ ಅಧಿಕಾರಿಯೇ ಆಗಲಿ ಅಥವಾ ಸರ್ಕಾರಿ ಅಧಿಕಾರಿಯೇ ಆಗಲಿ ೧ ಲಕ್ಷ ರೂಪಾಯಿಗಳನ್ನು ಹೊಡೆದರೂ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಾರೆ. ಅದು ವಿಚಾರಣೆಗೆ ಬರುವಷ್ಟರಲ್ಲಿ ಆ ಅಧಿಕಾರಿಯು ಅರ್ಧ ವಯಸ್ಸು ಮುಗಿದು ಹೋಗಿರುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಕೊಬ್ಬಿದ ಗೂಳಿಗೆ ಮೇಯುವುದಕ್ಕೆ ಹುಲ್ಲುಗಾವಲಿನೋಪಾದಿಯಲ್ಲಿ ಈ ಸಹಕಾರ ಸಂಘಗಳು ಇವೆ. ಆದ್ದರಿಂದ ಆದಷ್ಟು ಬೇಗ ಈ ಸಹಕಾರ ಸಂಘಗಳ ಆಕ್ಟ್‌ನಲ್ಲಿ ಖಾಸಗಿಯವರೇ ಆಗಲಿ ಅಥವಾ ಸರ್ಕಾರಿ ಅಧಿಕಾರಿಯೇ ಆಗಲಿ ಒಂದು ಲಕ್ಷ ರೂಪಾಯಿ ಹೊಡೆದರೂ ಸರಿ ಅಥವಾ ೧ ರೂಪಾಯಿ ಹೊಡೆದರೂ ಸರಿ ಅಂಥವರಿಗೆ ಜೈಲ್ ಶಿಕ್ಷೆಯಾಗಬೇಕು ಎನ್ನುವ ಒಂದು ಕಲಂ ಅಳವಡಿಸಿ ಒಂದು ಕಾಯ್ದೆಯನ್ನು ಮಾಡಿದರೆ ಮಾತ್ರ ಈ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ ಮತ್ತು ದುರ್ಲಾಭವನ್ನು ತಪ್ಪಿಸಬಹುದು ಎಂದು ನಾನು ಮಾನ್ಯ ಮಂತ್ರಿಗಳಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಒಂದು ಕಾನೂನನ್ನು ತರುತ್ತಾರೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆದ್ದರಿಂದ ಸಹಕಾರಿ ಕಾಯಿದೆಯನ್ನು ಸಮಗ್ರವಾಗಿ ತಿದ್ದುಪಡಿ ಮಾಡಬೇಕು. ೨೦ ಸಾವಿರ ಹೊಡೆದವನಿಗೆ ಕನಿಷ್ಠ ೩ ವರ್ಷಗಳ ಕಠಿಣ ಶಿಕ್ಷೆ ವಿಧಿಸಿರುವಂತಹ ದೊಡ್ಡದೊಡ್ಡ ಕಲಂಗಳನ್ನು ಈಗಿನ ಕಾಯಿದೆಗೆ ಸೇರಿಸಬೇಕು. ಆಗ ಮಾತ್ರ ಈ ಇಲಾಖೆಯನ್ನು ಪ್ರಗತಿಪಥದಲ್ಲಿ ನಡೆಸಬಹುದು. ಇಲ್ಲದಿದ್ದರೆ ನಮ್ಮಂತಹ ಜನರು ಸೇರಿಕೊಂಡು ಇಲ್ಲಿ ದುಡ್ಡು ಹೊಡೆಯಲು ದಾರಿಯಾಗುತ್ತದೆ. ಇದಕ್ಕೆ ಅವಕಾಶ ಕೊಡದೆ ಒಂದು ಸಮಗ್ರವಾದಂಥ ಕಾಯಿದೆಯನ್ನು ಬಹುಬೇಗ ತರಬೇಕು. ಅದರಲ್ಲಿ ಉಗ್ರವಾದಂತಹ ಶಿಕ್ಷೆ ವಿಧಿಸಲು ಅವಕಾಶವಿರಬೇಕು. ಅಂತಹ ಒಂದು ಸಮಗ್ರ ತಿದ್ದುಪಡಿ ಮಸೂದೆಯನ್ನು ಈ ಸದನದ ಮುಂದೆ ಮಂಡನೆ ಮಾಡಬೇಕೆಂದು ತಿಳಿಸುತ್ತೇನೆ.

ಇನ್ನು ಎರಡನೆಯದಾಗಿ ಮಹಾತ್ಮ ಗಾಂಧಿಯವರು ಈ ರಾಷ್ಟ್ರ ರಾಮರಾಜ್ಯ ಆಗಬೇಕೆಂದು ಕನಸು ಕಂಡಿದ್ದರು. ಆ ಕನಸು ನನಸಾಗಬೇಕಾದರೆ ಗ್ರಾಮ ಮಟ್ಟದಲ್ಲಿ ಸಹಕಾರ ಸಂಘಗಳು ರಚನೆಯಾಗಬೇಕೆಂಬುದೇ ಅವರ ಮೂಲ ಉದ್ದೇಶವಾಗಿತ್ತು. ಆದ್ದರಿಂದ ಪ್ರತಿ ಗ್ರಾಮಪಂಚಾಯಿತಿಗೂ ತನ್ನದೇ ಆದ ಒಂದು ಸಹಕಾರ ಸಂಘ ಇರಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ, ಆರ್ಥಿಕವಾಗಿ ವಯಬಿಲಿಟಿ ಇಲ್ಲ ಎಂಬ ಕಾರಣದಿಂದ ೩-೪ ಸೊಸೈಟಿಗಳನ್ನು ಸೇರಿಸಿ ಒಂದು ದೊಡ್ಡ ಸಹಕಾರ ಸಂಘ ಮಾಡಿದ್ದಾರೆ. ಇದರಿಂದ ಒಂದು ಬಾಟಲ್ ಸೀಮೆಣ್ಣೆ ಬೇಕಾದರೆ ೫-೬ ಕಿಲೋಮೀಟರ್ ನಡೆದುಕೊಂಡು ಹೋಗಬೇಕು. ಸಕ್ಕರೆ ಬೇಕಾದರೆ ೩ ಕಿಲೋಮೀಟರ್ ನಡೆದುಕೊಂಡು ಹೋಗಬೇಕು. ಅಗತ್ಯವಸ್ತುಗಳು ಬೇಕಾದರೆ ೫ ಕಿಲೋಮೀಟರ್ ನಡೆದುಕೊಂಡು ಹೋಗಬೇಕು. ಹೋದರೂ ಸಹ ಸಾಮಾನುಗಳು ಸಿಗುವ ಗ್ಯಾರಂಟಿ ಇಲ್ಲ. ಆದಕಾರಣ ಪದೇಪದೇ ಹೋಗಬೇಕಾಗುತ್ತದೆ. ಒಂದೊಂದು ಸಾಮಾನುಗಳಿಗೆ ಒಬ್ಬೊಬ್ಬರನ್ನು ಕಳುಹಿಸಿಕೊಡಲು ಮನೆಯಲ್ಲಿ ೪-೫ ಜನ ಮಕ್ಕಳು ಇರಬೇಕಾಗುತ್ತದೆ. ಅದಕ್ಕಾಗಿ ಇದೆಲ್ಲಾ ಸರಿಹೋಗುವವರೆಗೆ ಕುಟುಂಬ ಕಲ್ಯಾಣ ಯೋಜನೆಗೆ ವಿರಾಮ ಹಾಕಬೇಕೆಂದು ಕಾಣುತ್ತದೆ. ಅದು ಸಾಧ್ಯವಾಗದಿದ್ದರೆ ಪ್ರತಿಯೊಂದು ಗ್ರಾಮ

ಪಂಚಾಯಿತಿಗೂ ಒಂದು ಸೊಸೈಟಿಯನ್ನು ಕೊಡಬೇಕು. ಈ ರೀತಿ ಮಾಡಲು ಹಣದ ಕೊರತೆ ಇದ್ದರೆ, ಸರ್ಕಾರದಿಂದ ಸಹಾಯಧನ ಕೊಡಬೇಕು, ಮತ್ತು ಷೇರು ಬಂಡವಾಳ ಹೆಚ್ಚು ಕೊಟ್ಟು ಪ್ರತಿ ಸೊಸೈಟಿಯೂ ಆರ್ಥಿಕವಾಗಿ ಮುಂದುವರೆಯಲು ಆಶ್ರಯ ಕೊಟ್ಟರೆ ಮಾತ್ರ ಸರಿಹೋಗುತ್ತದೆ ಮತ್ತು ಮಹಾತ್ಮಾಗಾಂಧಿಯವರ ಕನಸನ್ನು ನನಸು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಭಾವಿ ತೆಗೆಸಲು, ಪಂಪ್‌ಸೆಟ್ಟು ಕೊಂಡುಕೊಳ್ಳಲು, ಟ್ರಾಕ್ಟರ್ ಕೊಂಡುಕೊಳ್ಳಲು ಸಾಲ ಕೊಡಲಾಗುತ್ತದೆ. ಅಧಿಕಾರಿಗಳು ಏನಿದ್ದರೂ ಸಣ್ಣ ರೈತರಿಂದ ಸಾಲ ವಸೂಲಿ ಮಾಡಲು ಹೋಗುತ್ತಾರೆಯೇ ಹೊರತು, ದೊಡ್ಡ ರೈತರ ಹತ್ತಿರ ಹೋಗುವುದಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಅಧಿಕಾರಿಗಳು ಸಾಲ ವಸೂಲಿ ಮಾಡಲು ಜೀಪ್‌ನಲ್ಲಿ ಹೋಗು ವಾಗ ಇಬ್ಬರು ಪೋಲೀಸಿನವರನ್ನು ಮತ್ತು ತಮಟೆ ಭಾರಿಸುವವರನ್ನು ಸಹ ಕರೆದುಕೊಂಡ ಹೋಗುತ್ತಾರೆ. ಹಳ್ಳಿಗಳಿಗೆ ಹೋದಾಗ ಡಿ.ಟಿ. ರಾಮು ೨ ಸಾವಿರ ಬಾಕಿ ಕೊಟ್ಟಿಲ್ಲ, ಆದಕಾರಣ ಅವರ ಮನೆ ದನಕರುಗಳನ್ನು ಹರಾಜು ಹಾಕುತ್ತೇವೆ, ಪಾತ್ರೆಪದಾರ್ಥಗಳನ್ನು ಹರಾಜು ಹಾಕುತ್ತೇವೆ, ಎಲ್ಲರೂ ಬನ್ನಿ ಎಂದು ತಮಟೆಗೆ ಭಾರಿಸುವವನ ಮೂಲಕ ಕೂಗಿಸುತ್ತಾರೆ. ಹೀಗೆ ನಮ್ಮಂತಹವರ ಮಾನವನ್ನು ಹರಾಜು ಹಾಕಿಸುತ್ತಾರೆ. ಇವರು ವಸೂಲಿಗೆ ಹೋದಾಗ ಯಾರಾದರೂ ತಪ್ಪಿಸಿಕೊಂಡು ಹೋದರೆ ಅಂತಹವರ ಮನೆಗಳಿಗೆ ನುಗ್ಗಿ ಇರುವ ಸಾಮಾನುಗಳನ್ನು ಜಫ್ತಿ ಮಾಡಿಕೊಂಡು ಹೋಗುತ್ತಾರೆ ಸಾವಿರ ರೂ. ಬಾಕಿ ಇದ್ದ ಒಬ್ಬರು ಹರಿಜನರ ಮನೆಗೆ ನುಗ್ಗಿ ೬೦ ರೂಪಾಯಿಗಳ ಸಾಮಾನುಗಳನ್ನು ತೆಗೆದುಕೊಂಡು ಬಂದಿದ್ದಾರೆ. ಅದೇ ೨ ರಿಂದ ೧೫ ಸಾವಿರ ರೂ.ಗಳವರೆಗೆ ಸಾಲ ತೆಗೆದುಕೊಂಡಿರುವವರ ಹತ್ತಿರ ವಸೂಲಿಗೆ ಹೋಗುವುದಿಲ್ಲ. ನಮ್ಮ ಚೆನ್ನಪಟ್ಟಣ ತಾಲ್ಲೂಕ್‌ನಲ್ಲಿ ಈ ರೀತಿ ನಡೆಯುತ್ತಿದೆ. ಇದು ಸರಿಯಲ್ಲ. ಇರುವವರ ಹತ್ತಿರ ಮೊದಲು ವಸೂಲಿ ಮಾಡಬೇಕು. ಇಲ್ಲದವರ ಹತ್ತಿರ ಸಮಯ ಕೊಟ್ಟು ವಸೂಲಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬಾವಿ ತೆಗೆಯಲು ಸಾಲ ಕೊಡಲಾಗುತ್ತದೆ. ಬಾವಿ ತೆಗೆದ ಮೇಲೆ ಅಲ್ಲಿ ನೀರು ಬಿದ್ದಿಲ್ಲ ಎಂದು ಭೂಗರ್ಭ ಶಾಸ್ತ್ರಜ್ಞರು ಸರ್ಟಿಫಿಕೇಟ್ ಕೊಟ್ಟರೆ, ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುವ ಬಗ್ಗೆ ಈಗಿನ ಕಾನೂನಿಗೆ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಈಗ ನೀರು ಬಾರದಿದ್ದರೂ ಸಾಲ ವಾಪಸ್ ಮಾಡಬೇಕೆಂಬ ಕಾನೂನು ಜಾರಿಯಲ್ಲಿದೆ. ಇದು ಸರಿಯಲ್ಲ. ಭೂಗರ್ಭಶಾಸ್ತ್ರಜ್ಞರು ಕೊಟ್ಟ ಸರ್ಟಿಫಿಕೇಟ್ ಆಧಾರದ ಮೇಲೆ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ೨ ಸಾವಿರ ರೂ.ಗಳಿಗೆ ಸಾಲದ ಅರ್ಜಿ ಹಾಕಿಕೊಂಡರೆ, ಅದನ್ನು ಅವರ ಮನೆ ಬಾಗಿಲಿಗೆ ಹೋಗಿ ಮುಟ್ಟಿಸುವಂತಹ ಒಂದು ವ್ಯವಸ್ಥೆ ಆಗಬೇಕು. ಆಗ ನಮ್ಮ ಕರ್ತವ್ಯ ಮಾಡಿದಂತೆ ಆಗುತ್ತದೆ. ಏಕೆಂದರೆ, ನಾವು ರೈತರ ಮತಗಳಿಂದ ಆರಿಸಿ ಬಂದಿದ್ದೇವೆ. ಆದ್ದರಿಂದ ನಾವು ಅವರ ಪ್ರತಿನಿಧಿ ಗಳಾಗಿದ್ದೇವೆ. ಆದಕಾರಣ ಅವರಿಗೆ ಅನುಕೂಲ ಮಾಡಿಕೊಡುವುದು ನಮ್ಮ ಕರ್ತವ್ಯ. ಆದರೆ, ಈಗ ಏನಾಗುತ್ತಿದೆ ಎಂದರೆ, ಎರಡು ಸಾವಿರಕ್ಕೆ ಅರ್ಜಿ ಹಾಕಿದರೆ, ಖಾದಿ ಬಟ್ಟೆ ಹಾಕಿರುವವರನ್ನು ಮಧ್ಯ ವರ್ತಿ ಮಾಡಿಕೊಂಡು ತಾಲ್ಲೂಕ್ ಸೊಸೈಟಿಗಳಿಗೆ ಹಲವಾರು ಸಲ ಪರದಾಡಬೇಕು. ಸಾಲ ಕೈಗೆ ಸಿಗುವ ಹೊತ್ತಿಗೆ ಒಂದು ಸಾವಿರ ಖರ್ಚಾಗಿರುತ್ತದೆ. ಇದು ಸರಿಯಲ್ಲ. ೫ ಸಾವಿರ ರೂ.ಗಳ ಸಾಲಕ್ಕೆ ಅರ್ಜಿ ಹಾಕಿದ ಮೇಲೆ, ಸೊಸೈಟಿಯವರೇ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಹಾಗೂ ಇತರೇ ಸರ್ಟಿಫಿಕೇಟ್ ಗಳನ್ನು ತರಿಸಿಕೊಂಡು ಸಾಲವನ್ನು ಕೊಡಲೇ ಮಂಜೂರು ಮಾಡಿ, ಅದನ್ನು ಅವರ ಮನೆ ಬಾಗಿಲಿಗೆ ಮುಟ್ಟಿಸುವಂತಹ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಆಹಾರ ಧಾನ್ಯಗಳ ಉತ್ಪತ್ತಿ ಹೆಚ್ಚಾಗ ಬೇಕಾದರೆ ರೈತರಿಗೆ ಸಬ್ಸಿಡಿ ದರದಲ್ಲಿ ಗೊಬ್ಬರ ಒದಗಿಸಬೇಕು. ಈ ಮೊದಲು ೬೦ ರೂ.ಗಳಿಗೆ ಒಂದು ಮೂಟೆ ಗೊಬ್ಬರ ಸಿಗುತ್ತಿತ್ತು. ಆದರೆ ಈಗ ೧೦೩ ರೂ.ಗಳನ್ನು ಕೊಡಬೇಕಾಗಿದೆ. ಆದಕಾರಣ ಈ ಹೆಚ್ಚಿನ ೪೩ ರೂ.ಗಳನ್ನು ಸರ್ಕಾರವೇ ಸಬ್ಸಿಡಿ ಮೂಲಕ ಕೊಡಬೇಕು. ರೈತರ ಉದ್ಧಾರ ಮಾಡುತ್ತೇ ವೆಂದು ನಾವು ದೊಡ್ಡದೊಡ್ಡ ಪದಗಳನ್ನು ಬಳಸುತ್ತೇವೆ. ಆದರೆ ಅವರ ಉದ್ಧಾರ ಮಾತ್ರ ಆಗಲಿಲ್ಲ. ಅವರನ್ನು ಯುಗಯುಗಾಂತರಗಳ ಪರಿಸ್ಥಿತಿಯಲ್ಲೇ ಬಿಟ್ಟರೆ ನಾವು ವ್ಯವಸಾಯ ಕ್ಷೇತ್ರದಲ್ಲಿ ಏನನ್ನೂ ಬದಲಾವಣೆ ಮಾಡಿದಂತೆ ಆಗುವುದಿಲ್ಲ ಎಂದು ಹೇಳುತ್ತೇನೆ. ಆದಕಾರಣ ರೈತರಿಗೆ ಎಲ್ಲವನ್ನೂ ರಿಯಾಯಿತಿ ದರದಲ್ಲಿ ಒದಗಿಸಬೇಕು. ರೈತರ ಉದ್ಧಾರವಾಗಬೇಕಾದರೆ ನಾವು ಬಹಳಷ್ಟು ಕಾರ್ಯ

ಕ್ರಮಗಳನ್ನು ಹಾಕಿಕೊಳ್ಳಬೇಕು. ಮುಖ್ಯವಾಗಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ಒದಗಿಸಬೇಕೇ ಹೊರತು, ಅದು ಮಾರ್ವಾಡಿ ಸಾಲವಾಗಬಾರದು ಬಡವರಿಗೆ ರಿಯಾಯಿತಿ ದರದಲ್ಲಿ ಸರ್ಕಾರ ಸಾಲ ಕೊಡಬೇಕು. ಈಗ ಏನು ಬಡ್ಡಿ ವಿಧಿಸಲಾಗುತ್ತಿದೆ ಅದನ್ನು ಕಡಿಮೆ ಮಾಡಬೇಕಲ್ಲದೆ ಸುಸ್ತಿ ಬಡ್ಡಿಯನ್ನು ಮೊದಲು ತೆಗೆದುಹಾಕಬೇಕು. ಆಗ ನಾವು ರೈತರಿಗೆ ಒಳ್ಳೆಯದನ್ನು ಮಾಡಿದಂತೆ ಆಗುತ್ತದೆ. ಮತ್ತು ನಮಗೂ ಸಹ ಒಂದು ರೀತಿಯ ಆತ್ಮತೃಪ್ತಿ ಇರುತ್ತದೆ. ಈಗ ೫ ಸಾವಿರ ರೂ.ಗಳ ಸಾಲ ತೆಗೆದುಕೊಂಡರೆ ಅದಕ್ಕೆ ಹಾಕುವ ಬಡ್ಡಿ ಮತ್ತು ಸುಸ್ತಿ ಬಡ್ಡಿ ಎಲ್ಲ ಸೇರಿ ೭–೮ ವರ್ಷಗಳಲ್ಲಿ ೧೫ ಸಾವಿರ ರೂ.ಗಳಾಗುತ್ತದೆ.

ಇದಕ್ಕಿಂತ ಮಾರ್ವಾಡಿ ಎಷ್ಟೋ ಒಳ್ಳೆಯವನು ಎಂದು ಕಾಣುತ್ತದೆ, ಇದು ಮಾರ್ವಾಡಿ ಸಾಲ ಆಯಿತು, ಇದು ತಪ್ಪಬೇಕು ಎಂದು ನಾನು ಹೇಳಬಯಸುತ್ತೇನೆ. ಆಮೇಲೆ ನಾವು ದೀರ್ಘಾವಧಿ ಸಾಲವನ್ನು ಕೊಡುತ್ತೇವೆ. ಯಾವ ಯಾವ ದೊಡ್ಡ ದೊಡ್ಡ ಅಣೆಕಟ್ಟುಗಳಿವೆ, ಆ ಅಣೆಕಟ್ಟುಗಳ ಪ್ರದೇಶದಲ್ಲಿರತಕ್ಕ ರೈತರಿಗೆ ನಾವು ದೀರ್ಘಾವಧಿ ಸಾಲವನ್ನು ಕೊಡಬೇಕು, ಕೊಟ್ಟಾಗ ಅವರು ಸಾಲ ವನ್ನು ತೆಗೆದುಕೊಂಡು ಸದ್ವಿನಿಯೋಗ ಮಾಡಿದರೆ ಅವರು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸಹಾಯವಾಗುತ್ತದೆ, ಅದರಿಂದ ರಾಷ್ಟ್ರದ ಆಹಾರದ ಉತ್ಪತ್ತಿ ಬಹು ವೇಗದಲ್ಲಿ ಆಗುತ್ತದೆ ಎನ್ನುವುದು ನನ್ನ ಒಂದು ಮನೋಭಾವನೆ. ಮಾನ್ಯ ಅಧ್ಯಕ್ಷಣಿಯವರೆ, ಇವತ್ತಿನ ದಿವಸ ನಾವು ಋಣ ಪರಿಹಾರ ಕಾಯಿದೆಯನ್ನು ತಂದಿದ್ದೇವೆ. ಈ ಋಣ ಪರಿಹಾರ ಕಾಯಿದೆ ಬಂದಮೇಲೆ ಬಡವರಿಗೆ ಸಾಲ ಸಿಕ್ಕುವುದಿಲ್ಲ. ಏಕೆಂದರೆ, ಋಣ ಪರಿಹಾರ ಕಾಯಿದೆ ಇದೆ ಎಂದು ಹೇಳುತ್ತಾರೆ. ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ನಿರ್ಮಾಣಮಾಡಿದ್ದೇವೆಯೋ ಎಂದು ನಾವು ಯೋಚನೆ ಮಾಡಬೇಕು. ಆದುದರಿಂದ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಪ್ರತಿಯೊಂದು ಗ್ರಾಮದಲ್ಲೂ ಕನಿಷ್ಠ ಒಂದು ಬ್ಯಾಂಕ್ ಇರಬೇಕು, ಒಂದು ಗ್ರಾಮೀಣ ಬ್ಯಾಂಕ್ ಇರಬೇಕು. ಯಾರಿಗಾದರೂ ಕಾಯಿಲೆ ಬಂದರೆ ದುಡ್ಡು ಸಿಕ್ಕುವುದಿಲ್ಲ. ಇವತ್ತು ೧೦೦–೧೫೦ ರೂಪಾಯಿ ಅರ್ಜೆಂಟಾಗಿ ಬೇಕು, ಮಗನ ಪ್ರಾಣ ಹೋಗುತ್ತದೆ ಎಂದು ಕೇಳಿದರೆ ೧೫ ನಿಮಿಷದಲ್ಲಿ ಕೊಡತಕ್ಕ ಸಾಮರ್ಥ್ಯ ಬ್ಯಾಂಕಿನಲ್ಲಿರಬೇಕು. ಆ ಒಂದು ವ್ಯವಸ್ಥೆ ಇರಬೇಕು. ಇದರಿಂದ ಬಡವರಿಗೆ ಸಹಾಯವಾಗುತ್ತದೆ. ಇಲ್ಲದೇ ಹೋದರೆ ಶ್ರೀಮಂತ ಕೊಡುವಹಾಗಿಲ್ಲ, ಸರ್ಕಾರ ನೋಡುವಹಾಗಿಲ್ಲ ಅಂದಮೇಲೆ ಅಂತರ್‌ಪಿಶಾಚಿ ಅಥವಾ ತ್ರಿಶಂಕುಸ್ವರ್ಗವಾಗುತ್ತದೆ. ಆದುದರಿಂದ ಗ್ರಾಮೀಣ ಬ್ಯಾಂಕುಗಳನ್ನು ಹೆಚ್ಚು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾರ್ಕೆಟಿಂಗ್ ಸೊಸೈಟಿಗಳ ಬಗ್ಗೆ ಹೇಳುವುದಾದರೆ, ಈ ಮಾರ್ಕೆಟಿಂಗ್ ಸೊಸೈಟಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾ ಇಲ್ಲ, ಕೆಲವು ಮಾತ್ರ ಮಾಡುತ್ತಾ ಇವೆ, ಇನ್ನು ಕೆಲವೆಲ್ಲಾ ಡೀಫಂಕ್ಟ್ ಆಗಿವೆ, ಅವುಗಳಿಗೆ ಅಡ್ವಾನ್ಸ್ ಕೊಡಬೇಕು. ಮತ್ತು ಮಾರ್ಕೆಟಿಂಗ್ ಸೊಸೈಟಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಜೊತೆಗೆ ಮಾನ್ಯ ಸಚಿವರು ವಿಶ್ವಬ್ಯಾಂಕ್‌ನಿಂದ ಸಹಾಯ ಧನ ಪಡೆಯುತ್ತಾ ಇದ್ದಾರೆ, ಅದನ್ನು ಉಪಯೋಗಿಸಿಕೊಂಡು ಬಹುತೇಕ ಮಾರ್ಕೆಟ್‌ಯಾರ್ಡ್‌ಗಳನ್ನು, ಮಳಿಗೆಗಳನ್ನು ನಿರ್ಮಿಸಿ ತಮ್ಮ ಉತ್ಪನ್ನವನ್ನು ತೆಗೆದುಕೊಂಡು ಬರತಕ್ಕಂಥ ರೈತರಿಗೆ ಸಾಕಷ್ಟು ಅನುಕೂಲವನ್ನು ಮಾಡಿಕೊಡಬೇಕು ಎನ್ನುವುದು ನನ್ನ ಉದ್ದೇಶ ವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ರೈತರು ಉದ್ಧಾರವಾಗಬೇಕು ಪ್ರಪಂಚದ ಜನಸಂಖ್ಯೆ ೩೦೦ ಕೋಟಿಯಿಂದ ೪೦೦ ಕೋಟಿ ಕಡೆಗೆ ಹೋಗುತ್ತಾ ಇದೆ. ನಮ್ಮ ರಾಷ್ಟ್ರದ ಜನಸಂಖ್ಯೆ ೭೦ ಕೋಟಿ ಮೀರಿ ಹೊರಟುಹೋಗಿದೆ. ಆದಕಾರಣ ಹೆಚ್ಚಾಗತಕ್ಕ ಹೊಟ್ಟೆಗಳಿಗೆ ಆಹಾರವನ್ನು ಒದಗಿಸತಕ್ಕ ರೈತ ಏನಿದ್ದಾನೆ ಆ ರೈತನ ಸರ್ವಾಂಗೀಣ ಅಭಿವೃದ್ಧಿ ಆದಾಗ ಮಾತ್ರ ಈ ಜನಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ತನ್ನದೇ ಆದಂಥ ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತದೆ. ಇಲ್ಲದೇ ಹೋದರೆ ಈ ರಾಷ್ಟ್ರ, ಈ ರಾಜ್ಯ ಗಂಡಾಂತರದಲ್ಲಿ ಸಿಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಇಷ್ಟನ್ನು ಹೇಳುತ್ತಾ ಇನ್ನು ವ್ಯವಸಾಯ ಇಲಾಖೆ ಬಗ್ಗೆ ಸ್ವಲ್ಪ ಟಚ್ ಮಾಡುತ್ತೇನೆ. ವ್ಯವಸಾಯ ಇಲಾಖೆ ಬಹಳಷ್ಟು ಚೆನ್ನಾಗಿ ಕೆಲಸ ಮಾಡುತ್ತಾ ಇದೆ, ಆದರೆ ಸಾಲದು ಎನ್ನುವುದು ನನ್ನ ಭಾವನೆ. ಏಕೆಂದರೆ, ವ್ಯವಸಾಯ ಇಲಾಖೆ ಮೊದಲನೆಯದಾಗಿ, ಒಳ್ಳೆಯ ಬೀಜವನ್ನು ಒದಗಿಸಬೇಕು, ಒಳ್ಳೆಯ ಗೊಬ್ಬರವನ್ನು ಒದಗಿಸಬೇಕು. ಇವತ್ತಿನ ದಿವಸ ಮಾನ್ಯ ಜಯಚಂದ್ರ ಅವರು ಹೇಳಿದಹಾಗೆ, ಅವರ ಕ್ಷೇತ್ರದಲ್ಲಿ ೭೦೦ ಏಕರೆ ಪ್ರದೇಶದಲ್ಲಿ ಇವರು ಕೊಟ್ಟಿರತಕ್ಕ ಬೀಜವೇ ಹುಟ್ಟಲಿಲ್ಲವಂತೆ, ಹಾಗಾದರೆ

ಅವರ ಗತಿ ಏನು ? ಉತ್ತಿ, ಬಿತ್ತಿ, ಮಳೆ ನೋಡಿ ಏನೋ ಉದ್ಧಾರವಾಗುತ್ತೇನೆ ಎಂದು ಬೀಜವನ್ನು ಬಿತ್ತಿದಾಗ ಮಳೆ ಬರಲಿಲ್ಲ ಅಂದರೆ ರೈತರ ಗತಿ ಏನು? ಈ ಒಂದು ಕಾರಣದಿಂದ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ಬಿತ್ತನೆ ಬೀಜದ ಬಗ್ಗೆ ಕಠಿಣ ನೀತಿಯನ್ನು ಅನುಸರಿಸಬೇಕು ಒಳ್ಳೆಯ ಬೀಜವನ್ನು ಒದಗಿಸಬೇಕು, ಸಬ್ಸಿಡಿ ರೂಪದಲ್ಲಿ ಗೊಬ್ಬರ ಕೊಡಬೇಕು. ಜೊತೆಗೆ ಭೂಮಿಯ ಮಣ್ಣನ್ನು ಪರೀಕ್ಷೆಮಾಡಿ ಅದಕ್ಕೆ ಅನುಗುಣವಾದಂಥ ಬೀಜವನ್ನು ಹಾಕತಕ್ಕ ರೀತಿಯಲ್ಲಿ ಗಮನ ಹರಿಸಬೇಕು. ಕಳೆದ ವರ್ಷ ನಾನು ಉತ್ತರ ಪ್ರದೇಶದಲ್ಲಿ ಪ್ರವಾಸ ಮಾಡುತ್ತಿದ್ದೆ. ಅಲ್ಲಿ ಬೆಳೆಗಳನ್ನು ನಿಯಂತ್ರಿಸತಕ್ಕ ಆಕ್ಟ್ ಇದೆ. ಯಾವ ಕಾಲದಲ್ಲಿ ಈ ಬೆಳೆಯನ್ನು ಹಾಕಬೇಕು ಎಂದು ಸಲಹೆ ಕೊಡುತ್ತಾರೆ. ಭತ್ತ ಬೆಳೆಯಬೇಕು ಎಂದು ಹೇಳಿದರೆ ಭತ್ತ ಬೆಳೆಯಬೇಕು, ಕಬ್ಬು ಬೆಳೆಯಬೇಕು ಅಂದಾಗ ಕಬ್ಬನ್ನು ಬೆಳೆಯುತ್ತಾರೆ, ಹೀಗೆ ಬೆಳೆಯನ್ನು ನಿಯಂತ್ರಣ ಮಾಡುತ್ತಾರೆ. ಇಂಥಾ ಬೆಳೆ ನಿಯಂತ್ರಣ ಕಾಯಿದೆ ತಂದು ಏಕರೂಪದ ಬೆಳೆಗಳನ್ನು ಇಟ್ಟರೆ ರಾಷ್ಟ್ರದ ಆಹಾರ ಸಂಪತ್ತು ಹೆಚ್ಚುವುದಕ್ಕೆ ಅನುಕೂಲ ವಾಗುತ್ತದೆ ಇವತ್ತಿನ ದಿವಸ ವಿಶ್ವವಿದ್ಯಾನಿಲಯಗಳಲ್ಲಿ ಪ್ರಯೋಗಶಾಲೆಗಳಿವೆ. ಬಹಳಷ್ಟು ಚೆನ್ನಾಗಿ ಕೆಲಸ ಮಾಡುತ್ತಿವೆ. ನನಗೆ ಇನ್ನೂ ಅರ್ಧಗಂಟೆ ಕಾಲ ಕೊಟ್ಟಿದ್ದರೆ ವ್ಯವಸಾಯ ಇಲಾಖೆ ಮೇಲೆ ಮಾತನಾಡುವುದಕ್ಕೆ ಅವಕಾಶವಾಗುತ್ತಿತ್ತು. ಮಾನ್ಯ ಅಧ್ಯಕ್ಷಣಿಯವರು ಗಂಟೆ ಬಾರಿಸುತ್ತಿರುವುದರಿಂದ ನನ್ನ ಮಾತಿಗೆ ತಡೆ ಹಾಕಿ ನಿರ್ಗಮಿಸುತ್ತೇನೆ. ದಯಮಾಡಿ ಸಹಕಾರ ಇಲಾಖೆ ಬಗ್ಗೆ ನಾನು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದೇನೆ ಅದನ್ನು ಜಾರಿಗೆ ತಂದರೆ ಬಹುಶಃ ನಮ್ಮ ರಾಜ್ಯ ಪ್ರಗತಿಪಥದತ್ತ ಬಹಳಷ್ಟು ವೇಗವಾಗಿ ಓಡುತ್ತದೆ ಎನ್ನುವುದು ನನ್ನ ಭಾವನೆ. ಇಷ್ಟನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಪು ಸಂಜೀವ ಶೆಟ್ಟಿ (ಕುಂದಾಪುರ್).—ಮಾನ್ಯ ಸಭಾಧ್ಯಕ್ಷಿಣಿಯವರೆ, ಇವತ್ತಿನದಿವಸ ನಮ್ಮ ಈ ಸದನದ ಮುಂದೆ ಇರತಕ್ಕಂಥ ವ್ಯವಸಾಯ ಇಲಾಖೆ, ಸಹಕಾರ ಇಲಾಖೆ ಮತ್ತು ಮಾರ್ಕೆಟಿಂಗ್ ಇಲಾಖೆಗಳ ೧೯೮೧-೮೨ನೇ ಸಾಲಿನ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಕೆಲವು ಸಲಹೆ ಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಮುಖ್ಯವಾಗಿ ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೨೧ ಸಾವಿರ ಬೇರೆ ಬೇರೆ ವಿಧದ ಸಹಕಾರ ಸಂಘಗಳಿದ್ದು ೭೮ ಲಕ್ಷದ ೩೩ ಸಾವಿರ ಸದಸ್ಯರುಗಳಿದ್ದಾರೆ. ಈ ವರದಿಯಲ್ಲಿ ತೋರಿರುವಂತೆ ಎಲ್ಲಾ ಗ್ರಾಮಗಳಿಗೂ ಕೂಡ ಸಹಕಾರಿ ಸೇವೆಗಳನ್ನು ಅಳವಡಿಸಿದ್ದಾರೆ : ಅಲ್ಲದೆ ಕೃಷಿಕರ ಕುಟುಂಬಗಳಿಗೆ ಶೇಕಡ ೬೯ ರಷ್ಟು ಕವರೇಜ್ ಕೊಟ್ಟಿದ್ದಾರೆ ಎನ್ನುವುದನ್ನೂ ಕೂಡ ನಾವು ನೋಡುತ್ತಾ ಇದ್ದೇವೆ. ಇದರಲ್ಲಿ ಅಂಕಿ ಸಂಖ್ಯೆಗಳು ಸ್ವಲ್ಪ ಹೆಚ್ಚು ಕಡಿಮೆ ಆದರೂ ಈ ಒಂದು ಸಹಕಾರ ಇಲಾಖೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡುತ್ತಾ ಇದೆ. ಅದಕ್ಕಾಗಿ ನಾವು ಬಹಳಷ್ಟು ಹೆಮ್ಮೆ ಪಡಬೇಕು. ಮುಖ್ಯವಾಗಿ ಇದರ ಬಗ್ಗೆ ಹೇಳುವುದಾದರೆ, ಇದರಲ್ಲಿ ಕೆಲವು ದೋಷಗಳಿವೆ, ಅದನ್ನು ಹೇಳುತ್ತೇನೆ. ಅಮಾಲ್ಗಮೇಷನ್ ಆಯಿತು. ಸಂಘಗಳು ವಿಲೀನ ಆದಾಗ, ರಿಸರ್ವ್ ಬ್ಯಾಂಕ್ ಆದೇಶವಿದ್ದಾಗ ವಯೋಬಲ್ ಸೊಸೈಟಿ ಮಾಡಬೇಕು ಎಂದು ಸಣ್ಣ ಸಣ್ಣ ಸಂಘಗಳನ್ನು ಒಟ್ಟು ಮಾಡಿ ದೊಡ್ಡ ಸಂಘ ಮಾಡಿರುವುದರಿಂದ ಹಲವಾರು ಕಡೆ ಅದರಿಂದ ತೊಂದರೆಯಾಗಿದೆ. ಮುಖ್ಯವಾಗಿ ಅದನ್ನು ಮಾಡಿರುವ ಉದ್ದೇಶ ಒಳ್ಳೆಯದು ಇರಬಹುದು. ಕೆಲವು ಕಡೆ ಉತ್ತಮ ಸಂಘಗಳು ಹಲವಾರು ಸಂಘಗಳ ಜೊತೆಗೂಡಿ ತೊಂದರೆ ಆಗಿದೆ. ಉದಾಹರಣೆಗೆ ಹೇಳುವುದಾದರೆ, ನನ್ನದೇ ಕ್ಷೇತ್ರದಲ್ಲಿ ಸಹಕಾರ ಸಂಘ ಇದೆ, ತಳವಾರ ಸೇವಾ ಸಹಕಾರ ಸಂಘ ಎಂದು. ಅಲ್ಲಿಂದ ೧೦-೧೨ ಮೈಲಿ ದೂರ ಸದಸ್ಯರು ಕೋಟೇಶ್ವರ ಸಹಕಾರ ಸಂಘಕ್ಕೆ ಹೋಗಿದ್ದಾರೆ. ಈ ಸಹಕಾರ ಸಂಘಗಳಿಂದ ಸೌಲತ್ತು, ರೇಷನ್ ಆರ್ಟಿಕಲ್ಸ್ ಕೊಡುವಾಗ ನನ್ನ ಮಿತ್ರರಾದ ಮಾನ್ಯ ರಾಮು ರವರು ಹೇಳಿದ ಹಾಗೆ ನಾಲ್ಕೈದು ಮೈಲಿ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಆಯಾ ಸಂಘಗಳನ್ನು ವಾಪಸ್ ಕೊಡುವ ವ್ಯವಸ್ಥೆ ಆಗಬೇಕು ಎಂದು ತಮ್ಮ ಮುಖಾಂತರ ಸಲಹೆ ಕೊಡುತ್ತಿದ್ದೇನೆ ಅದೇ ರೀತಿ ಸಹಕಾರ ಸಂಘಗಳ ಹಣದ ವ್ಯವಸ್ಥೆ ಬಗ್ಗೆ ಹೇಳಬೇಕಾಗಿದೆ. ತಮಗೆ ಗೊತ್ತಿದೆ ೩ ಟೈರ್ ಸಿಸ್ಟಂನಲ್ಲಿ ಹಣ ಸಂದಾಯವಾಗುತ್ತದೆ. ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸಹಕಾರಿ ಬ್ಯಾಂಕ್ ಗ್ರಾಮಾಂತರ ಪ್ರದೇಶದಲ್ಲಿ ಪ್ರೈಮರಿ ಸೊಸೈಟಿಗಳಿವೆ. ಮುಖ್ಯವಾಗಿ ಬ್ಯಾಂಕಿನಿಂದ ಹಣ ಕೊಡುವಾಗ ಎನ್. ಸಿ. ರಿಪೋರ್ಟ್ ತರಿಸಿಕೊಂಡು ಹಣ ಕೊಡುತ್ತಾರೆ. ಕೆಲವು ಕಡೆ ಕೆಲಸವಾಗಿದೆ, ಕೆಲವು ಕಡೆ ಸೊಸೈಟಿಗಳು ಹಣ ಕೊಡು ವಾಗ ನೋಡುವುದಿಲ್ಲ. ಅದರಿಂದ ಕೆಲವು ಅನಾಹುತವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ದುರ್ಘಟನೆ

ನಡೆದಿದೆ. ಮಾನ್ಯ ಮಿತ್ರರಾದಂಥ ಹನುಮೇಗೌಡರು ಹೇಳಿದ ಹಾಗೆ ನಮ್ಮ ಜಿಲ್ಲೆಯಲ್ಲಿ ಒಂದು ಅವಾಂತರವಾಗಿದೆ. ಸುಮಾರು ೧೭$\frac{3}{4}$ ಲಕ್ಷ ರೂಪಾಯಿ ದುರ್ವ್ಯವಹಾರ ಆಯಿತು. ಅದರ ಹೆಸರು ಶೀರ್ತಾಡಿ ಸಹಕಾರ ಸಂಘ ಎಂದು. ಆದರಿಂದ ನಮ್ಮ ಜಿಲ್ಲೆಗೆ ದೊಡ್ಡ ಕಳಂಕ ಬಂದಿದೆ. ಏಕೆಂದರೆ, ಯಾವ ಜಿಲ್ಲೆ ಸಹಕಾರಿ ಪಿತಾಮಹ ಅನಿಸಿಕೊಂಡ ಆ ಜಿಲ್ಲೆ ಇವತ್ತು ಇಂತಹ ಒಂದು ದುರ್ಘಟನೆಗೆ ಒಳಗಾಗಿದೆ. ಇದು ಎಂತಹ ಉತ್ತಮವಾದ ಬ್ಯಾಂಕು ಅಂದರೆ ಅಲ್ಲಿ ಶೇಕಡ ೭೨ ರಷ್ಟು ಸಾಲ ರಿಕವರಿ ಆಗಿದೆ, ಈ ರೀತಿ ಯಾವ ಜಿಲ್ಲೆಯೂ ಹೊಂದಿಲ್ಲ, ಅಷ್ಟು ರಿಕವರಿಯಾಗಿದೆ. ಇಂಥಾ ಒಂದು ನಮ್ಮ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಈ ಒಂದು ಘಟನೆಯಿಂದ ನಮಗೆಲ್ಲಾ ಮನಸ್ಸಿಗೆ ನೋವಾಗಿದೆ. ಅಲ್ಲದೆ ಜನರದ್ದು ಸುಮಾರು ೧೦ ಕೋಟಿ ರೂಪಾಯಿ ಡಿಪಾಜಿಟ್ ಹಣ ಕೂಡ ಉಂಟು ಈ ಒಂದು ಕೇಂದ್ರ ಸಹಕಾರಿ ಬ್ಯಾಂಕಿನ ಮೇಲೆ ಕ್ರಮ ಕೈಗೊಂಡಿದ್ದಾರೆ. ಅದರಲ್ಲಿ ಕ್ರಿಮಿನಲ್ ಮತ್ತು ಸಿವಿಲ್ ಎರಡೂ ಆಕ್ಷನ್ ತೆಗೆದುಕೊಂಡಿದ್ದಾರೆ. ಕ್ರಿಮಿನಲ್‌ನಲ್ಲಿ ಸಿ. ಓ. ಡಿ. ತನಿಖೆ ಆಗುತ್ತಿದೆ ಎಂದು ಹೇಳಿದ್ದಾರೆ. ಮತ್ತೆ ಸಿ.ಓ.ಡಿ. ಆಫೀಸರ್ ತನಿಖೆ ಮಾಡುವ ಸ್ಟೇಜಿನಲ್ಲಿ ಅವರಿಗೆ ವರ್ಗವಾಗಿದೆ ಎಂದು ಕೇಳಿದ್ದೇನೆ.

೨-೩೦ ಪಿ.ಎಂ.

ಮಾನ್ಯ ಮಂತ್ರಿಗಳವರು ಈ ವಿಷಯದ ಬಗ್ಗೆ ಸ್ವಲ್ಪ ಗಮನ ಕೊಡಬೇಕು. ಸಿ.ಓ.ಡಿ. ಆಫೀಸರ್ ರವರೊಬ್ಬರಿಂದ ತನಿಖೆಯಾಗಿಯಾಗಿ ಅವರು ಚಾರ್ಜ್‌ಶೀಟ್ ಹಾಕಿದಾಗ ಅಂಥಾ ಅಧಿಕಾರಿಯನ್ನೇ ಟ್ರಾನ್ಸ್‌ಫರ್ ಮಾಡತಕ್ಕಂಥದ್ದು ಸರಿಯಲ್ಲ ನಮ್ಮ ರಾಜ್ಯದಲ್ಲಿ ಈ ರೀತಿಯಾಗಿ ನಡೆಯುತ್ತಿರತಕ್ಕದ್ದು ತಮಗೆಲ್ಲಾ ಗೊತ್ತಿದೆ ಇದರಿಂದ ಜನಗಳಲ್ಲಿ ಸಂಶಯ ಉಂಟಾಗಿ ಅವರು ನಮ್ಮಂಥ ಶಾಸಕರನ್ನು ಕೇಳು ತ್ತಿದ್ದಾರೆ, ಆದುದರಿಂದ ಇನ್ನು ಮುಂದೆ ಈ ರೀತಿಯಾಗದ ಹಾಗೆ ನೋಡಿಕೊಳ್ಳಬೇಕೆಂದು ಸಲಹೆ ಮಾಡಬಯಸುತ್ತೇನೆ. ಈ ಒಂದು ಸೊಸೈಟಿಯಲ್ಲಿ ಏನು ೧೭ ಲಕ್ಷ ಚಿಲ್ಲರೆ ಹಣ ಅವ್ಯವಹಾರವಾಗಿದೆ ಅದನ್ನು ಎರಡು ಕಂತುಗಳಲ್ಲಿ ಕಟ್ಟಬೇಕೆಂದು ಆಡಿಟ್ ಡಿಪಾರ್ಟ್‌ಮೆಂಟಿನವರು ತಿಳಿಸಿದ್ದಾರೆ. ೧೭ ಲಕ್ಷ ಹಣವನ್ನು ಎರಡು ಕಂತುಗಳಲ್ಲಿ ಎಂದರೆ ಬಹಳ ಕಷ್ಟವಾಗುತ್ತದೆ. ಮತ್ತೆ ಆ ಸೊಸೈಟಿ ಇದರಿಂದ ಇನ್ನು ನಷ್ಟವನ್ನು ಹೊಂದಬೇಕಾಗುತ್ತದೆ. ಸಹಕಾರ ಸಂಘಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ೨ ಕಂತು ಗಳೆಂದು ಏನು ಹೇಳಿದ್ದಾರೆ ಅದನ್ನು ೫ ಕಂತುಗಳನ್ನಾಗಿ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬-೭.೮ ಸಹಕಾರಿ ಸಕ್ಕರೆ ಕಾರ್ಖಾನೆಗಳು ಇವೆ ಅವು ನೆನೆಗುದಿಗೆ ಬಿದ್ದಿವೆ, ಆದರೆ ಒಂದು ಸಂತೋಷದ ಸಂಗತಿ ಏನೆಂದರೆ ನಮ್ಮ ಹೊಸ ಯುವಕ ಮುಖ್ಯ ಮಂತ್ರಿಗಳವರು ಬಂದ ಮೇಲೆ ಅಲ್ಲಿಗೆ ಬಂದಾಗ ಶಿಲಾನ್ಯಾಸವನ್ನು ಮಾಡಿ ೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಇದರಿಂದ ಅಲ್ಲಿ ಸಿವಿಲ್ ವರ್ಕ್ಸ್, ಮಿಷನರಿ ಕೂಡಿ ಬಂದಿದೆ. ಆದರೆ ಅಲ್ಲಿಗೆ ಇನ್ನೂ ನಾನ್ ಅಫಿಶಿಯಲ್ಸ್ ಮೆಂಬರ್ಸ್‌ನ್ನು ಹಾಕಿಲ್ಲ, ಆದುದರಿಂದ ಆ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ನಮ್ಮ ರೈತರು ವಾಣಿಜ್ಯ ಬ್ಯಾಂಕ್‌ಗಳಿಂದ, ಮತ್ತಿತರ ಕಡೆಗಳಿಂದ ಸಾಲಸೋಲ ಮಾಡಿ ತಂದು ಶೇರುಗಳನ್ನು ಕೊಂಡು ಕೊಂಡಿದ್ದಾರೆ. ಇದರಿಂದಾಗಿ ಇವತ್ತು ಅವರ ಸಾಲಕ್ಕೆ ಬಡ್ಡಿ ಸಿಕ್ಕುತ್ತಿಲ್ಲ. ಆದುದರಿಂದ ಇವತ್ತು ಅಂಥಾ ರೈತರೇನು ವಾಣಿಜ್ಯ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡಿದ್ದರೆ ಅಂಥವರಿಗೆ ಸ್ವಲ್ಪ ರಿಯಾಯಿತಿಯನ್ನು ತೋರಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಗ್ರಾಹಕರಿಗೆ ಮತ್ತು ರೈತರಿಗೆ ಸಾಮಾನ್ಯವಾಗಿ ಬೇಕಾಗತಕ್ಕಂಥ ಅಕ್ಕಿ ದವಸ ಧಾನ್ಯ ಗಳು ಮತ್ತು ಸೀಮೆ ಎಣ್ಣೆ ಮುಂತಾದವುಗಳನ್ನು ಸಹಕಾರ ಸಂಘಗಳ ಮುಖಾಂತರ ಒದಗಿಸಬೇಕಾಗಿದೆ. ಅದಕ್ಕಾಗಿ ನಮ್ಮಲ್ಲಿ ಟಿ.ಎ.ಪಿ.ಎಂ.ಸಿ ಎಸ್. ಉಂಟು. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸೌತ್ ಕೆನರಾದಲ್ಲಿ ಭತ್ತಕ್ಕೆ ಒಳ್ಳೆಯ ಬೆಲೆ ಬಂದಿದೆ. ಇದರಿಂದ ರೈತರು ತಾವು ಬೆಳೆದಂಥ ಬೆಳೆ ಯನ್ನೆಲ್ಲಾ ಮಾರಿ ಇವತ್ತು ಅವರೇ ಅಕ್ಕಿಯನ್ನು ಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಆದರೆ ಇವತ್ತು ನೀವು ಏನು ಟಿ. ಎ. ಪಿ. ಎಂ. ಸಿ. ಎಸ್. ಮುಖಾಂತರ ಅಕ್ಕಿಯನ್ನು ಕೊಟ್ಟಿದ್ದಾರೆ, ಅದನ್ನೂ ತಿನ್ನುವುದಕ್ಕೂ ಆಗುವುದಿಲ್ಲ ಅಷ್ಟು ಕೆಟ್ಟು ಹೋಗಿದೆ. ಕ್ವಾಲಿಟಿ ಕಂಟ್ರೋಲ್ ಯಾರು ನೋಡಿಕೊಳ್ಳುತ್ತಾರೋ ಗೊತ್ತಿಲ್ಲ. ಅದಕ್ಕೆ ನಾನು ತಮ್ಮಲ್ಲಿ ಸಲಹೆ ಮಾಡುವುದೇನೆಂದರೆ ನಮಗೆ ಭತ್ತವನ್ನು ಕೊಟ್ಟು ಬಿಡಿ ನಾವೇ ಅಕ್ಕಿ ಮಾಡಿಸಿಕೊಳ್ಳುತ್ತೇವೆ. ನಾನು ಹಿಂದೆ ೧೦ ವರ್ಷಗಳಿಂದ

ವ್ಯಾಪಾರ ಮಾಡಿಕೊಂಡಿದ್ದವ ನನಗೆ ಗೊತ್ತಿದೆ. ಒಂದು ಕ್ವಿಂಟಾಲ್ ಭತ್ತದಿಂದ ೫-೬ ಕೆ.ಜಿ. ಜಾಸ್ತಿ ಸಿಗುತ್ತದೆ. ಇದರಿಂದ ಅವರಿಗೆ ೨೧ ರೂ. ಗಳು ಟರ್ನ್ ಓವರ್ ಜಾಸ್ತಿ ಸಿಕ್ಕ ಹಾಗಾಯಿತು. ಆದುದ ರಿಂದ ನಮಗೆ ನೀವು ಭತ್ತವನ್ನೇ ಒದಗಿಸಿ ನಾವು ಅಕ್ಕಿಯನ್ನು ಮಾಡಿಕೊಳ್ಳುತ್ತೇವೆಂದು ಹೇಳಬಯಸು ತ್ತೇನೆ. ಇಲ್ಲದಿದ್ದರೆ ನಮ್ಮ ಗ್ರಾಹಕರಿಗೆ ಒಳ್ಳೆಯ ಉತ್ತಮವಾದ ಅಕ್ಕಿಯನ್ನು ಒದಗಿಸುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತು ಟಿ.ಎ.ಪಿ.ಎಂ.ಸಿ.ಗಳು ನಷ್ಟದಲ್ಲಿವೆ ಅದಕ್ಕೆ ತಾವು ಹೆಚ್ಚಿನ ಪರ್ಸೆಂಟೇಜ್ ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ತಮಗೆ ಗೊತ್ತಿರುವ ಹಾಗೆ ಪಾಮಾಲಿವ್ ಎಣ್ಣೆಯನ್ನು ನಮ್ಮ ಕಡೆ ಮಾರಾಟ ಮಾಡದೇ ಹೊರಗಡೆ ಲಾಭಕ್ಕೆ ಮಾರಿಕೊಂಡಿದ್ದಾರೆ ಎನ್ನತಕ್ಕದ್ದು ತಿಳಿದು ಬಂದಿದೆ ಇದರ ಬಗ್ಗೆ ತಾವು ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಈಗ ಯಾರೋ ಒಬ್ಬರನ್ನು ಮಾತ್ರ ಸಸ್ಪೆಂಡ್ ಮಾಡಿದ್ದಾರೆಂದು ತಿಳಿದು ಬಂದಿದೆ. ಆದರೆ ಇದರಲ್ಲಿ ಯಾರು ಯಾರು ಭಾಗಿಯಾಗಿದ್ದಾರೆ ಅವರೆಲ್ಲರ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಕೃಷಿ ಬತ್ತಕ್ಕೆ ಕಳೆದ ಒಂದೆರಡು ವರ್ಷಗಳಿಂದ ಒಳ್ಳೆಯ ಬೆಲೆ ಸಿಕ್ಕಿದೆ. ಇದರಿಂದ ನಮ್ಮ ರೈತರು ಸ್ವಲ್ಪ ತೃಪ್ತಿಯಿಂದ ಇದ್ದಾರೆ. ಆದರೂ ಸಹ ನಮ್ಮಲ್ಲಿ ಏನಾಗುತ್ತದೆ ಎಂದರೆ ಒಮ್ಮೊಮ್ಮೆ ಮಳೆ ಅತಿ ಹೆಚ್ಚಾಗಿ ಬರುವುದು ಉಂಟು. ೧೨೦, ೧೨೫ ಇಂಚಿನವರೆಗೆ ಮಳೆ ಬೀಳುತ್ತದೆ. ಇದರಿಂದ ನಮ್ಮ ಭೂಮಿಯಲ್ಲಿರತಕ್ಕ ಸಾರವೆಲ್ಲಾ ಹೊರಟು ಹೋಗುತ್ತದೆ. ಇದರಿಂದ ಭೂಮಿಗೆ ಸುಣ್ಣವನ್ನು ಹಾಕುವುದಕ್ಕೆ ರೈತರಿಗೆ ಸರ್ಕಾರ ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇದಕ್ಕಾಗಿ ಕೃಷಿ ಇಲಾಖೆಯವರು ಹೆಚ್ಚಿನ ಆಸಕ್ತಿ ವಹಿಸಿ ರೈತರಿಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಣ್ಣ ಸಾಕಷ್ಟು ಸಿಗುವುದರಿಂದ ಅದನ್ನು ಎಲ್ಲಾ ರೈತರಿಗೂ ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು ಭೂ ಶಾಸನದಿಂದ ನಮ್ಮಲ್ಲಿ ಸಾಕಷ್ಟು ಜನರಿಗೆ ಭೂಮಿ ಸಿಕ್ಕಿದೆ. ಅಂಥಾ ರೈತರಿಗೆ ಇವತ್ತು ನಮ್ಮ ಕೃಷಿ ಇಲಾಖೆಯವರು ಸಹಾಯಕ್ಕೆ ಹೋಗಿ ಅವರಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳ ಬಯಸುತ್ತೇನೆ. ಇದರಿಂದ ಅವರ ಆರ್ಥಿಕ ಸ್ಥಿತಿ ಕೂಡ ಉತ್ತಮಗೊಳ್ಳುತ್ತದೆ. ಇದರಿಂದ ನಮ್ಮ ರಾಜ್ಯಕ್ಕೂ ಒಳ್ಳೆಯದು ಆಗುತ್ತದೆ. ಇಲ್ಲದೇ ಹೋದರೆ ನಮ್ಮ ಜಿಲ್ಲೆಗೆ ವಿಶ್ವಬ್ಯಾಂಕ್‌ನಿಂದ ಏನು ಟಿ. ಅಂಡ್ ವಿ. ಸಿಸ್ಟಂ ಬಂದಿದೆ ಅದು ಕೈ ಬಿಟ್ಟು ಹೋಗುವ ಪರಿಸ್ಥಿತಿ ಉಂಟಾದೀತು ಆದುದರಿಂದ ಈ ಯೋಜನೆ ಬಗ್ಗೆ ಕೂಡ ಸರ್ಕಾರದವರು ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಹೇಳಬಯಸುತ್ತೇನೆ.

ಮಾರ್ಕೆಟ್ ವಿಷಯದ ಬಗ್ಗೆ ಹೇಳುವುದಾದರೆ ನಮ್ಮ ಮಂಗಳೂರಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೆ ಒಂದು ಮಾರ್ಕೆಟ್ ಕಮಿಟಿ ಇತ್ತು. ಅದಕ್ಕೆ ವರ್ಲ್ಡ್ ಬ್ಯಾಂಕ್‌ನವರಿಂದ ಕೂಡ ಸಹಾಯ ದೊರೆತಿದೆ. ಇವತ್ತು ಡಿ. ಸಿ. ಯವರು ಅಲ್ಲಿಗೆ ಅಡ್ಮಿನಿಸ್ಟ್ರೇಟರ್ ಆಗಿದ್ದಾರೆ. ತಮಗೆ ಗೊತ್ತಿರುವ ಹಾಗೆ ಡಿ.ಸಿ.ಯವರಿಗೆ ಸಾಕಷ್ಟು ಕೆಲಸಕಾರ್ಯಗಳು ಇರುವುದರಿಂದ ಇದನ್ನು ನೋಡಿಕೊಳ್ಳುವುದಕ್ಕಾಗು ವುದಿಲ್ಲ. ಆದುದರಿಂದ ಆ ಸಮಿತಿಯನ್ನು ರಿಪೀಲ್ ಮಾಡಬೇಕು ಎನ್ನತಕ್ಕ ಸಲಹೆ ಬೇರೆ ಉಂಟು. ಇವತ್ತು ಆ ಸಮಿತಿಯಿಂದ ಬೇಕಾದಷ್ಟು ಕೆಲಸ ಕಾರ್ಯಗಳು ಸಹ ಆಗಬೇಕಾಗಿದೆ. ಇದರಿಂದ ನಮ್ಮಲ್ಲಿ ಲಕ್ಷ ಗಟ್ಟಲೆ ರೂ.ಗಳ ಕೆಲಸವಾಗಬೇಕಾಗಿದೆ. ಆದುದರಿಂದ ಸರ್ಕಾರ ಈ ಕಮಿಟಿಯನ್ನು ಸರಿಯಾಗಿ ವ್ಯವಸ್ಥಿತವನ್ನಾಗಿ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ. ಹಾಗೆ ಮಾಡಿದರೆ ಅದರಿಂದ ರೈತರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಸದನದಲ್ಲಿ ಮಂಡಿಸಿರತಕ್ಕ ವ್ಯವಸಾಯ, ಸಹಕಾರ ಹಾಗೂ ಮಾರುಕಟ್ಟೆ ಇಲಾಖೆಗಳ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಮುಖ್ಯವಾಗಿ ನಮ್ಮ ದೇಶದಲ್ಲಿ ಆರ್ಥಿಕ ಸ್ಥಿತಿಗತಿಗಳಿಗೆ ಮೂಲವಾಗಿರತಕ್ಕದ್ದು ಕೃಷಿ ಉತ್ಪನ್ನ. ಈ ಉತ್ಪನ್ನ ಸರಿಯಾಗಿ ಆಗಬೇಕು. ಇದ ರಿಂದ ದೇಶದ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು,

† Indicates that remarks or speeches have not been revised by the member concerned.

ಜಮೀನು ಅಭಿವೃದ್ಧಿಗಾಗಿ ರೈತನಿಗೆ ಸಹಾಯ ನೀಡಲು ಸಹಕಾರ ಇಲಾಖೆ ಮತ್ತು ವ್ಯವಸಾಯ ಇಲಾಖೆಗಳು ನೆರವಾಗಲೇಬೇಕಾಗಿದೆ. ಇವತ್ತಿನ ದಿವಸ ಈ ಇಲಾಖೆಗಳು ವಿಶಾಲವಾಗಿ ಬೆಳೆಯುತ್ತಿವೆ, ಆದರೆ ಎಷ್ಟೇ ವಿಶಾಲವಾಗಿ ಬೆಳೆದರೂ ಕೂಡ, ಎಷ್ಟೇ ಅವುಗಳ ಕಾರ್ಯಕ್ರಮ ನಡೆದರೂ ಕೂಡ ರೈತನು ಬಹಳ ಕಷ್ಟದಲ್ಲಿದ್ದಾನೆ, ಹಾಹಾಕಾರಪಡುತ್ತಿದ್ದಾನೆ. ಕೊಟ್ಟ ಸಾಲವನ್ನು ತೀರಿಸುವುದಕ್ಕಾಗುವುದಿಲ್ಲವೆಂಬ ಸ್ಥಿತಿಗೆ ಬಂದಿದ್ದಾನೆ. ಇದಕ್ಕೆಲ್ಲ ಮೂಲ ಕಾರಣ ಏನು ಎಂಬುದನ್ನು ಆಲೋಚಿಸಬೇಕಾಗಿದೆ. ಇಷ್ಟೆಲ್ಲ ದೊಡ್ಡ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಸಹ ರೈತನಿಗೆ ಏಕೆ ಅತೃಪ್ತಿಯಾಗಿದೆ ? ಶೇಕಡ ೮೦ರಷ್ಟು ಜನ ಅತೃಪ್ತಿ, ಅಶಾಂತಿಯಿಂದ ಇರುವುದಕ್ಕೆ ಕಾರಣ ಏನು ಎಂಬುದನ್ನು ಯೋಚಿಸಿದಾಗ ಮುಖ್ಯವಾಗಿ ಆ ಬಗ್ಗೆ ಸಲಹೆ ಕೊಡಲಿಕ್ಕೆ ಇರತಕ್ಕ ಇಲಾಖೆಗಳೆಂದರೆ ಕೃಷಿ ಮತ್ತು ಸಹಕಾರ ಇಲಾಖೆಗಳು. ಅವು ಹೆಚ್ಚಾಗಿ ಈ ಒಂದು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ, ಈ ಇಲಾಖೆಗಳ ಕಾರ್ಯ ನಿರ್ವಹಣೆಯಲ್ಲಿ ಏನೋ ಲೋಪ ಇರಬಹುದೆಂದು ಊಹಿಸತಕ್ಕ ಸನ್ನಿವೇಶ ಒದಗಿದೆ. ಕೃಷಿ ಇಲಾಖೆ ಬಗ್ಗೆ ಮಾನ್ಯ ಮಿತ್ರರು ಸಾಕಷ್ಟು ಹೇಳಿದ್ದಾರೆ. ಜೊತೆಗೆ ಒಂದು ಮಾತು ಹೇಳುವುದಾದರೆ, ಈ ಇಲಾಖೆಯಲ್ಲಿ ಇವತ್ತು ತಂತ್ರಜ್ಞಾನ ಸಾಕಷ್ಟು ಬೆಳೆದಿದೆ ; ಅದನ್ನು ಉಪಯೋಗಿಸಿಕೊಂಡು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ ಹೆಚ್ಚು ಉತ್ಪತ್ತಿ ಇರುವ ಜಮೀನಿನಲ್ಲಿ ಅಧಿಕ ಉತ್ಪಾದನೆಯನ್ನು ತೆಗೆಯುವ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಬೇಕಾದ ರಾಸಾಯನಿಕ ಗೊಬ್ಬರ, ಹಾಗೂ ಉತ್ತಮ ಬೀಜಗಳ ಸರಬರಾಜು ಆಗಬೇಕಾಗುತ್ತದೆ. ಇವತ್ತಿನ ದಿವಸ ಎಲ್ಲಿ ನೋಡಿದರೂ ಸರಿಯಾದ ರೀತಿಯ ಬೀಜಗಳು ಸರಬರಾಜು ಆಗಿಲ್ಲವೆಂದು ಕೇಳಿಬರುತ್ತಿದೆ. ಕ್ರಿಮಿನಾಶಕಗಳು ಸರಿಯಾಗಿ ಸರಬರಾಜು ಆಗುತ್ತಿಲ್ಲ. ರಾಸಾಯನಿಕ-ಗೊಬ್ಬರಗಳ ದರ ಮೇರು ಪರ್ವತದಷ್ಟು ಏರಿದೆ. ಇದರಿಂದಾಗಿ ಉತ್ಪಾದನಾ ವೆಚ್ಚ ಜಾಸ್ತಿಯಾಗುತ್ತಿದೆ. ತತ್ಪರಿಣಾಮವಾಗಿ ಉತ್ಪತ್ತಿ ಕೂಡ ಕಡಿಮೆಯಾಗಿ, ಜೀವನ ನಿರ್ವಹಣೆ ಕಷ್ಟವಾಗಿ ಸಾಲ ತೀರಿಸುವುದಕ್ಕೆ ವಿರೋಧಿಸುವುದು ಆಗಿದೆ. ಈ ದಿಸೆಯಲ್ಲಿ ವಿಚಾರ ಮಾಡಿ, ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ಬಗ್ಗೆ ಸಲಹೆಗಳನ್ನು ರೈತರಿಗೆ ಕೊಡಬೇಕಾಗುತ್ತದೆ. ಭೂಗುಣಕ್ಕೆ ತಕ್ಕಂತೆ, ಹವಾಮಾನಕ್ಕೆ ತಕ್ಕಂತೆ ಯಾವ ಯಾವ ಜಮೀನಿನಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಬಹುದೆಂಬುದನ್ನು ಕೃಷಿ ತಂತ್ರಜ್ಞರು ಮೂಲವಾಗಿ ಯೋಚಿಸಿ ತಕ್ಕ ಸಲಹೆಗಳನ್ನು ಕೊಡಬೇಕಾಗುತ್ತದೆ. ಇದರಲ್ಲಿ ಒಂದು ಅನುಮಾನವೇನೆಂದರೆಗ್ರಾಮ ಮಟ್ಟದಲ್ಲಿ ಗ್ರಾಮ ಸೇವಕರು ಎಂದು ಏನಿದ್ದಾರೆ ಅವರಿಗೆ ಆಯಾಯ ಪ್ರದೇಶಗಳಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಬಹುದೆಂಬ ಬಗ್ಗೆ ಸಲಹೆ ಕೊಡುವ ಜ್ಞಾನ ಇರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಆಲೂಗೆಡ್ಡೆ ಬೆಳೆಯುವ ಪ್ರದೇಶದ ಗ್ರಾಮ ಸೇವಕನನ್ನು ತೆಗೆದುಕೊಂಡು ಹೋಗಿ ಬತ್ತ ಬೆಳೆಯುವ ಗ್ರಾಮಕ್ಕೂ, ತಂಬಾಕು ಬೆಳೆಯುವ ಪ್ರದೇಶದ ಗ್ರಾಮ ಸೇವಕನನ್ನು ತೆಗೆದುಕೊಂಡು ಹೋಗಿ ಆಲೂಗೆಡ್ಡೆ ಬೆಳೆಯುವ ಪ್ರದೇಶಕ್ಕೆ ಹಾಕಿದರೆ ಆ ಪ್ರದೇಶಗಳಲ್ಲಿ ಬೆಳೆಯತಕ್ಕ ಬೆಳೆಗಳ ಬಗ್ಗೆ ಅವರಿಗೆ ಅನುಭವ ಇರುತ್ತದೆ ? ಹೀಗಾಗಿ ನನ್ನ ಕ್ಷೇತ್ರದಲ್ಲಿ ತಂಬಾಕು ಬೆಳೆಯುವುದಕ್ಕೆ ಪ್ರಚೋದನೆ ಮಾಡಿದರು. ಅದು ಎಲ್ಲಿಗೆ ಬಂತು ಎಂದರೆ, ಬ್ಯಾಂಕಿನಲ್ಲಿ ಸಾಲ ಮಾಡಿ ಕೊನೆಗೆ ಆಸ್ತಿಯನ್ನು ಹರಾಜು ಹಾಕುವ ಸ್ಥಿತಿಗೆ ಬಂತು. ಆದರೂ ತಂಬಾಕು ಉತ್ಪಾದನೆ ಆಗಲಿಲ್ಲ. ಆದ್ದರಿಂದ, ಯಾವ ಯಾವ ಭೂಮಿಯಲ್ಲಿ, ಯಾವ ಯಾವ ಹವಾಮಾನದಲ್ಲಿ ಏನೇನು ಬೆಳೆ ಬೆಳೆಯಬಹುದೆಂಬ ಬಗ್ಗೆ ಪರಿಜ್ಞಾನವುಳ್ಳವರನ್ನೇ ಅಲ್ಲಿ ಗ್ರಾಮ ಸೇವಕರನ್ನಾಗಿ ನೇಮಿಸುವ ಬುದ್ಧಿವಂತಿಕೆಯನ್ನು ಇಲಾಖೆಯವರು ಉಪಯೋಗಿಸಬೇಕೆಂಬ ಸಲಹೆ ಕೊಡಬಯಸುತ್ತೇನೆ. ಸಹಕಾರ ಇಲಾಖೆಯ ಬಗ್ಗೆ ಬಹಳ ಯೋಚಿಸಬೇಕಾಗಿದೆ. ಏಕೆಂದರೆ, ರೈತನಿಗೆ ಆರ್ಥಿಕ ಶಕ್ತಿಯನ್ನು ಕಲ್ಪಿಸುವುದು ಮತ್ತು ನಾನಾ ಹಂತಗಳಲ್ಲಿ ಆತನಿಗೆ ಆಗತಕ್ಕ ಶೋಷಣೆಯನ್ನು ತಪ್ಪಿಸುವುದು ಇವೇ ಮುಂತಾದ ಜವಾಬ್ದಾರಿಯನ್ನು ಸಹಕಾರ ಸಂಸ್ಥೆ ಹೊತ್ತಿದೆ. ಅನೇಕ ರೀತಿಯಿಂದ ಅದು ಕಾರ್ಯ ನಿರ್ವಹಣೆಯನ್ನು ಚನ್ನಾಗಿ ಮಾಡಿಕೊಂಡು ಬಂದಿದೆ. ನಮಗೆ ಕೊಟ್ಟಿರುವ ವರದಿಯನ್ನು ನೋಡಿದಾಗ ಎಷ್ಟು ವಿಶಾಲ ವ್ಯಾಪ್ತಿಯಲ್ಲಿ ಪ್ರತಿಯೊಂದು ಗ್ರಾಮವನ್ನೂ ಸಹಕಾರ ಚಳುವಳಿ ತಲುಪಿದೆ ಎಂಬುದಕ್ಕೆ ವರ್ಷವರ್ಷವೂ ಸಹಕಾರ ಸಂಘಗಳಲ್ಲಿ ಸದಸ್ಯರ ಸಂಖ್ಯೆ ಹಾಗೂ ಷೇರು ಬಂಡವಾಳಗಳು ಹೆಚ್ಚಿರುವುದು ನಾಂದಿಯಾಗಿದೆ. ಈ ರೀತಿಯಾಗಿ ಈ ಒಂದು ರಂಗ ಬೆಳೆಯುತ್ತಾ ಬಂದಿದೆ. ಇಲ್ಲಿ ಒಂದೇ ಒಂದು ಅನಪೇಕ್ಷಿತ ವಿಷಯ ಎಂದರೆ, ಇದರಲ್ಲಿ ಸರ್ಕಾರೀ ಪಾಲು ಹೆಚ್ಚಾಗುತ್ತಿದೆಯೇ ವಿನಹ ಜನರ ಪಾಲು ಹೆಚ್ಚಾಗುತ್ತಿಲ್ಲ ; ಅದು ದಿನೇದಿನೇ ಕಡಿಮೆಯಾಗುತ್ತಿದೆ. ಉದಾಹರಣೆಗೆ, ಷೇರುಬಂಡವಾಳ ಕಳೆದ ವರ್ಷಕ್ಕಿಂತ ಜಾಸ್ತಿಯಾಗಿದೆ.

೭೮ ಲಕ್ಷ ಮಂದಿ ಸದಸ್ಯರ ಷೇರು ಬಂಡವಾಳ ೧೬.೬ ಕೋಟಿ ರೂಪಾಯಿ ಎಂದು ಇದೆ. ಇದರಲ್ಲಿ ಸರ್ಕಾರದ ಪಾಲನ್ನು ನೋಡಿದರೆ ೭೪ ಚಿಲ್ಲರೆ ಕೋಟಿ ಇದೆ. ಅಂದರೆ ಪ್ರತಿ ವರ್ಷ ಸರ್ಕಾರ ಷೇರು ಹಣವನ್ನು ಕೊಟ್ಟು ಶಕ್ತಿಯನ್ನು ಹೆಚ್ಚು ಮಾಡಬೇಕಾಗಿದೆಯೇ ಹೊರತು ಜನರ ಪಾಲು ಹೆಚ್ಚಿ ಶಕ್ತಿ ವೃದ್ಧಿಯಾಗುತ್ತಿಲ್ಲ. ಜನರ ಪಾಲು ಏತಕ್ಕಾಗಿ ಕಡಿಮೆಯಾಗುತ್ತಿದೆ, ಜನರಿಗೆ ಇದರಲ್ಲಿ ಏಕೆ ನಂಬಿಕೆ ಕಡಿಮೆಯಾಗುತ್ತಿದೆ ಎಂಬುದನ್ನು ಈ ಸಂದರ್ಭದಲ್ಲಿ ವಿಚಾರ ಮಾಡಬೇಕಾಗಿದೆ. ಇವತ್ತು ಸಹಕಾರ ಸಂಘಗಳ ವ್ಯಾಪ್ತಿ ಬಹಳವಾಗಿ ಬೆಳೆಯುತ್ತಿದೆ. ಆದರೆ ಕೆಲವು ಸಂಘಗಳಿಂದ ಅಷ್ಟಾಗಿ ಪ್ರಯೋಜನ ದೊರೆಯುತ್ತಿಲ್ಲ. ಅವುಗಳ ಮುಖೇನ ಜಮೀನು ಅಭಿವೃದ್ಧಿಗೆ, ಬೆಳೆ ಬೆಳೆಯುವುದಕ್ಕೆ, ಹಾಗೂ ಅವುಗಳನ್ನು ಕಾಪಾಡುವುದಕ್ಕೆ ಸಾಲ ರೈತನಿಗೆ ದೊರೆಯಬೇಕಾಗಿದೆ. ರೈತ ಬೆಳೆದ ಪದಾರ್ಥಗಳನ್ನು ಮಾರಾಟ ಮಾಡುವಲ್ಲಿ ಮಾರಾಟ ಸಹಕಾರ ಸಂಘಗಳು ನೆರವಾಗಬೇಕು. ಜನತೆಗೆ ಬೇಕಾದ ಅಗತ್ಯ ವಸ್ತುಗಳನ್ನು ಒದಗಿಸುವಲ್ಲಿ-ಹೀಗೆ ನಾನಾ ಹಂತಗಳಲ್ಲಿ ರೈತನಿಗೆ ಅನುಕೂಲ ಕಲ್ಪಿಸುವ ಜವಾಬ್ದಾರಿಯನ್ನು ಹೊತ್ತಿರುವ ಈ ಸಹಕಾರ ಸಂಸ್ಥೆಗಳಲ್ಲಿ ಈ ರೀತಿಯಾದರೆ ಆಡಳಿತದಲ್ಲಿ ಏನು ಕರ್ತವ್ಯಲೋಪವಾಗುತ್ತಿದೆ, ಕಾರ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆ ಕಡಿಮೆಯಾಗಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಈ ರಂಗದಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕ ಸಂಸ್ಥೆಗಳು ಇವೆ ; ಇಲ್ಲದಿದ್ದರೆ, ಬಹಳಷ್ಟು ಅನಾಹುತವಾಗುತ್ತಿತ್ತು. ನಮ್ಮ ರಾಜ್ಯಾದ್ಯಂತ ಅನೇಕ ಉತ್ತಮವಾದ ಸಹಕಾರ ಸಂಘಗಳು ಕೆಲಸ ಮಾಡಿದರೂ, ಅವುಗಳ ಮಧ್ಯೆ ಒಂದೆರಡು ಕೆಟ್ಟ ವಾಸನೆಯುಳ್ಳವು ಸೇರಿ ಇಡೀ ವಾತಾವರಣವನ್ನೇ ಕೆಡಿಸುವ ಪರಿಸ್ಥಿತಿ ಇದೆ. ಇವತ್ತಿನ ದಿವಸ, ಇಡೀ ರಾಜ್ಯದಲ್ಲಿರತಕ್ಕ ಎಲ್ಲ ಸಹಕಾರ ಸಂಸ್ಥೆಗಳು ಕೆಟ್ಟು ಹೋಗಿವೆಯೇನೋ ಎಂದು ಹೇಳುವ ಸಂದರ್ಭ ಒದಗಿದೆ. ನಾವು ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ಮತ್ತೊಂದು ಕಡೆ ಜನಗಳು ಆಡತಕ್ಕ ಮಾತನ್ನು ಕೇಳಿದರೆ ನನಗಂತೂ ಬಹಳ ವ್ಯಥೆಯಾಗುತ್ತದೆ. ಸಹಕಾರ ಸಂಘಗಳಲ್ಲಿ ಭಾಗವಹಿಸುವುದು, ಅಧ್ಯಕ್ಷರಾಗಿರುವುದು, ಡೈರೆಕ್ಟರಾಗಿರುವುದು ಅಂದರೆ ಏನೋ ಪಾಪ ಮಾಡಿದ ಹಾಗೆ, ಇಲ್ಲದಿದ್ದರೆ ದುಡ್ಡು ಹೊಡೆಯುವುದಕ್ಕೆ ತಯಾರಾಗಿರಬೇಕು–ಈ ರೀತಿ ದೊಡ್ಡ ಪ್ರಮಾಣದಲ್ಲಿ ಪ್ರಚಾರ ನಡೆಯುವುದಕ್ಕೆ ಪ್ರಾರಂಭವಾಗಿದೆ. ಆದರೆ ಅದು ಸುಳ್ಳು. ಎಲ್ಲೋ ಕೆಲವು ಸಂಸ್ಥೆಗಳು ಆ ರೀತಿ ಇವೆ ಅವುಗಳ ಬಗ್ಗೆ ಇಲಾಖೆ ಹೆಚ್ಚು ಶಕ್ತಿಯಿಂದ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಂಡರೆ ಅದು ತಪ್ಪುತ್ತದೆಂದು ಕಾಣುತ್ತದೆ. ಇವತ್ತಿನ ದಿವಸ ಎಲ್ಲಿ ನೋಡಿದರೂ ಪ್ರಭಾವ ಇದೆ. ಆದರೆ ಮಾನ್ಯ ಸಹಕಾರ ಮಂತ್ರಿಗಳಿಗೆ ಈ ಸಹಕಾರ ಇಲಾಖೆ ಏನೂ ಹೊಸದಲ್ಲ. ಅವರು ಬೇಕಾದಷ್ಟು ಸಹಕಾರ ಸಂಘಗಳಲ್ಲಿ ಪ್ರಾಥಮಿಕದಿಂದ ರಾಜ್ಯಮಟ್ಟದವರೆಗೆ ಕೆಲಸ ಮಾಡಿದ ಅನುಭವ ಇರುವವರು. ಅವರು ಪ್ರಭಾವಕ್ಕೆ ಮಣಿಯದೆ, ಎಲ್ಲೆಲ್ಲಿ ದುಡ್ಡು ಹೋಯಿತು, ಪ್ರಾಮಾಣಿಕತೆ ಇಲ್ಲದೆ ಕೆಲಸ ಮಾಡುವ ಜನರಿದ್ದಾರೆ ಅಂಥವರನ್ನು ಬಲಿ ಹಾಕುವುದಕ್ಕೆ ಎಳ್ಳಷ್ಟು ಜಗ್ಗುವುದಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದೇ ರೀತಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತೀರ್ಥಹಳ್ಳಿ ಸಹಕಾರ ಸಂಘದ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಅಗತ್ಯ. ಇಡೀ ರಾಷ್ಟ್ರದಲ್ಲಿ ಎಲ್ಲ ಕಡೆಯೂ ಬ್ಯಾಂಕುಗಳು ಬಂದಾದರೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಖಾಸಗೀ ಕ್ಷೇತ್ರದಲ್ಲಿ ಹಣ ದೊರೆಯುತ್ತದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲಾ ಬ್ಯಾಂಕುಗಳಲ್ಲಿ ದುಡ್ಡನ್ನು ಇಡಲು, ಬಂಡವಾಳವನ್ನು ಇಡಲು ಅಲ್ಲಿನ ಜನರು ಆಲೋಚಿಸಿದ್ದಾರೆ. ಅವರು ಬಹಳ ಬುದ್ಧಿವಂತರು. ಅಂಥ ೩–೪ ಬ್ಯಾಂಕುಗಳನ್ನು ಕಟ್ಟಿದ್ದಾರೆ. ವಿಶಾಲ ವ್ಯಾಪ್ತಿಯಲ್ಲಿ ಜನರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಆದರೆ ಅಂಥ ಜಿಲ್ಲೆಯಲ್ಲಿರುವ ತೀರ್ಥಹಳ್ಳಿ ಸೊಸೈಟಿಯಿಂದ ಮುಖಕ್ಕೆ ಕಪ್ಪು ಮಸಿ ಬಳಿದಂತಾಗಿದೆ. ಅಂಥ ಮಾದರಿಯಾಗಿರುವ ಜಿಲ್ಲೆಯಲ್ಲಿ ಆ ರೀತಿಯಾಗುವುದು ಸರಿಯಲ್ಲ ; ಅಲ್ಲಿರತಕ್ಕ ಬ್ಯಾಂಕುಗಳು ಹಾಳಾಗುವುದು ಬೇಡ. ಎಂತಹ ಪ್ರಭಾವಿಗಳು ಅಲ್ಲಿ ಇದ್ದರೂ ಅವರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ. ಎಲ್ಲ ಕಡೆ ಈ ಒಂದು ಸಹಕಾರ ಸಂಸ್ಥೆಗಳು ಒಂದಲ್ಲ ಒಂದು ರೀತಿಯಲ್ಲಿ ನಷ್ಟವಾಗುವುದಕ್ಕೆ ಕಾರಣವಾದರೂ ಏನು ? ಏತಕ್ಕೆ ಈ ರೀತಿ ಆಗುತ್ತಿದೆ ಎಂಬುದು ತಿಳಿಯುತ್ತಿಲ್ಲ ; ಇದಕ್ಕೆ ಕಾರಣರು ಯಾರು ಎಂಬುದು ತಿಳಿಯುತ್ತಿಲ್ಲ. ಏಕೆಂದರೆ ಯಾವ ಸಹಕಾರ ಸಂಘಗಳೂ ಸರಿಯಾಗಿ ಆಡಿಟ್ ಆಗುತ್ತಿಲ್ಲ. ಪ್ರತಿ ವರ್ಷ ಸರಿಯಾಗಿ ಆಡಿಟ್ ಆಗುತ್ತಿದ್ದರೆ ಎಲ್ಲಿ ಲುಕ್ಸಾನಾಯಿತು, ಅದಕ್ಕೆ ಕಾರಣರು ಯಾರು ಎಂಬುದನ್ನು ಪತ್ತೆ ಮಾಡಬಹುದಿತ್ತು. ೪ ವರ್ಷಗಳಿಗೊಮ್ಮೆ ಆಡಿಟ್ ಆದರೆ ಆ ವೇಳೆಗೆ ಇಡೀ ಸಂಸ್ಥೆಯೇ ಖಾಲಿಯಾಗಿರುತ್ತದೆ. ಇವತ್ತಿನ ದಿವಸ ಕೇಡರ್ ಪದ್ಧತಿಯನ್ನು ಅನುಸರಿಸುತ್ತಿದ್ದರೂ ಅದರಿಂದ ಅಷ್ಟಾಗಿ ಪ್ರಯೋಜನ ಕಾಣುತ್ತಿಲ್ಲ. ಸಹಕಾರ ಸಂಘಗಳ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಹಾಗೂ

ಡೈರೆಕ್ಟರುಗಳನ್ನು ಕೊಂಡುಕೊಳ್ಳುವ ಮಟ್ಟಕ್ಕೆ ಹೋಗಿರುತ್ತಾರೆ. ಪ್ರತಿಯೊಬ್ಬ ಕಾರ್ಯದರ್ಶಿಗೂ ಮೋಟಾರ್ ಸೈಕಲ್ ಬಂದಿದೆ. ಅವರು ಯಾವ ರೀತಿ ಆಗಿದ್ದಾರೆಂದರೆ, ಆ ಭಾಗಕ್ಕೆ ಅವರೇ ದೊರೆಗಳಾಗಿದ್ದಾರೆ. ಈ ರೀತಿ ಇರುವಾಗ ಕೇಡರ್ ಪದ್ಧತಿ ತಂದರೂ ಅವರು ಕೆಲಸ ಮಾಡದಿದ್ದರೆ ಏನು ಪ್ರಯೋಜನ ? ಅದಕ್ಕೆ ಯಾರು ಜವಾಬ್ದಾರರು ?

ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಆಯಾ ಸಹಕಾರ ಸಂಸ್ಥೆಯ ಆಡಳಿತ ಮಂಡಳಿಗೆ ಅವರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅಧಿಕಾರ ಕೊಡಿ. ಇಲ್ಲದಿದ್ದರೆ ಅವರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ನಾವು ಕಾಮನ್ ಕೇಡರ್‌ನಲ್ಲಿದ್ದೇವೆ, ನಮಗೆ ನಿಮ್ಮ ಹಂಗೇ ಇಲ್ಲ ಎಂದು ಹೇಳುವಂಥ ಸಂದರ್ಭ ಇದೆ. ಈ ಕೇಡರ್ ಪದ್ಧತಿಯು ಸರಿಯಿಲ್ಲದೇ ಇರುವುದರಿಂದ ಈ ರೀತಿಯ ಅಕೃತ್ಯಗಳು ನಡೆಯುವುದಕ್ಕೆ ಕಾರಣವಾಗಿರಬಹುದು ಎಂದು ಸೂಚಿಸಬಯಸುತ್ತೇನೆ. ಈ ವರ್ಷ ಕೂಡ ನಷ್ಟ ಪರಿಹಾರದ ಬಗ್ಗೆ ಹೇಳುತ್ತಾ ೭೪ ಭೂ ಬ್ಯಾಂಕುಗಳಿಗೆ ನಷ್ಟ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅನೇಕ ಭೂ ಬ್ಯಾಂಕುಗಳು ಸರಿಯಾದ ಸ್ಥಿತಿಯಲ್ಲಿಲ್ಲ. ಕನ್‌ಸೂಮರ್ಸ್ ಸೊಸೈಟಿಗಳಲ್ಲಿ ಸಾಮಾನುಗಳನ್ನು ತಂದು ಮಾರಾಟ ಮಾಡುತ್ತಾರೆ, ಅಲ್ಲಿ ಬೆಲೆಗಳಲ್ಲಿ ಏರಿಳಿತವಾಗಿ ಲುಕ್ಸಾನಾಗಬಹುದು. ಇಲ್ಲಿ ಹಾಗಾಗುವುದಕ್ಕಾಗುವುದಿಲ್ಲ. ಭೂ ಅಭಿವೃದ್ಧಿ ಬ್ಯಾಂಕುಗಳಿಗಾಗಲೀ, ಕ್ರೆಡಿಟ್ ಕೋ-ಆಪರೇಟೀವ್ ಸೊಸೈಟಿಗಳಿಗಾಗಲೀ ಸೀಮಿತವಾದ ಕೆಲಸವಿರುತ್ತದೆ. ಇವರು ಅಪೆಕ್ಸ್ ಇನ್‌ಸ್ಟಿಟ್ಯೂಷನ್‌ಗಳಿಂದ ಸಾಲ ತೆಗೆದುಕೊಳ್ಳುತ್ತಾರೆ, ಅದನ್ನು ರೈತರಿಗೆ, ಬೇರೆಯವರಿಗೆ, ಕೊಡುತ್ತಾರೆ, ಮಧ್ಯೆ ಬಡ್ಡಿ ತೆಗೆದುಕೊಳ್ಳುತ್ತಾರೆ. ಇವರಿಗೆ ಲುಕ್ಸಾನು ಹೇಗಾಗುತ್ತದೆ ? ಅನೇಕ ಕಡೆ ತಮಗೆ ಗೊತ್ತಿರುವಂತೆ ಯಾರೋ ದುಡ್ಡು ತೆಗೆದುಕೊಂಡು ಯಾರ ಹೆಸರಿಗೋ ರೆಕಾರ್ಡ್ ಮಾಡಿಸಿರುತ್ತಾರೆ. ಆ ಸಂದರ್ಭದಲ್ಲಿ ಸರಿಯಾಗಿ ರೆಕಾರ್ಡ್ಸ್ ಪ್ರೋಸೆಸ್ ಮಾಡದೇ ಭೂ ದಾಖಲೆಗಳನ್ನು ಸರಿಯಾಗಿ ನೋಡದೇ ಸಾಲ ಕೊಡುವುದರಿಂದಲೇ ಈ ಅನಾಹುತಕ್ಕೆ ಕಾರಣವಾಗಿದೆ. ಶಿರ್ಸಾಡಿ ಸೊಸೈಟಿಯದು ಹಾಗೇ ಆಗಿರುವುದು. ೧೬ ಲಕ್ಷ ರೂಪಾಯಿ ಯಾರೋ ತೆಗೆದುಕೊಂಡಿದ್ದ ದುಡ್ಡು. ಅದನ್ನು ಡೈರೆಕ್ಟರುಗಳ ಮೇಲೆ ಹಾಕಿದರೆ ಪಾಪ, ಇವರು ಕುರ್ಚಿ ಮೇಲೆ ಕುಳಿತುಕೊಂಡು ಕಾಫಿ ಕುಡಿದ ತಪ್ಪಿಗೆ ಈ ರೀತಿ ತಪ್ಪು ಹೊರಿಸುವುದು ಸರಿಯಲ್ಲ. ಹೀಗಾಗಿ ಸಹಕಾರ ರಂಗದಲ್ಲಿ ಸೇವೆ ಸಲ್ಲಿಸಲು ಹೆದರಬೇಕಾದ ಪರಿಸ್ಥಿತಿ ಬಂದಿದೆ, ಈಗ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ನಷ್ಟ ಪರಿಹಾರ ಕೊಡುವ ಕಾರಣ ಏನು ? ಜನತಾ ಬಜಾರ್‌ಗಳಿಗೆ, ಜಿಲ್ಲಾ ಬ್ಯಾಂಕುಗಳಿಗೆ, ಅಥವಾ ಕನ್‌ಸೂಮರ್ಸ್ ಸೊಸೈಟಿಗಳಿಗೆ ನಷ್ಟ ಪರಿಹಾರ ಕೊಟ್ಟರೆ ಅದು ಒಪ್ಪುವ ಮಾತು. ಅಲ್ಲಿ ನಷ್ಟಕ್ಕೆ ದಾರಿ ಇದೆ. ಆದರೆ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಹಾಗಾಗುವುದಕ್ಕೆ ಅವಕಾಶವಿಲ್ಲವುದರಿಂದ ಅಲ್ಲಿ ನಷ್ಟ ಪರಿಹಾರ ಕೊಡುವ ಅವಶ್ಯಕತೆ ಇಲ್ಲ. ಭೂ ಅಭಿವೃದ್ಧಿ ಬ್ಯಾಂಕುಗಳು ಲಾಭ ಮಾಡುವುದಕ್ಕೆ ಅವಕಾಶವಿದ್ದರೂ ನಷ್ಟವಾಗುವುದಕ್ಕೆ ಕಾರಣ ದಾಖಲೆಗಳನ್ನು ಸರಿಯಾಗಿ ಇಡದೆ ಯಾರ ಹೆಸರಿನಲ್ಲೋ ಸಾಲ ಮಂಜೂರು ಮಾಡಿಸಿ ಯಾರೋ ದುಡ್ಡು ಹೊಡೆಯುವ ಸಂದರ್ಭಗಳು ಹೆಚ್ಚಾಗಿರುವುದು. ನಮ್ಮ ಜಿಲ್ಲೆಯಲ್ಲಿ ಇದಾಗಿದೆ. ನಾವೇನಾದರೂ ಈ ಬಗ್ಗೆ ಹೇಳುವುದಕ್ಕೆ ಹೋದರೆ ನಿಮ್ಮ ಜಿಲ್ಲೆಯಲ್ಲಿ ಸಾಲ ವಸೂಲು ಮಾಡಿಕೊಡಿ ಎಂದು ಮಂತ್ರಿಗಳು ಹೇಳುತ್ತಾರೆ. ಅಲ್ಲೂ ಕೂಡ ಇದೇ ರೀತಿ ಆಗಿರಬಹುದು. ಇವತ್ತಿನ ದಿವಸ ಕೋರ್ಟಿಗೆ ಹೋದರೂ ಅಲ್ಲೂ ಕೂಡ ಬಿಡಿಸಿಕೊಂಡು ಬರುವುದು ಕಷ್ಟವಾಗುತ್ತದೆ. ಸರ್ಕಾರದಲ್ಲಾದರೆ ನ್ಯಾಯ ಶಾಖೆ ಇದೆ, ಅಡ್ವೋಕೇಟ್ ಜನರಲ್ ಇದ್ದಾರೆ. ಇಷ್ಟಿದ್ದರೂ ಕೂಡ ನೀವು ಕಷ್ಟಪಡಬೇಕು. ಯಾರು ಇದರಲ್ಲಿ ದುಡ್ಡು ಮಾಡಿಕೊಂಡಿರುತ್ತಾರೋ ಅವರಿಗೆ ಸುಲಭ. ಅವರು ಒಳ್ಳೆಯ ವಕೀಲರನ್ನು ನೇಮಿಸಿಕೊಳ್ಳಬಹುದು, ಫೀಸ್ ಕೂಡ ಚನ್ನಾಗಿ ಕೊಡಬಹುದು. ಹೇಗಾದರೂ ಮಾಡಿ ಕೇಸ್ ಗೆಲ್ಲಬಹುದು. ಇಂಥ ಪರಿಸ್ಥಿತಿ ಇದೆ, ಬ್ಯಾಂಕಿನವರು ಕೊಟ್ಟ ಸಾಲ ಏಕೆ ವಸೂಲಾಗಲಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ನಾನು ತಮಗೆ ಹೇಳುತ್ತೇನೆ, ಇವತ್ತು ೧೦ ಕೋಟಿ ರೂಪಾಯಿ ನಮ್ಮ ಜಿಲ್ಲೆಯಲ್ಲಿ ಬಾಕಿ ಉಳಿದಿದ್ದರೆ ಅದು ಹೆಚ್ಚಿಗೆ ಅಡಿಕೆ ಏರಿಯಾದಿಂದ ಬರತಕ್ಕ ತಾಲ್ಲೂಕುಗಳದ್ದಲ್ಲ. ಸಾಗರ, ತೀರ್ಥಹಳ್ಳಿ, ಹೊಸನಗರ, ಇಂಥ ಕಡೆಗಳಲ್ಲಿ ಸಾಲ ವಸೂಲಾಗಿದೆ. ವಸೂಲಾಗದಿರುವ ಕಡೆ ವಸೂಲಾಗದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ನೋಡಬೇಕು. ಶಿರ್ಸಾಡಿ ಪುನರ್ ವ್ಯವಹಾರ ಏನಾದರೂ ಅಲ್ಲಿ ಆಗಿದೆಯೋ ಎಂಬುದನ್ನು ತಾವು ಹುಡುಕಬೇಕು. ಅದನ್ನು ಹುಡುಕಿ ಹಾಗಾಗಿದ್ದರೆ ಬಲಿ ಹಾಕಬೇಕು. ವಸೂಲು ಮಾಡುವ ಮೆಷಿನರಿ ನಿಮ್ಮ ಕೈಯಲ್ಲಿದೆ. ತಾವು ವಸೂಲು ಮಾಡಬೇಕು. ಇದಕ್ಕೆ ನಾವು ಜವಾಬ್ದಾರರಲ್ಲ. ಬಡ್ಡಿದರದ ವಿಷಯ ತೆಗೆದುಕೊಂಡರೆ ಎರಡು ಮೂರು

ಹಂತದಲ್ಲಿ ಈ ವ್ಯವಹಾರ ಇರುತ್ತದೆ. ಅಪೆಕ್ಸ್ ಬ್ಯಾಂಕಿಗೆ ರಿಸರ್ವ್ ಬ್ಯಾಂಕಿನಿಂದ ಕೊಡುವ ಹಣಕ್ಕೆ ಒಂದು ಮಾರ್ಜಿನ್ ಇಟ್ಟುಕೊಳ್ಳುವುದು. ಇಲ್ಲಿಂದ ಡಿಸ್ಟ್ರಿಕ್ಟ್ ಬ್ಯಾಂಕಿಗೆ ಒಂದು ಮಾರ್ಜಿನ್. ಅಲ್ಲಿಂದ ಸರ್ವಿಸ್ ಕೋ–ಆಪರೇಟೀವ್ ಬ್ಯಾಂಕಿಗೆ ಒಂದು ಮಾರ್ಜಿನ್ ಇಟ್ಟುಕೊಂಡಿರುತ್ತಾರೆ. ಸರಿಯಾಗಿ ಕೆಲಸ ಮಾಡದಿದ್ದರೆ ಖರ್ಚಿ ಅವಕಾಶವನ್ನು ಯಾರಿಗೋ ಕೊಡುವುದಕ್ಕೆ ಏತಕ್ಕೆ ಅಧಿಕಾರ ಕೊಡುತ್ತೀರಿ ? ಯಾವುದಾದರೂ ಒಂದು ತಪ್ಪಿಸಿ. ಜಿಲ್ಲಾ ಬ್ಯಾಂಕುಗಳು ಇಲ್ಲದೆ ಇದ್ದರೂ ವ್ಯವಹಾರ ಮಾಡಬಹುದು ಎಂಬುದಕ್ಕೆ ಸಾಕಷ್ಟು ವಿಚಾರಗಳಿವೆ. ಯಾವ ಹಂತವನ್ನು ತಪ್ಪಿಸಿ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುವುದಕ್ಕೆ ಸಾಧ್ಯವಿದೆ ಎಂಬ ವಿಚಾರವನ್ನು ಸರ್ಕಾರ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ವಿಚಾರಣೆ ಮತ್ತು ಪರಿಶೀಲನೆ ಬಗ್ಗೆ ಹೊಸ ವ್ಯವಸ್ಥೆ ಪ್ರಾರಂಭವಾಗಿದೆ, ಏನಾದರೂ ದೂರು ಬಂದರೆ ಅದರ ಬಗ್ಗೆ ತನಿಖಾ ಕ್ರಮವನ್ನು ಚೆನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದು ಸ್ವಾಗತಾರ್ಹವಾದುದು. ಇದನ್ನು ಚೆನ್ನಾಗಿ ಮಾಡಲಿ. ಸರ್ಕಾರ ಈ ರೀತಿಯ ಬಿಗಿ ಕ್ರಮಗಳನ್ನು ತರುವುದರಿಂದ ಸಹಕಾರಿ ರಂಗದಲ್ಲಿರುವವರಿಗೆ ಆಸಕ್ತಿ ಮತ್ತು ನಂಬಿಕೆ ಹೆಚ್ಚುವುದಕ್ಕೆ ಸಹಾಯಕವಾಗುತ್ತದೆ. ಇನ್ನು ಸಹಕಾರಿ ರಂಗದಲ್ಲಿ ಸಹಕಾರ ಸಂಘಗಳ ಪುನರ್‌ಸಂಘಟನೆ ಮಾಡಿರುವುದರಿಂದ ಒಂದು ರೀತಿಯ ಅವ್ಯವಸ್ಥೆಯಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಚೆನ್ನಾಗಿ ಕೆಲಸ ಮಾಡುವ ಸಂಸ್ಥೆಗಳಿಗೆ ಪುನರ್‌ಸಂಘಟನೆಯಿಂದ ತೊಂದರೆಯಾಗಿದ್ದರೆ ಅದನ್ನು ತಿದ್ದಿ ಎಲ್ಲೆಲ್ಲಿ ಅವಶ್ಯವೋ ಅಲ್ಲಿ ಆ ಸಂಘಗಳನ್ನು ಉಳಿಸುವಂತೆ ಮಾಡೋಣ ಎಂದು ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಮೊದಲೇ ಕೊಟ್ಟಿದ್ದರು. ಪುನರ್‌ಸಂಘಟನಾ ಕಾರ್ಯ ಇನ್ನೂ ಕೆಲವು ಜಿಲ್ಲೆಗಳಲ್ಲಿ ಆಗಿಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಆಗಿದೆ. ಧಾರವಾಡದಲ್ಲಿ ಇದು ಏತಕ್ಕೆ ಆಗಿಲ್ಲ ? ಅಲ್ಲೇನಾದರೂ ಹೆಚ್ಚು ಪ್ರಭಾವ ಬೀರಿ ಅವರು ಹಾಗೆಯೇ ಉಳಿಸಿಕೊಂಡರೆ ? ನಮ್ಮ ಕಡೆ ಎಲ್ಲಾ ಪುನರ್‌ಸಂಘಟನೆ ಮಾಡಿ ಚೆನ್ನಾಗಿ ಕೆಲಸ ಮಾಡುತ್ತಿದ್ದ ಸೊಸೈಟಿಗಳನ್ನೂ ಬಾಗಿಲು ಮುಚ್ಚಿಸಿದರು. ಆದರೆ ಬೇರೆ ಕಡೆ ಏತಕ್ಕೆ ಪುನರ್‌ಸಂಘಟನೆ ಮಾಡಿಲ್ಲ ? ನಮ್ಮಲ್ಲಿ ಏನಾಯಿತು ? ಇದನ್ನು ವಿಚಾರ ಮಾಡಬೇಕು. ಒಂದು ತತ್ವವನ್ನು ತಾವು ಇಟ್ಟುಕೊಂಡರೆ ಅದು ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಇರಬೇಕು. ಮತ್ತು ಪುನರ್ ಸಂಘಟನೆಯಿಂದ ಒಳ್ಳೆಯ ಸಂಘಗಳು ಮುಚ್ಚಿಹೋಗಿದ್ದರೆ ಅದನ್ನು ಉಳಿಸಿಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಸಹಕಾರಿ ರಂಗದಲ್ಲಿ ಇರತಕ್ಕವರಿಗೆ ಅಂದರೆ ಕಾರ್ಯದರ್ಶಿಗಳಿಂದ ಮೊದಲ್ಗೊಂಡು ವ್ಯವಸ್ಥಾಪಕರವರೆಗೆ ಎಲ್ಲರಿಗೂ ತರಬೇತಿ ಕಾರ್ಯಕ್ರಮವನ್ನು ಇಟ್ಟಿದ್ದಾರೆ. ಇದು ಸ್ತುತ್ಯವಾದ ಕೆಲಸ. ಈ ಸಹಕಾರ ರಂಗದಲ್ಲಿರತಕ್ಕವರು ಸಮರ್ಪಣಾ ಮನೋಭಾವದಿಂದ, ಸೇವಾ ಮನೋಭಾವದಿಂದ ಕೆಲಸ ಮಾಡಬೇಕಾಗಿದೆ. ಆ ರೀತಿ ತರಬೇತಿ ಕೊಡುವ ಮಹತ್ತರವಾದ ಜವಾಬ್ದಾರಿ ನಿಮ್ಮ ಮೇಲಿದೆ. ತರಬೇತಿ ಎಂದರೆ ಸುಮ್ಮನೆ ಸರ್ಟಿಫಿಕೇಟ್ ಕೊಡುವ ಮಟ್ಟಿಗೆ ಮಾಡದೇ ನಿಜವಾದ ತರಬೇತಿ ಕೊಡುವಂತೆ ನೋಡಿಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಮತ್ತೆ ಕೃಷಿ ಉತ್ಪನ್ನವನ್ನು ಮಾರಾಟ ಸಹಕಾರ ಸಂಘಗಳು ಕೊಳ್ಳುವಲ್ಲಿ ಎಷ್ಟರಮಟ್ಟಿಗೆ ಪಾತ್ರ ವಹಿಸಿವೆ ಎಂಬುದನ್ನು ನೋಡಿದಾಗ ಆ ಕಾರ್ಯ ತೃಪ್ತಿ ತರುವ ಸ್ಥಿತಿಯಲ್ಲಿಲ್ಲ. ಕೃಷಿ ಉತ್ಪನ್ನ ೧೯೭೯–೮೦ರಲ್ಲಿ ಕೊಂಡುಕೊಂಡಿರುವುದು ೫೩ ಕೋಟಿ ರೂಪಾಯಿ ಇದ್ದರೆ ಬರೀ ಅಡಿಕೆಯದೇ ೩೦ ಕೋಟಿ ರೂಪಾಯಿ ಇದೆ. ಇದು ತೃಪ್ತಿಕರವಾದ ಸ್ಥಿತಿಯಲ್ಲಿಲ್ಲ. ಇದನ್ನು ಹೆಚ್ಚಿಸುವಂಥ ರೀತಿಯಲ್ಲಿ ಮಾರಾಟ ಸಹಕಾರ ಸಂಘಗಳನ್ನು ಹೆಚ್ಚು ಬಲಯುತಗೊಳಿಸಬೇಕು. ಎಲ್ಲಿ ಪ್ರಾಮಾಣಿಕತೆ ಮತ್ತು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡುವ ಸಂಸ್ಥೆಗಳಿವೆಯೋ ಅಂಥ ಕಡೆಗಳಲ್ಲಿ ಬೆನ್ನುತಟ್ಟಿ ಪ್ರೋತ್ಸಾಹ ಕೊಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಒಂದೆರಡು ಸಂಸ್ಥೆಗಳು ಹಾಳಾಗಿರಬಹುದು. ಆದರೆ ಒಳ್ಳೆಯ ಕೆಲಸ ಮಾಡುವಂಥ ಸಂಸ್ಥೆಗಳ ಹೆಸರುಗಳನ್ನು ಪ್ರಚಾರ ಮಾಡಿ ತಿಳಿಸಿ. ಶಿರ್ಶಾಡಿ ಸೊಸೈಟಿಯದೊಂದೇ ಉದಾಹರಣೆಯಾಗುವುದು ಬೇಡ, ಲೆಕ್ಕ ಪರಿಶೋಧನೆಗೆ ಏನು ತೊಂದರೆಯಾಗಿದೆ ಎಂಬುದಕ್ಕೆ ಕಾರಣಗಳನ್ನು ಕೊಟ್ಟಿದ್ದೀರಿ. ಲೆಕ್ಕ ಪರಿಶೋದನೆಗೆ ಸಹಕಾರ ಸಂಘಗಳ ಲೆಕ್ಕಪತ್ರಗಳು ಸಿಗಲಿಲ್ಲ ಎಂದು ಹೇಳಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಡೆಪ್ಯುಟಿ ರಿಜಿಸ್ಟ್ರಾರ್‌ಗಳು ಮುಂತಾದ ಬೇಕಾದಷ್ಟು ಅಧಿಕಾರಿಗಳಿದ್ದೂ ಲೆಕ್ಕದ ಪುಸ್ತಕಗಳು ಸಿಕ್ಕಲಿಲ್ಲ ಎಂದರೆ ಏನರ್ಥ ? ಎಲ್ಲಿ ಲೋಪ ಇದೆ ಎಂಬುದನ್ನು ಹುಡುಕಿ ಇದಕ್ಕೆ ಬಿಗಿ ಶಿಕ್ಷೆಯನ್ನು ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗೆ ಮಾಡದಿದ್ದರೆ ಇನ್ನೂ ಹೆಚ್ಚು ಅಪವಾದಗಳಿಗೆ ಕಾರಣವಾಗಿ ಇದರಿಂದ ಸಮಾಜ ಹಾಳಾಗುತ್ತದೆ, ದೇಶ ಹಾಳಾ

ಗುತ್ತದೆ. ಇವತ್ತು ಸಾಲ ಬಿಟ್ಟುಬಿಡಿ ಎಂದು ಜನ ಕೇಳುತ್ತಿದ್ದಾರೆ. ಇದಕ್ಕೆ ಮೂಲ ಏನು ಎಂಬುದನ್ನು ಹುಡುಕಿ. ಪ್ರೋನೋಟ್ ಕೂಡ ಬರೆದುಕೊಡದೇ ನಂಬಿಕೆಯಿಂದ ಕೊಟ್ಟ ಸಾಲವನ್ನು ಕೊಡುವ ಪರಿಸ್ಥಿತಿ ಇದ್ದದ್ದು ಈ ಪರಿಸ್ಥಿತಿಗೆ ಬರಬೇಕಾದರೆ ಕಾರಣ ಏನು ? ಇದಕ್ಕೆ ಮೂಲ ಕಾರಣ ಏನು ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಪಾಸ್‌ಬುಕ್ ಕೊಟ್ಟು ಅವರ ಜಮೀನಿನ ಸ್ಥಿತಿಗತಿಗಳ ಮೇಲೆ ಸಾಲ ಕೊಡಬೇಕು, ಸಾಲ ಸುಲಭವಾಗಿ ಸಿಗಬೇಕು ಎಂದು ಹೇಳುತ್ತಾರೆ. ಇವತ್ತು ಸಾಲ ತೆಗೆದುಕೊಳ್ಳಬೇಕಾದರೆ ಕಾಲು ಭಾಗದಷ್ಟು ಹಣ ಅಥವಾ ಅರ್ಧ ಭಾಗದಷ್ಟು ಹಣವನ್ನು ಅಲ್ಲಿ ಖರ್ಚು ಮಾಡಬೇಕಾದ ಸಂದರ್ಭ ಇದೆ. ಇವತ್ತು ಸಾವಿರ ರೂಪಾಯಿ ಸಾಲ ತೆಗೆದುಕೊಂಡರೆ ಬಡ್ಡಿ ವಿಚಾರ ಒಂದುಕಡೆ ಇದ್ದರೆ ಬೇರೆ ಬೇರೆ ಕಾರಣಗಳಿಗೇ ಹೆಚ್ಚು ಹಣ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ.

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

೩-೦೦ ಪಿ.ಎಂ.

ರೈತರಿಗೆ ಪಾಸ್ ಬುಕ್ ಕೊಟ್ಟು, ಸಾಲ ಸಿಗುವಂತ ವ್ಯವಸ್ಥೆ ಮಾಡಿದರೆ ಬಡ ರೈತರು ಉಳಿದುಕೊಳ್ಳುತ್ತಾರೆ. ಸಾಲವನ್ನು ಯಾವ ಉದ್ದೇಶಕ್ಕಾಗಿ ರೈತರು ತೆಗೆದುಕೊಂಡಿರುತ್ತಾರೋ ಅದರ ಮೇಲೆ ಉಪಯೋಗ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಆಯಾಯಾ ಸಹಕಾರ ಸಂಘಗಳು ನಿಗಾ ಇಡಬೇಕೆಂದು ಹೇಳುತ್ತೇನೆ. ಆಡಿಟ್ ಇಲಾಖೆ ಏನಿದೆ ಅದಕ್ಕೆ ಸಿಬ್ಬಂದಿ ಕೊರತೆ ಇದೆಯೆಂದು ಹೇಳಿದ್ದೀರಿ. ೭-೮ ವರ್ಷಗಳಿಂದ ತನಿಖೆಯಾಗದೇ ಬಹಳ ಸಹಕಾರ ಸಂಘಗಳು ಬಾಕಿ ಉಳಿದಿವೆಯೆಂದು ಹೇಳಿದ್ದೀರಿ. ಸಿಬ್ಬಂದಿಯನ್ನು ಜಾಸ್ತಿ ಮಾಡಿ, ಆಡಿಟ್ ಆಗದೇ ಇರತಕ್ಕ ಸಂಸ್ಥೆಗಳ ತನಿಖೆಯನ್ನು ಮಾಡಿಸಿ, ಮುಂದೆ ಎಲ್ಲಾ ಸಹಕಾರ ಸಂಘಗಳ ಅಡಿಟ್ ವರದಿಯನ್ನು ಕೊಡುವಂತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ, ಯಾವ ಸಂಸ್ಥೆಗಳ ಹಣ ದುರುಪಯೋಗವಾಗುವುದಕ್ಕೆ ಯಾರು ಯಾರು ಕಾರಣರಾಗಿರುತ್ತಾರೆ, ಅಂಥವರ ಮೇಲೆ ನಿರ್ದಿಷ್ಟ ಅವಧಿಯಲ್ಲಿ ಕ್ರಮ ತೆಗೆದುಕೊಳ್ಳುವಂತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಸ್ವಾಮಿ, ಮಾರುಕಟ್ಟೆ ಸಮಿತಿ ಇದೆ, ಇವತ್ತು ರೈತನಿಗೆ ತೂಕ ಮತ್ತು ಅಳತೆಯಲ್ಲಿ ಮೋಸವಾಗದಂತೆ ನೋಡಿಕೊಳ್ಳುವುದು, ರೈತನು ಬೆಳೆದಂತ ಬೆಳೆಗೆ ಉತ್ತಮ ಬೆಲೆ ಬರುವಂತೆ ಜವಾಬ್ದಾರಿಯನ್ನು ಈ ಇಲಾಖೆ ಹೊತ್ತಿದೆ. ಇವತ್ತು ಮಾರುಕಟ್ಟೆ ಇಲಾಖೆ ಕೊಡತಕ್ಕ ವರದಿ ಬಾನಂಲಿ ವರದಿಯಂತೆ ಇದೆ. ಇನ್ನೂ ಚೆನ್ನಾಗಿ ವರದಿ ಕೊಡವಂತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ಇಲಾಖೆಯ ಇಂಟೆಲಿಜೆನ್ಸ್ ಚುರುಕುಗೊಳಿಸಿ, ಕೃಷಿಕನಿಗೆ ಉತ್ತಮ ರಕ್ಷಣೆ ದೊರೆಯುವಂತೆ ಕೆಲಸ ಮಾಡಬೇಕು. ವಿಶ್ವಬ್ಯಾಂಕಿನಿಂದ ಮಾರುಕಟ್ಟೆಗಳ ಅಭಿವೃದ್ಧಿಗಾಗಿ ಹಣ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಅದರಂತೆ ಕಟ್ಟಡಗಳು ಬಂದಿಲ್ಲ. ಈ ಕೆಲಸವನ್ನು ಸ್ವಲ್ಪ ಚುರುಕುಗೊಳಿಸಿ, ಮಾರುಕಟ್ಟೆ ಕಟ್ಟಡಗಳನ್ನು ಜಾಗ್ರತೆ ಕಟ್ಟಿಸಿ, ವ್ಯಾಪಾರ ಪ್ರಾರಂಭವಾಗುವಂತೆ ಮಾಡಬೇಕು. ರೈತರು ಬೆಳೆದಂತ ಮಾಲು ಮಾರುಕಟ್ಟೆ ಯಾರ್ಡಿಗೆ ಬಂದರೆ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕಾಗುವುದಿಲ್ಲ. ರೈತರಿಗೆ ಮೋಸ ಮಾಡುವುದಕ್ಕಾಗುವುದಿಲ್ಲ. ರೈತರಿಗೆ ಮೋಸ ಮಾಡುವುದಕ್ಕಾಗುವುದಿಲ್ಲ. ಇವತ್ತು ವ್ಯಾಪಾರಸ್ಥರು, ದಳ್ಳಾಳಿಗಳು ಹಳ್ಳಿ ಹಳ್ಳಿಗೆ ಹೋಗಿ ರೈತರುಗಳಿಂದ ಮಾಲನ್ನು ಕೊಂಡು, ಸರ್ಕಾರಕ್ಕೂ ಹಾಗೂ ರೈತರಿಗೂ ಮೋಸ ಮಾಡುತ್ತಿದ್ದಾರೆ. ಒಂದು ಕ್ವಿಂಟಾಲಿಗೆ ನೂರು ರೂಪಾಯಿ ಜಾಸ್ತಿ ಕೊಡುತ್ತೇವೆಂದು ಹೇಳಿ ೫-೧೦ ಕೆ.ಜಿ. ಮೋಸ ಮಾಡುತ್ತಾರೆ. ತೂಕ ಮಾಡುವವನು ಮಾಮೂಲಿ ತೆಗೆದುಕೊಂಡು ಹೋಗುತ್ತಾನೆ. ತೂಕ ಮಾಡುವಂತ ವ್ಯಕ್ತಿ ಮೇಲೆ ನಿಗಾ ಇಡುವಂತ ವ್ಯವಸ್ಥೆ ಮಾಡಬೇಕು. ರೈತರಿಗೆ ಮೋಸವಾಗದಂತೆ ನೋಡಿಕೊಳ್ಳಬೇಕು. ಆದಷ್ಟು ಜಾಗ್ರತೆ ಮಾರುಕಟ್ಟೆ ಯಾರ್ಡಿಗೆ ಬದಲಾಯಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ತೆರಿಗೆಯಿಂದ ತಪ್ಪಿಕೊಳುವುದರಿಂದ ಬೆಲೆಗಳು ಕೂಡ ಏರುಪೇರಾಗುತ್ತವೆ. ಮಡಿಕೇರಿಯಲ್ಲಿ ಒಂದು ಲೋಡ್ ಅಡಿಕೆಗೆ ತೆರಿಗೆಯಿಂದ ತಪ್ಪಿಸಿಕೊಂಡರೆ ಸುಮಾರು ೧೨ ಸಾವಿರ ರೂಪಾಯಿಗಳವರೆಗೆ ಸಂಪಾದಿಸುತ್ತಾರೆ. ಇದರಿಂದ ಸರ್ಕಾರಕ್ಕೂ ಮೋಸ, ಬೆಳೆಗಾರನಿಗೂ ಮೋಸವಾಗುತ್ತದೆ. ಇಂಥಾದನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರ ಈ ವಿಚಾರದಲ್ಲಿ ಸೂಕ್ತ ಕೈಗೊಳ್ಳದೇ ಹೋದರೆ, ತಂಬಾಕು ಬೆಳೆಗಾರರು ಬೀದಿಗೆ ಇಳಿದಂತೆ, ನಾವು ಬಂದು ಬೆಂಗಳೂರಲ್ಲಿ ಕೂತುಕೊಳ್ಳಬೇಕಾಗುತ್ತದೆ. ಇವತ್ತು ಮಾರುಕಟ್ಟೆ ಯಾರ್ಡಿಗೆ ವ್ಯಾಪಾರವನ್ನು ಬದಲಾಯಿಸುವ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮಾರುಕಟ್ಟೆ ಇಲಾಖೆಯಲ್ಲಿರತಕ್ಕ ಸಿಬ್ಬಂದಿಯನ್ನು ಕಾಯಂ ಆಗಿ ನೇಮಕ ಮಾಡಿಲ್ಲ. ಅಲ್ಲಿರತಕ್ಕ ಸಿಬ್ಬಂದಿಯಲ್ಲಿ ಈ ವಿಚಾರದಲ್ಲಿ ಬಹಳ ನೊಂದಿದ್ದಾರೆ. ನಾವು ಎಷ್ಟು ಕೆಲಸ ಮಾಡಿದರೇನೂ ನಮಗೆ ಖಾಯಂ ಆಗಿಲ್ಲವೆಂದು ಗೊಣಗುತ್ತಿದ್ದಾರೆ. ಅವರನ್ನು ಕಾಯಂ ಮಾಡುವುದಕ್ಕೆ ನಿಮಗೆ ಇರತಕ್ಕ ತೊಂದರೆ ಏನು ? ಇವತ್ತು ಅವರನ್ನು ಕಾಯಂ ಆಗಿ ಮಾಡಿದರೆ ಅವರ ಮೇಲೆ ಹೆಚ್ಚು ಹಿಡಿತ ನಿಮಗೆ ಬರುತ್ತದೆ. ಬೇರೆ ಕಡೆಗೆ ವರ್ಗಾವಣೆ ಮಾಡಬಹುದು, ಮಾಮೂಲಿ ಸ್ವಲ್ಪ ಕಡಿಮೆಯಾಗುತ್ತದೆ. ಇಲ್ಲದೇ ಹೋದರ ಅವರವರೇ ಮಾತನಾಡಿಕೊಂಡು ಮಾಲುಗಳನ್ನು ಸಾಗಿಸಿಬಿಡುತ್ತಾರೆ. ಕಾಯಂ ನೌಕರರೆಂದು ಪರಿಗಣನೆ ಮಾಡಬೇಕೆಂದು ಹೇಳುತ್ತೇನೆ. ಕೃಷಿ ಇಲಾಖೆ, ಸಹಕಾರ ಇಲಾಖೆ ಹಾಗೂ ಮಾರುಕಟ್ಟೆ ಇಲಾಖೆಗಳು ಇವತ್ತು ಬಹಳ ಪ್ರಾಮುಖ್ಯವಾದ ಇಲಾಖೆಗಳಾಗಿವೆ. ರೈತನಿಗೆ ಅನುಕೂಲವಾಗುವಂತ ಕೆಲಸಗಳನ್ನು ಈ ಇಲಾಖೆಗಳು ಚೆನ್ನಾಗಿ ಮಾಡಿದರೆ ? ಪ್ರಾಮಾಣಿಕವಾಗಿ ಕಾರ್ಯಗತ ಮಾಡಿದರೆ, ಇವತ್ತು ರೈತನ ಗೊಣಗಾಟ ಏನಿದೆ !ಅದನ್ನು ತಪ್ಪಿಸಿದಂತಾಗುತ್ತದೆ. ರೈತನ ಉತ್ಪನ್ನವು ಜಾಸ್ತಿಯಾಗಿ, ಆತನ ಆರ್ಥಿಕ ಸ್ಥಿತಿಯು ಅಭಿವೃದ್ಧಿಗೊಳ್ಳುತ್ತದೆ. ರೈತರ ಕಲ್ಯಾಣದ ದೃಷ್ಟಿಯಿಂದ ಈ ಇಲಾಖೆಗಳಿಗೆ ಪುನಶ್ಚೇತನ ಕೊಡಬೇಕೆಂದು ಒತ್ತಾಯ ಮಾಡಿ, ನನಗೆ ಮಾತನಾಡಲು ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ದಾಮೋದರ ಮುಲ್ಕಿ (ಮೂಡಬಿದರೆ).—ಮಾನ್ಯ ಅಧ್ಯಕ್ಷರೇ ಸದನದ ಮುಂದೆ ವ್ಯವಸಾಯ ಇಲಾಖೆ, ಸಹಕಾರ ಇಲಾಖೆ, ಮಾರುಕಟ್ಟೆ ಇಲಾಖೆ ಬೇಡಿಕೆಗಳನ್ನು ಏನಿಟ್ಟಿದ್ದಾರೆ ಅವುಗಳಿಗೆ ನನ್ನ ಬೆಂಬಲವನ್ನು ಕೊಡುತ್ತಾ ಸಮಯದ ಅಭಾವದ ಪ್ರಯುಕ್ತ . ಸಹಕಾರ ಇಲಾಖೆ ಕುರಿತು ಮಾತ್ರ ನನ್ನ ಭಾಷಣವನ್ನು ಸೀಮಿತಗೊಳಿಸುತ್ತೇನೆ. ನಮ್ಮ ದೇಶದಲ್ಲಿ ೧೯೦೪ರಲ್ಲಿ ಸಹಕಾರ ಇಲಾಖೆ ಕಾನೂನು ಪ್ರಥಮವಾಗಿ ರಚಿಸಲಾಯಿತು. ಅಂದಿನಿಂದ ಇಂದಿನವರೆಗೆ ಸಹಕಾರ ಸಂಘಗಳು ರಚನೆಯಾಗಿವೆ. ಕಳೆದ ಎರಡು ದಶಕಗಳಲ್ಲಿ ಬಹಳಷ್ಟು ಸಹಕಾರ ಸಂಘಗಳು ಬೆಳೆದಿವೆ ನಿರ್ವಿವಾದ ಮಾತು. ಇವತ್ತು ಅಂಕಿ ಸಂಖ್ಯೆಗಳ ಪ್ರಕಾರ ಸುಮಾರು ೨೧,೫೧೨ ಸಂಸ್ಥೆಗಳಿವೆ, ೭೮ ೩೩ ಲಕ್ಷ ಸದಸ್ಯರಾಗಿದ್ದಾರೆಂದು ತಮ್ಮ ವರದಿಯಿಂದ ಗೊತ್ತಾಗುತ್ತೆ, ಇದನ್ನು ನೋಡಿದರೆ ನಮಗೆ ಸಂತೋಷವಾಗುತ್ತದೆ. ಆದರೆ ಸಹಕಾರ ತತ್ವ ಏನಿದೆ, ಇದನ್ನು ಯಾವ ರೀತಿಯಲ್ಲಿ ಅಳವಡಿಸಿಕೊಂಡಿದ್ದೇವೆ? ಇದರಲ್ಲಿ ಗ್ರಾಮೀಣ ಜನರಿಗೆ ಅದರಲ್ಲಿಯೂ ಮುಖ್ಯವಾಗಿ ಸಣ್ಣ ರೈತರಿಗೆ, ಕರಕುಶಲ ಕೆಲಸಗಾರರಿಗೆ, ದುರ್ಬಲ ವರ್ಗಗಳಿಗೆ ಎಷ್ಟು ಪ್ರಯೋಜನವಾಗಿದೆಯೆಂದು ನೋಡುವಾಗ, ಬಹುಶಃ ಎಷ್ಟು ಪ್ರಯೋಜನವಾಗಬಹುದೆಂದು ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೋ, ಅಷ್ಟು ಆಗಲಿಲ್ಲವೆಂದು ಹೇಳುವುದಕ್ಕೆ ಬಹಳ ಬೇಸರವಾಗುತ್ತದೆ. ೨೧,೫೧೨ ಸಹಕಾರ ಸಂಘಗಳಲ್ಲಿ, ಎಷ್ಟು ಸಂಘಗಳು ಜೀವಂತ ಸ್ಥಿತಿಯಲ್ಲಿವೆ ? ಎಷ್ಟು ಸಂಘಗಳು ಜನರಿಗೆ ಅನುಕೂಲ ಒದಗಿಸುವ ಸ್ಥಿತಿಯಲ್ಲಿವೆ ಎಂಬುದನ್ನು ನೋಡಿದಾಗ ಶೇಕಡ ೭೫ ಭಾಗದ ಸಂಘಗಳು ಜನರಿಗೆ ಅನುಕೂಲ ಒದಗಿಸುವ ಸ್ಥಿತಿಯಲ್ಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಸ್ವಾಮಿ, ಮಾನ್ಯ ಸಹಕಾರ ಇಲಾಖೆಯ ಮಂತ್ರಿಯವರು ಸಹಕಾರ ತತ್ವದ ಎಲ್ಲ ವಿಚಾರಗಳನ್ನು ತಿಳಿದವರೂ ಆಗಿದ್ದಾರೆ, ಇವರ ಕಾಲದಲ್ಲಿ ಸಹಕಾರ ಇಲಾಖೆಯ ಮೂಲಕ ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಹೋಗಲಾಡಿಸಿ, ರಾಜ್ಯದ ಜನತೆಗೆ ಹೆಚ್ಚಿನ ಅನುಕೂಲ ಮಾಡಿಕೊಡುವರೆಂಬ ಆಸೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಸಹಕಾರ ಇಲಾಖೆಯಲ್ಲಿ ಎಲ್ಲ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಲ್ಲಾ ಸಂಘಗಳು ಹಾಳಾಗಿವೆ ಎಂದು ಹೇಳುವುದಿಲ್ಲ. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಸಂಘಗಳಲ್ಲಿ ಅವ್ಯವಹಾರಗಳನ್ನು ನಡೆಯುವುದನ್ನು ಗಮನಿಸಬಹುದು. ಸ್ವಾಮಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಸಹಕಾರ ತತ್ವವನ್ನು ಆಚರಿಸುವುದರಲ್ಲಿ, ಸಹಕಾರ ಸಂಘಗಳಿಗೆ ಹೆಸರುವಾಸಿಯಾದಂತ ಜಿಲ್ಲೆ ಎನ್ನುವ ಹೆಮ್ಮೆ ಇತ್ತು. ಪ್ರಾಯಶಃ ಕಳೆದ ಎರಡು ಮೂರು ವರ್ಷಗಳ ಸ್ಥಿತಿಗತಿಗಳನ್ನು ಕಂಡಾಗ, ನಾವುಗಳು ಹೆಮ್ಮೆ ಪಡುತ್ತಿದ್ದುದು ತಪ್ಪು ಎಂದು ಕಂಡುಬರುತ್ತಿದೆ. ಶಿರ್ತಾಡಿ ಸಹಕಾರ ಸಂಘ ಕುರಿತು ನನ್ನ ಗೆಳೆಯರು ಹೇಳಿದರು. ಇದು ನನ್ನ ಕ್ಷೇತ್ರದಲ್ಲಿರುವ ಸಂಘ. ಈ ಸಹಕಾರ ಸಂಘದ ಬಗ್ಗೆ ನಾನು ೧೯೭೪ರಲ್ಲಿ ಈ ಸದನದಲ್ಲಿ ಪ್ರಶ್ನೆಯೊಂದನ್ನು ಕೇಳಿದ ರ ಮೇರೆಗೆ ಮಾನ್ಯ ಸಚಿವರು ತನಿಖೆ ಮಾಡಿಸಿದಾಗ ಅಲ್ಲಿ ನಡೆದಿರುವ ಅವ್ಯವಹಾರದ ವಿಷಯ ಬಹಿರಂಗವಾಗಿದೆ. ಈ ಸಂಘದಲ್ಲಿ ಹದಿನೇಳುವರೆ ಲಕ್ಷ ರೂಪಾಯಿಗಳಷ್ಟು ಹಣವನ್ನು ''ಇಲ್ಲ'' ಎಂದು ಮಾಡಲಾಗಿದೆ. ಇದರಲ್ಲಿ ಸುಮಾರು ಹದಿನಾರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಜಿಲ್ಲಾ ಸಹಕಾರ ಬ್ಯಾಂಕಿನದು, ಇಲ್ಲಿ ಬಹುಶಃ

ಬೇನಾಮಿ ಸಾಲಗಳನ್ನು ಕೊಟ್ಟಿರುವುದು, ಹೋಗಿ ನೋಡಿದರೆ ಗೊತ್ತಾಗುತ್ತದೆ. ಈ ಸಂಘದ ಸದಸ್ಯರಲ್ಲದವರ ಅಥವಾ ಸಂಘದ ವ್ಯಾಪ್ತಿಗೆ ಸೇರದವರ ಸುಮಾರು ನೂರಕ್ಕೆ ಹೆಚ್ಚು ಜನರ ಹೆಸರಿನಲ್ಲಿ ಸುಮಾರು ೨೦–೨೫–೩೦ ಸಾವಿರ ರೂಪಾಯಿ ತಲಾ ಸಾಲವಿದೆ. ಇದರ ಬಗ್ಗೆ ತನಿಖೆ ಮಾಡಲು ಬೆಂಗಳೂರಿನಿಂದ ಸಹಕಾರ ಇಲಾಖೆಯ ತನಿಖಾ ವಿಭಾಗ ಹೋದಾಗ, ಅಲ್ಲಿಗೆ ತಂತಿ ಹೋಗಿದೆ. ಆಗ ಆ ಮನುಷ್ಯ ಅಲ್ಲಿದ್ದ ದಾಖಲೆಗಳನ್ನೆಲ್ಲ ತಪ್ಪಿಸಿ, ಸಂಘದ ಕಾರ್ಯದರ್ಶಿಯವರನ್ನು ಊರು ಬಿಟ್ಟು ಹೊರಗೆ ಕಳುಹಿಸಿಬಿಟ್ಟಿದ್ದಾನೆ. ರಾಜ್ಯದ ಗುಪ್ತ ದಳದವರು ಈ ಮುಂಚೆ ಎರಡು ವರ್ಷಗಳ ಸತತ ಶ್ರಮಪಟ್ಟು ಹೆಚ್ಚು ಮಾಹಿತಿಗಳನ್ನು ಒದಗಿಸಿಕೊಂಡು ಮೊಕ್ಕದ್ದಮೆಯನ್ನು ಹಾಕಿದಾಗ ಆ ಅಧಿಕಾರಿಯನ್ನೇ ವರ್ಗ ಮಾಡಲಾಯಿತು. ಇದಕ್ಕೆಲ್ಲ ಯಾರ ಕಾಣದ ಕೈ ಪ್ರಭಾವವೆಂದು ಮಾನ್ಯ ಸಚಿವರು ಪರೀಕ್ಷಿಸಬೇಕು. ಈ ಮನುಷ್ಯನಿಗೆ ರಾಜಕೀಯ ಹಾಗೂ ಇತರ ಕ್ಷೇತ್ರಗಳಲ್ಲೂ ಸಹ ಸಾಕಷ್ಟು ಪ್ರಭಾವವಿದೆ. ಇಲ್ಲಿ ಕಳೆದ ಹತ್ತನ್ನೆರಡು ವರ್ಷಗಳಿಂದ book adjustment ಆಗುತ್ತಿದೆ ಎಂದು ಪ್ರತಿಯೊಬ್ಬರಿಗೂ ತಿಳಿದಿದ್ದರೂ ಯಾರೂ ಯಾವ ವಿಧವಾದ ಕ್ರಮ ಕೈಗೊಳ್ಳದೆ ಆ ವ್ಯಕ್ತಿಯನ್ನು ಬೆಳೆಸಿಕೊಂಡು ಹೋಗಿದ್ದಾರೆ. ಆದುದರಿಂದ, ಈಗ ಮಾಡಿರುವ ಗುಪ್ತದಳದ ಅಧಿಕಾರಿಯ ವರ್ಗವನ್ನು ರದ್ದು ಮಾಡಿ ಅವರಿಂದ ಅಪಾದನಾ ಪಟ್ಟಿಯನ್ನು ಸಲ್ಲಿಸುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಮಾತನ್ನು ಅವರು ಹೇಳಿದರು. ಅದೇನೆಂದರೆ, ಜಾಯಿಂಟ್ ಆಡಿಟರ್ ಒಬ್ಬರು ಇದನ್ನು bad debt ಎಂದು ಪರಿಗಣಿಸಬೇಕೆಂದು ಜಿಲ್ಲಾ ಕೇಂದ್ರ ಬ್ಯಾಂಕಿಗೆ ತಿಳಿಸಿದ್ದಾರೆಂದು ಹೇಳಿದರು. ಈ ಸಂದರ್ಭದಲ್ಲಿ ನಾನೊಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಇದರಲ್ಲಿ ಜಿಲ್ಲಾ ಸಹಕಾರ ಬ್ಯಾಂಕಿನವರ ಕೈವಾಡ ಎಷ್ಟು ಇದೆ ? ಈ ಸಂಘದಲ್ಲಿ ಕಳೆದ ಹತ್ತು ವರ್ಷಗಳಿಂದ book adjustment ಆಗುತ್ತಿದೆ ಎಂದು ೧೯೭೬–೭೭ನೇ ವರ್ಷದ ಜಿಲ್ಲಾ ಕೇಂದ್ರ ಬ್ಯಾಂಕಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಲಾಗಿದೆ. ಹೀಗಿರುವಾಗ ಇದರ ಬಗ್ಗೆ ಡೆಪ್ಯುಟಿ ರಿಜಿಸ್ಟ್ರಾರ್ ಗ್ರೇಡಿನವರಾದ ಜಿಲ್ಲಾ ಕೇಂದ್ರ ಬ್ಯಾಂಕಿನ ಕಾರ್ಯದರ್ಶಿಯವರು ಏನು ಕೆಲಸ ಮಾಡಿದ್ದಾರೆ ಮತ್ತು ಏನು ನಿಗಾ ವಹಿಸಿದ್ದಾರೆಂದು ಮಾನ್ಯ ಸಚಿವರು ಪರಿಶೀಲಿಸಬೇಕು. ತಮ್ಮ ಇಲಾಖೆಯವರು ಇದರ ಬಗ್ಗೆ ಲೆಕ್ಕ ಪರಿಶೋಧನೆ ಮಾಡಿದ್ದಾರೆ. ಅದರ ವರದಿಯಲ್ಲಿ ಏನಿದೆ ? ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿರುವ ಸೂಪರ್ ವೈಸರುಗಳು ಏನು ಮಾಡಿದ್ದಾರೆ ? ಆ ವ್ಯಕ್ತಿ ಜಿಲ್ಲಾ ಕೇಂದ್ರ ಬ್ಯಾಂಕಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ. ಮತ್ತು ಇತರ ಕಾರ್ಯಕಾರಿ ಸಮಿತಿ ಸದಸ್ಯರೂ ಇವರೊಂದಿಗೆ ಶಾಮೀಲಾಗಿ ಈ ಕೆಲಸ ಮಾಡಿದ್ದಾರೆ. ಆದುದರಿಂದ, ಕೇವಲ ಆ ವ್ಯಕ್ತಿ ಮೇಲೆ ಮಾತ್ರ ಗುಪ್ತ ದಳದವರಿಂದ ತನಿಖೆ ಮಾಡಿಸದೆ ಇದಕ್ಕೆ ಸಂಬಂಧಪಟ್ಟವರೆಲ್ಲರ ಮೇಲೆ ತನಿಖೆ ಮಾಡಿಸಿ, ಜಿಲ್ಲಾ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಗಳನ್ನು ತಿಳಿಯುವುದು ಉತ್ತಮವೆಂದು ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

ಶ್ರೀ ಯು.ಟಿ. ಫರೀದ್.—ಸಿರ್ತಾಡಿ ಸಹಕಾರ ಸಂಘದ ಬಗ್ಗೆ ಮಾನ್ಯ ಸದಸ್ಯರು ಇಷ್ಟರವರೆಗೆ ಮಾತನಾಡಿದ್ದು ಬಹುಶಃ ನಿಜ. ಜಿಲ್ಲಾ ಕೇಂದ್ರ ಬ್ಯಾಂಕ್ ಮತ್ತು ಅದರ ಕಾರ್ಯಕಾರಿ ಸಮಿತಿಯ ಕೈವಾಡ ಇಲ್ಲಿದೆ ಎನ್ನುವ ಸಂಶಯ ಬರುವುದೂ ಸಹಜವಾಗಿರಬಹುದು. ಆದರೆ, ಅಂಥಾದ್ದೇನೂ ಅಲ್ಲಿ ನಡೆದಿಲ್ಲ. ಅವರು ಹೇಳಿದ ಹಾಗೆ criminal case file ಆಗಿದೆ ಮತ್ತು criminal suit ಸಹ ಇದೆ. ಜೊತೆಗೆ ಅವರ property attach ಕೂಡ ಮಾಡಲಾಗಿದೆ. ಈಗ ಕೇಸ್ ನಡೆಯುತ್ತಿದೆ. ಈಗ ಲೆಕ್ಕ ಪರಿಶೋಧನೆ ಆಗಿದೆಯೋ ಅಥವಾ ಇಲ್ಲವೋ ಎನ್ನುವ ವಿಷಯ ಬಂದಿದೆ. ಪ್ರತಿಯೊಂದು ವರ್ಷವೂ ಕೂಡ ಲೆಕ್ಕ ಪರಿಶೋಧನೆಯಾಗಿದ್ದು ಎಲ್ಲವೂ ಸರಿಯಾಗಿ ಬಂದಿರುವುದರಿಂದ ಇದರಲ್ಲಿ ಯಾವ ಅಧಿಕಾರಿಗಳ ಮತ್ತು ಸೂಪರ್‌ವೈಸರುಗಳ ಅಥವಾ ಬೇರೆಯವರ ಕೈವಾಡ ನಡೆದಿದ್ದಲ್ಲವೆಂದು ನಾನು ಹೇಳುತ್ತಿದ್ದೇನೆ. ಬೇಕಾಗಿದ್ದರೆ ಮಾನ್ಯ ಸಚಿವರು ತನಿಖೆ ಮಾಡಿಸಬಹುದು.

ಡಾ॥ ದಾಮೋದರ ಮುಲ್ಕಿ.—೧೯೭೬–೭೭ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ book adjustment ಆಗಿದೆ ಹೇಳಿದ ಮೇಲೆ ಜಿಲ್ಲಾ ಕೇಂದ್ರ ಬ್ಯಾಂಕಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಲೀ ಅಥವಾ ಬ್ಯಾಂಕಿನ ಕಾರ್ಯದರ್ಶಿಯವರಾಗಲೀ ಏನು ಮಾಡುತ್ತಿದ್ದಾರೆಂದು ನಾನು ಮತ್ತೆ ಕೇಳಬೇಕಾಗಿದೆ. ಇದನ್ನು ಪರಿಶೀಲಿಸುವುದರ ಜೊತೆಗೆ, ಆ ವ್ಯಕ್ತಿ ಜಿಲ್ಲಾ ಕೇಂದ್ರ ಬ್ಯಾಂಕಿನ ಕಾರ್ಯಕಾರಿ ಸಮಿತಿ ಸದಸ್ಯನಾಗಿರುವಾಗಿ ತನ್ನ ಸಂಘದಲ್ಲಿ ಇಂಥಾ ಅವ್ಯವಹಾರ ನಡೆದಿರುವಾಗ ಇದರ ವ್ಯಕ್ತಿಗಳ ಕೈವಾಡ ಅದರಲ್ಲಿಲ್ಲವೇ ಎನ್ನುವುದನ್ನು ಪರಿಶೀಲಿಸಬೇಕು. ಏಕೆಂದರೆ ಇದು ನನ್ನ ಕ್ಷೇತ್ರದ ಸಂಘ.

ಇದರ ಜೊತೆಗೆ ನನ್ನ ಕ್ಷೇತ್ರದಲ್ಲಿ ನೆಲ್ಲಿಕಾರ್ ಮತ್ತು ಹೊಸಬೆಟ್ಟುಗಳಲ್ಲಿ ಎರಡು ಸಂಘಗಳಿವೆ. ಒಂದರಲ್ಲಿ ಎರಡೂವರೆ ಲಕ್ಷ ರೂಪಾಯಿಗಳ ಅವ್ಯವಹಾರವಾಗಿದ್ದರೆ ಇನ್ನೊಂದರಲ್ಲಿ ಎರಡು ಲಕ್ಷ ರೂಪಾಯಿಗಳು ಅವ್ಯವಹಾರವಾಗಿದೆ. ಇಲ್ಲಿ ಗೇಣಿದಾರರ ಹೆಸರಿನಲ್ಲಿ ೫–೧೦ ಸಾವಿರ ರೂಪಾಯಿಗಳ ಸಾಲ ಬರೆಸಿಕೊಂಡಿದ್ದಾರೆ. ಇದರಲ್ಲಿ ಕೆಲವರಿಂದ ದಸ್ಕತ್ ಹಾಕಿಸಿಕೊಂಡಿದ್ದರೆ ಮತ್ತೆ ಕೆಲವರಿಂದ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡಿದ್ದಾರೆ. ಇವತ್ತು ಅವರ ಮನೆಗೆ ಜಪ್ತಿ ಮಾಡಲು ಬರುತ್ತಿದ್ದಾರೆ ಈ ಬಗ್ಗೆ ಅವರು ಸಾಲ ತೆಗೆದುಕೊಂಡಿದ್ದಾರೋ ಅಥವಾ ಇಲ್ಲವೋ ನೋಡಿ ಎಂದು ನಾನು ಇಲಾಖಾ ಅಧಿಕಾರಿಗಳಿಗೆ ಹೇಳಿದ್ದೇನೆ. ಅಥವಾ ಅವರ ಹಣವನ್ನು ಮರುಪಾವತಿ ಮಾಡಿದ್ದರೆ ಮರುಪಾವತಿ ಮಾಡಿದ್ದ ಬಗ್ಗೆ ರಸೀದಿ ಇದೆಯೋ ಅಥವಾ ಇಲ್ಲವೇ ನೋಡಿ ಎಂದು ಹೇಳಿದ್ದೇನೆ. ಆದರೂ ಸಂಘದ ಅಧಿಕಾರವರ್ಗದವರಿಗೆ ಸಹಾಯವಾಗಲೆಂದು ಇಲಾಖಾಧಿಕಾರಿಗಳು ಇದನ್ನು ಮಾಡುತ್ತಿಲ್ಲ. ಇದರಿಂದಾಗಿ ಬಡ ಗೇಣಿದಾರರ ಮನೆಗಳನ್ನು ಇಂದು ಜಪ್ತಿ ಮಾಡುತ್ತಿದ್ದಾರೆ. ಆದುದರಿಂದ, ಈ ಎರಡೂ ಸಂಘಗಳ ವ್ಯವಹಾರದಲ್ಲಿ ಏನಾಗಿದೆ ಎಂಬುದನ್ನು ಮಾನ್ಯ ಸಚಿವರು ಪರಿಶೀಲಿಸಿ, ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಉಪರಿಜಿಸ್ಟ್ರಾರ್ ಅವರಿಗೆ ಆದೇಶ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ವಿಧಾನ ಸಭಾ ಕ್ಷೇತ್ರದಲ್ಲಿ ಒಂದು ಹಾಲು ಸರಬರಾಜು ಸಹಕಾರ ಸಂಘವಿದೆ. ಅದು ಕಳೆದ ಇಪ್ಪತ್ತು ವರ್ಷಗಳಿಂದಲೂ ಒಬ್ಬರೇ ವ್ಯಕ್ತಿಯ ಕೈಯಲ್ಲಿದೆ. ಹದಿಮೂರು ವರ್ಷಗಳ ಕಾಲ ಆತ ಆ ಸಂಘದ ಕಾರ್ಯದರ್ಶಿಯಾಗಿದ್ದ ಆರು ವರ್ಷಗಳ ಕಾಲ ಅಧ್ಯಕ್ಷನಾಗಿದ್ದ, ಮತ್ತೆ ಈಗ Working Director ಎಂದು ಹೇಳಿಕೊಂಡು ಸಂಘದ ಬೀಗದ ಕೈಯನ್ನು ತನ್ನಲ್ಲಿಟ್ಟುಕೊಂಡಿದ್ದಾನೆ. ಈ ಸಂಘದಲ್ಲಿ ಏನೇನಾಗಿದೆ ಎಂಬುದನ್ನು ತನಿಖೆ ಮಾಡಿ ಎಂದು ಮಾನ್ಯ ಸಚಿವರು ಉಪ ರಿಜಿಸ್ಟ್ರಾರ್ ಅವರಿಗೆ ಎರಡೂ ಸಲ ಆದೇಶ ನೀಡಿದ್ದರೂ ಅವರಿಂದ ಇನ್ನೂ ತಮಗೆ ಉತ್ತರ ಬಂದಿಲ್ಲವೆಂದು ತಿಳಿದುಬಂದಿದೆ. ತಮ್ಮ ಜೀವನ ನಡೆಸಲು ಇಂತಹ ಸಂಘಗಳನ್ನೇ ಆಧಾರವಾಗಿಟ್ಟುಕೊಳ್ಳುವ ವ್ಯಕ್ತಿಗಳ ಕೈಗೆ ಆಡಳಿತವನ್ನು ಹೇಗೆ ಕೊಡಲಾಗುತ್ತಿದೆ. ಎಂಬುದನ್ನು ತಾವು ಪರಿಶೀಲಿಸಬೇಕು. ಅಲ್ಲಿ ಕಳೆದ ವರ್ಷ ಚುನಾವಣೆಯಾದಾಗ ಚುನಾವಣಾಧಿಕಾರಿಯನ್ನೇ ನೇಮಕ ಮಾಡಿರಲಿಲ್ಲ. ಜೊತೆಗೆ ಆಡಳಿತ ಮಂಡಳಿ ಸದಸ್ಯಸ್ಥಾನಕ್ಕೆ ಅರ್ಜಿ ಹಾಗಿದ್ದ ಇಬ್ಬರನ್ನು ಕಾರಣ ನೀಡದೆ ತೆಗೆದು ಹಾಕಿದ್ದಾರೆ ಮತ್ತು ಆ ಸಂಬಂಧವಾಗಿ ಸಲ್ಲಿಸಲಾಗಿದ್ದ ಚುನಾವಣಾ ಅರ್ಜಿ ತಕರಾರು ಇನ್ನೂ ಇತ್ಯರ್ಥವಾಗಿಲ್ಲ. ಇದನ್ನೆಲ್ಲ ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಮೊದಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಸಂಘಗಳು ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದು ಅದು ನನಗೆ ಹೆಮ್ಮೆ ಎನಿಸಿತ್ತು. ಆದರೆ, ಇಂದು ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ನೋಡಿ ನನಗೆ ಬಹಳ ಬೇಸರವಾಗಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿ ೧,೧೦,೫೦,೦೦೦, ಸಿರ್ತಾಡಿ ಸಂಘದಲ್ಲಿ ೧೭.೦೦,೦೦೦, ನೆಲ್ಲಿಕಾರ್ ಮತ್ತು ಹೊಸಬೆಟುಗಳಲ್ಲಿ ೨,೦೦,೦೦೦, ಬಜಗೋಳಿ ಸಂಘದಲ್ಲಿ ೩,೦೦,೦೦೦ ಬೆಜೂರು ಸಂಘದಲ್ಲಿ (ಬೆಳ್ತಂಗಡಿ ತಾಲ್ಲೂಕು) ೭,೦೦,೦೦೦, ದಕ್ಷಿಣ ಕನ್ನಡ ಜಿಲ್ಲಾ ಮೀನುಗಾರರ ಸಂಘದಲ್ಲಿ ೪೦.೦೦.೦೦೦ ಮತ್ತು ಜನತಾ ಬಜಾರಿನಲ್ಲಿ ೩೦.೦೦,೦೦೦ ರೂಪಾಯಿಗಳ ಸಾಲ ಕಳೆದ ಆರೇಳು ವರ್ಷಗಳಿಂದ ಇನ್ನೂ ಮರುಪಾವತಿಯಾಗಿಲ್ಲ. ಇದಕ್ಕೆಲ್ಲ, ಹಣ ವಾಪಸ್ಸು ಬಂದಿದೆ. ಪುನಃ ಅವರಿಗೆ ಸಾಲ ಕೊಟ್ಟಿದ್ದೇವೆ ಎನ್ನುವ ರೀತಿಯಲ್ಲಿ ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿ book adjustment ಮಾಡುತ್ತಿದ್ದಾರೆ. ಇದನ್ನು ಮಾನ್ಯ ಸಚಿವರು ಪರಿಶೀಲಿಸಬೇಕು. ಏಕೆಂದರೆ, ಒಂದಲ್ಲ ಒಂದು ದಿವಸ ಸಿರ್ತಾಡಿ ಸಹಕಾರ ಸಂಘದಂತೆ ಇಲ್ಲೂ ಸಹ ಕೊಟ್ಟ ಹಣ ವಾಪಸ್ಸು ಬರುವುದಿಲ್ಲವೆಂಬ ವಿಚಾರ ಎಲ್ಲರಿಗೂ ತಿಳಿದಿರುವುದಾಗಿದೆ. ಆದುದರಿಂದ, ಜಿಲ್ಲಾ ಕೇಂದ್ರ ಬ್ಯಾಂಕಿನ ವ್ಯವಹಾರದ ಬಗ್ಗೆ ತನಿಖೆ ಮಾಡಲು ಒಂದು ಸಮಿತಿ ರಚಿಸಿ, ಅಲ್ಲಿ ಎಲ್ಲವೂ ಸರಿಯಾಗಿ ನಡೆದಿಲ್ಲವೆನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಂಡು ನಾನು ಪುನಃ ತಮ್ಮನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇಷ್ಟೆಲ್ಲ ಅವ್ಯವಹಾರಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಆಗಿರಬೇಕಾದರೆ ಇನ್ನು ರಾಜ್ಯ ಮಟ್ಟದಲ್ಲಿರುವ ಸಹಕಾರ ಸಂಘಗಳಲ್ಲಿ ಅವ್ಯವಹಾರಗಳು ಆಗಿರಲಾರದೆಂದು ಹೇಳಲಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ನಡೆದಿರುವ ಪಾಮೋಲಿನ್ ಎಣ್ಣೆಯ ಅವ್ಯವಹಾರದ ಬಗ್ಗೆ ಮಾನ್ಯ ಮಿತ್ರರು ಹೇಳಿದ್ದಾರೆ. ಇದು ತಮ್ಮ ಇಲಾಖೆಗೂ ಮತ್ತು ಆಹಾರ ಇಲಾಖೆಗೂ ಸಂಬಂಧಪಟ್ಟ ವಿಚಾರವಾಗಿದೆ. ೧೯೮೧–೮೨ನೇ ಸಾಲಿಗೆ ಸುಮಾರು ೧೭ ಲಕ್ಷ ರೂಪಾಯಿಗಳ ಪಾಮೋಲಿನ್ ಎಣ್ಣೆಯನ್ನು ಕರ್ನಾಟಕ ಆಹಾರ ನಿಗಮದವರು

ಕೊಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಸಹಕಾರ ಸಂಘಗಳ ಮೂಲಕ ವಿತರಣೆಮಾಡಲು ಕೊಟ್ಟಿದ್ದಾರೆ.ಆದರೆ, ಆಹಾರ ಸಹಾಯಕ, ಕರ್ನಾಟಕ ಆಹಾರ ನಿಗಮದ ಮೆನೇಜಿರ್ ಮತ್ತು ಜನತಾ ಬಜಾರಿನ ಅಧಿಕಾರ ವರ್ಗ — ಈ ಮೂವರೂ ಸೇರಿಕೊಂಡು ಆ ಎಣ್ಣೆಯನ್ನು ಯಾರಿಗೂ ವಿತರಣೆ ಮಾಡದೆ ಅವ್ಯವಹಾರ ನಡೆಸಿದ್ದಾರೆ. ಇಂಥಾ ದೂರು ಬಂದು ಹೋಗಿ ನೋಡಿದಾಗ ಸುಮಾರು ಎಂಟು ಸಾವಿರ ಕೆಜಿ ಎಣ್ಣೆ ಹಾಗೆಯೇ ವಿತರಣೆಯಾಗದೇ ಉಳಿದಿತ್ತು ಮತ್ತು ಅದನ್ನೀಗ ಹಿಡಿಯಲಾಗಿದೆ. ಆದರೆ, ಅದರ ಬಗ್ಗೆ ಸಂಬಂಧಪಟ್ಟವರ ಮೇಲೆ ಇನ್ನೂ ಮೊಕದ್ದಮೆ ಹೂಡಿಲ್ಲ. ಇದರಲ್ಲಿ ಆಹಾರ ಸಹಾಯಕ ಮೊದಲ ಅಪರಾಧಿಯಾಗಿದ್ದಾನೆ. ಏಕೆಂದರೆ ಪಾಮೋಲಿನ್ ಎಣ್ಣೆ ಅಲ್ಲಿಗೆ ಬಂದಮೇಲೆ ಕ್ಲುಪ್ತ ಸಮಯದಲ್ಲಿ ಇಡೀ ಜಿಲ್ಲಾದ್ಯಂತ ವಿತರಣೆ ಮಾಡಲು ಸಹಕಾರ ಸಂಘಗಳಿಗೆ ಹಂಚಿಕೆ ಮಾಡುವುದನ್ನು ಬಿಟ್ಟು, ತಮಗೆ ಬೇಕಾದವರಿಗೆ ಮತ್ತು ಬಹಿರಂಗ ಮಾರುಕಟ್ಟೆಗೆ ಹೋಗುವ ಹಾಗೆ ಮಾಡಿದ್ದಾರೆ.ಹೀಗಾಗಿ ಪ್ರತಿ ಲೀಟರಿಗೆ ಎಂಟು ರೂಪಾಯಿಗಳಂತೆ ಸಹಕಾರ ಸಂಘಗಳಲ್ಲಿ ಮಾರಾಟವಾಗಬೇಕಾಗಿದ್ದ ಎಣ್ಣೆ ಬಹಿರಂಗವಾಗಿ ಮಾರುಕಟ್ಟೆಯಲ್ಲಿ ಪ್ರತಿ ಲೀಟರಿಗೆ ಹನ್ನೆರಡೂವರೆ ರೂಪಾಯಿಗಳಂತೆ ಮಾರಾಟವಾಗಿದೆ. ಈ ಮಧ್ಯೆ ಇರುವ ವ್ಯತ್ಯಾಸದ ಹಣ ಎಲ್ಲಿ ಹೋಗಿದೆ ? ದುರ್ವ್ಯವಹಾರ ಯಾರಿಂದ ಆಗಿದೆ ? ತಪ್ಪನ್ನು ಯಾರು ಮಾಡಿದ್ದಾರೆ ಎಂಬುದರ ಬಗ್ಗೆ ಗುಪ್ತ ದಳದವರಿಂದ ತನಿಖೆ ಮಾಡಿಸಬೇಕೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೆ, ನಾನು ಆಡಿಟ್ ವಿಷಯದ ಬಗ್ಗೆ ನಾನು ಒಂದು ಮಾತು ಹೇಳಬೇಕಾಗಿದೆ. ಮಾನ್ಯ ನನ್ನ ಮಿತ್ರರು ಹೇಳಿದರು ನಮ್ಮ ಈ ಸಹಕಾರ ಸಂಘಗಳು ಬಹುಶಃ ಇಷ್ಟು ಭಾರಿ ಮೊತ್ತದ ಅವ್ಯವಹಾರ ಮಾಡಬೇಕಾದರೆ ಈ ಆಡಿಟರ್‌ಗಳು ತಮ್ಮ ಕೆಲಸವನ್ನು ಕ್ಲುಪ್ತ ಸಮಯದಲ್ಲಿ ಸರಿಯಾಗಿ ಮಾಡಿದರೆ ಇದನ್ನು ಮಾಡಲಿಕ್ಕೆ ಅಸಾಧ್ಯ. ತಮ್ಮ ಡಿಪಾರ್ಟ್‌ಮೆಂಟ್ ಆಫಿಷಿಯಲ್ ಅದನ್ನು ಸರಿಯಾಗಿ ಇನ್ಸ್‌ಪೆಕ್ಟ್ ಮಾಡಿದರೆ ಅಥವಾ ಈ ಒಂದು ಆಡಿಟರ್‌ಗಳು ತಮ್ಮ ಕೆಲಸವನ್ನು ಯೋಗ್ಯ ರೀತಿಯಲ್ಲಿ ಮಾಡಿ ಆ ರಿಪೋರ್ಟ್‌ನ್ನು ಸರ್ಕಾರಕ್ಕೆ ಸಲ್ಲಿಸಿದರೆ ಈ ತರಹ ಅವ್ಯವಹಾರ ಆಗಲಿಕ್ಕೆ ಸಾಧ್ಯವೇ ಅಂತ ತಾವು ಪರಿಶೀಲಿಸಬೇಕು. ನಾನು ತಮಗೆ ಒಂದು ಮಾತು ಹೇಳಲಿಕ್ಕೆ ಬಯಸುತ್ತೇನೆ. ಯಾವ ಯಾವ ಸೊಸೈಟಿಗಳಲ್ಲಿ ಅವ್ಯವಹಾರಗಳು ನಡೆದಿದೆ ಅಂಥ ತಮ್ಮ ಗಮನಕ್ಕೆ ಬಂದಕೂಡಲೇ ಆ ಒಂದು ಪೀರಿಯಡ್‌ನಲ್ಲಿ ಯಾವ ಆಡಿಟರ್ ಅಲ್ಲಿ ಆಡಿಟ್ ಮಾಡಿದ್ದಾರೆ ಎಂದು ನೋಡಿ, ಅಥವಾ ಯಾವ ಅಧಿಕಾರಿ ಅಲ್ಲಿ ಹೋಗಿ ಇನ್ಸ್‌ಪೆಕ್ಟ್ ಮಾಡಿದ್ದಾನೆಂದು ನೋಡಿ ಆತನನ್ನು ತಕ್ಷಣ ಸಸ್ಪೆಂಡ್ ಮಾಡಿದರೆ ಬಹುಶಃ ಆಡಿಟರ್ ಅಲ್ಲಿ ಹೋಗಿ ಇನ್ಸ್‌ಪೆಕ್ಟ್ ಮಾಡಿದ್ದಾನೆಂದು ನೋಡಿ ಆತನನ್ನು ತಕ್ಷಣ ಸಸ್ಪೆಂಡ್ ಮಾಡಿದರೆ ಬಹುಶಃ ಆಡಿಟರ್ ಅಲ್ಲಿ ಹೋಗಿ ಆ ಒಂದು ಸೊಸೈಟಿಯ ಸಿಬ್ಬಂದಿಯಿಂದಾಗಲಿ, ಅಥವಾ ಅಧಿಕಾರ ವರ್ಗದಿಂದಾಗಲಿ, ಏನಾದರೂ ಪಡೆದುಕೊಂಡು ಒಳ್ಳೆಯ ಆಡಿಟ್ ರಿಪೋರ್ಟ್ ಬರೆಯುವುದನ್ನು ನಿಲ್ಲಿಸಿಬಿಡುತ್ತಾರೆ. ಅಲ್ಲಿರುವ ತಪ್ಪನ್ನು ಕೂಲಂಕಷವಾಗಿ ಪರಿಶೀಲಿಸಿ ಅವರು ಡಿಪಾರ್ಟ್‌ಮೆಂಟಿಗಾಗಲಿ ಸರ್ಕಾರಕ್ಕೆ ಆಗಲಿ ತಿಳಿಸುತ್ತಾರೆ. ಈ ಒಂದು ಕೆಲಸವನ್ನು ತಾವು ಮಾಡಿದರೆ ಬಹುಶಃ ನಮ್ಮ ಈ ಸಹಕಾರಿ ಸಂಘದಲ್ಲಿ ಆಗತಕ್ಕ ಅವ್ಯವಸ್ಥೆ ತಪ್ಪುತ್ತದೆ ಮತ್ತು ಕ್ಲುಪ್ತ ಕಾಲದಲ್ಲಿ ಎರಡು ಮೂರು ವರ್ಷ ಬಾಕಿ ಇಡದೇ ಕ್ಲುಪ್ತ ಕಾಲದಲ್ಲಿ ಆಡಿಟ್ ಆಗುವಂತೆ ಆಗಬೇಕು ಎನ್ನುವ ಸೂಚನೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. ಈ ಆಡಿಟ್ ವಿಂಗನ್ನು ಅಡ್ಮಿನಿಸ್ಟ್ರೇಟೀವ್ ವಿಂಗ್‌ನ್ನು ಬೇರೆ ಬೇರೆ ಮಾಡಿದ್ದಾರೆ ಅದು ಒಳ್ಳೆಯ ಕೆಲಸ ಎಂದು ನಾನು ಹೇಳಬೇಕಾಗಿದೆ. ಆದರೆ ಇಲ್ಲಿ ಕೋಆರ್ಡಿನೇಷನ್ ಸರಿಯಾಗಿ ಆಗುವುದಿಲ್ಲ ಎನ್ನುವ ಮಾತು ಕೇಳಿಬರುತ್ತಿದೆ. ಕೆಲವೊಂದು ಹೌದು ಎಂದು ಕಾಣುತ್ತದೆ. ನನಗೆ ಅನಿಸತಕ್ಕದ್ದು ಈ ಆಡಿಟ್ ವಿಂಗ್, ಅಡ್ಮಿನಿಸ್ಟ್ರೇಟೀವ್ ವಿಂಗ್ ಎರಡಕ್ಕೂ ಒಬ್ಬರನ್ನೇ ಸ್ಟೇಟ್ ಲೆವೆಲ್ ಹೆಡ್ ಮಾಡುವುದು ಉಚಿತ. ಸ್ಟೇಟ್ ಲೆವೆಲ್‌ನಲ್ಲಿ ಇದು ಒಬ್ಬರ ಕೈಯಲ್ಲಿರುವುದು ಉಚಿತ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ಇನ್ನೊಂದು ಆಡಿಟ್ ಫೀಜು. ಅದು ತಮಗೆ ಗೊತ್ತಿದೆ ತಾವು ಕೋಆಪರೇಟೀವ್‌ನಲ್ಲಿ ಬಹಳಷ್ಟು ಕಾಲ ಇದ್ದವರು. ಈ ಆಡಿಟ್ ಮಾಡುವಾಗ ಆಡಿಟ್ ಫೀಜು ಮ್ಯಾಕ್ಸಿಮಮ್ ಒಂದು ಸಾವಿರ ರೂಪಾಯಿ ಆಡಿಟ್ ಫೀಜು ತೆಗೆದುಕೊಳ್ಳುತ್ತಿದ್ದರು. ಇವೊತ್ತು ಬಹುಶಃ ಪಾಯಿಂಟ್ ಜೀರೋ ಒನ್ ಅಂತ ಕಾಣುತ್ತದೆ. ಸುಮಾರು ಒಂದು ಕೋಟಿ ರೂಪಾಯಿ ವ್ಯವಹಾರ ಆಗಿದ್ದರೆ ಸುಮಾರು ಹತ್ತು ಸಾವಿರ ರೂಪಾಯಿ ಆಡಿಟ್ ಫೀಜು ಬರುತ್ತದೆ. ನಾನು ಟಿಎಪಿಸಿಎಮ್‌ಎಸ್ ನಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಕಳೆದ ವರ್ಷ ಆಡಿಟ್ ಫೀಜು ೧೪ ಸಾವಿರ ರೂಪಾಯಿ

ಕೊಟ್ಟಿದ್ದರೆ, ಈ ವರ್ಷ ೨೦ ಸಾವಿರ ರೂಪಾಯಿ ಆಡಿಟ್ ಫೀಜು ಕೊಡುತ್ತಿದ್ದೇವೆ. ಇವೊತ್ತು ಆ ಸೊಸೈಟಿ ಲಾಭದಾಯಕವಾಗಿ ನಡೆಯುತ್ತಾ ಇರಲಿ, ಲಾಭ ಇಲ್ಲದೇ ಇರಲ್ಲಿ ಅಥವಾ ಅವರ ಸ್ಥಿತಿಗತಿಗಳಲ್ಲಿ ಈ ತರಹ ದುಭಾರಿ ವೆಚ್ಚವನ್ನು ಈ ಆಡಿಟ್ ಫೀಜು ಮೂಲಕ ಕೊಡಿಸಿದರೆ ಇದು ಬಹಳ ತಪ್ಪಾಗುತ್ತದೆ, ಇದಕ್ಕೆ ಕ್ಯಾಟಗರಿ ಮಾಡಿ ೫ ಸಾವಿರ, ೩ ಸಾವಿರ, ೧ ಸಾವಿರ ಆಡಿಟ್ ಫೀಜು ಅಂತ ಇಟ್ಟುಕೊಳ್ಳುವುದು ಸೂಕ್ತವೆಂದು ನಾನು ತಮಗೆ ಸೂಚನೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಈಗ ದೊಡ್ಡ ದೊಡ್ಡ ಕಾರ್ಪೊರೇಷನ್‌ಗಳನ್ನು ನಮ್ಮ ಈ ಪ್ರೈವೇಟ್ ಆಡಿಟರ್ಸ್ ಮಾಡುತ್ತಿದ್ದಾರೆ ಅಲ್ಲಿ ಇಷ್ಟು ವೆಚ್ಚ ಆಗುವುದಿಲ್ಲ ಇವೊತ್ತು ಎರಡು ಕೋಟಿ ರೂಪಾಯಿ ಟರ್ನ್ ಓವರ್ ಆದರೆ ೨೦ ಸಾವಿರ ರೂಪಾಯಿ ಆಡಿಟ್ ಫೀಜು ಕೊಡುವುದು ಅಂತ ಹೇಳಿದರೆ ಇದು ಬಹಳಷ್ಟು ದುಭಾರಿ ವೆಚ್ಚ, ತಾವು ಅದನ್ನು ಗಮನಿಸಬೇಕು. ಇದಕ್ಕೆ ಬೇಕಾದ ಬದಲಾವಣೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಲಿಕ್ಕೆ ಇಚ್ಛಿಸುತ್ತೇನೆ. ಇನ್ನೊಂದು ಮಾತು ಬೋರ್ಡ್ ಆಫ್ ಡೈರೆಕ್ಟರ್‌ಗಳಿಗೆ ಎರಡು ವರ್ಷದ ಅವಧಿಯನ್ನು ಕೊಟ್ಟಿದ್ದೀರಿ. ಇವೊತ್ತು ಆ ಅವಧಿಯನ್ನು ಮೂರು ವರ್ಷಕ್ಕೆ ಏರಿಸುವುದು ಉಚಿತ ಅಂತ ಹೇಳುವ ಒಂದು ಮಾತು ಅಲ್ಲಲ್ಲಿ ಕೇಳಿಬರುತ್ತಾ ಉಂಟು. ನನಗೆ ಇದು ಸರಿ ಅಂತ ಅನಿಸುತ್ತಿದೆ ಇದರ ಜೊತೆಗೆ ಈ ಅಧಿಕಾರಿ ವರ್ಗದವರಿಗೆ ೬ ವರ್ಷಕ್ಕಿಂತಲೂ ಹೆಚ್ಚು ಅಧ್ಯಕ್ಷರಾಗಿರಲು ತಾವು ಅವಕಾಶ ಕೊಟ್ಟಿದ್ದೀರಿ. ೬ ವರ್ಷ ಅವರಿಗೆ ಅಧಿಕಾರ ಅವಧಿ ಅಂತ ಕೊಟ್ಟಿದ್ದೀರಿ. ನನಗಾದರೂ ಅನಿಸುತ್ತದೆ. ಈ ೬ ವರ್ಷ ಅವಧಿಯಲ್ಲಿ ಒಂದು ವರ್ಷ ಅವಧಿಯನ್ನು ಮೊಟಕುಗೊಳಿಸಿದರೂ ಪರವಾಯಿಲ್ಲ ಅವರ ಒಟ್ಟಿಗೆ ಡೈರೆಕ್ಟರ್ ಆಗಿ ಇರುವವರು ೧೦ ವರ್ಷಕ್ಕಿಂಥ ಹೆಚ್ಚು ಮುಂದುವರಿಯಬಾರದು ಅಂತ ಹೇಳುವ ಒಂದು ಕಾನೂನು ತರುವುದು ಸೂಕ್ತ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಇವೊತ್ತು ಅಧ್ಯಕ್ಷನಾಗಿ ಬಿಡುವವನು ತನ್ನ ಮಗನನ್ನು ಪುನಃ ಅಧ್ಯಕ್ಷನನ್ನಾಗಿ ಮಾಡುತ್ತಾನೆ ಅಥವಾ ಮನೆಯವರನ್ನು ತಂದು ಡೈರೆಕ್ಟರನ್ನಾಗಿ ಮಾಡಿಕೊಂಡು ಆ ಒಂದು ಸ್ವಾರ್ಥ ಹಿತಾಸಕ್ತಿಗಳ ಕೂಟ ಅಂತ ಏನು ಉಂಟು ಆದರಿಂದ ಹೊರಗೆ ಆ ಸೊಸೈಟಿಯನ್ನು ಬಿಡುವುದಿಲ್ಲ ಅಂತ ಹೇಳುವುದು ತಮ್ಮ ಗಮನಕ್ಕೆ ಬಂದಿರಬಹುದು ಇನ್ನು ಕೊನೆಯದಾಗಿ ನಾನು ಒಂದು ಮಾತನ್ನು ತಮಗೆ ಹೇಳಬೇಕಾಗಿದೆ. ಟಿಎಪಿಸಿಎಮ್‌ಎಸ್ ನ ಕೆಲವು ಪ್ರಶ್ನೆಗಳು ನಮ್ಮ ಗೆಳೆಯರಾದ ಕಾಪು ಸಂಜೀವಶೆಟ್ಟರು ತಮ್ಮ ಹತ್ತಿರ ಹೇಳಿದರು ಲೆವಿ ಪ್ಯಾಡಿಯಿಂದಾಗಿ ಯಾವ ರೀತಿಯಲ್ಲಿ ಟಿಎಪಿಸಿಎಮ್‌ಎಸ್ ಗಳಿಗೆ ತೊಂದರೆ ಬರುತ್ತದೆಂದು. ಇವೊತ್ತು ಲೆವಿ ಪ್ಯಾಡಿಯನ್ನು ಕಲೆಕ್ಟ್ ಮಾಡುವಂತಾದ್ದು, ಅದನ್ನು ಸ್ಟೋರ್ ಮಾಡುವಂತಾದು ಅದನ್ನು ಹಲ್ ಮಾಡಿಕೊಡುವಂತ ಕೆಲಸವನ್ನು ಟಿಎಪಿಸಿಎಮ್‌ಎಸ್ ಗೆ ಕರ್ನಾಟಕ ಫುಡ್ ಕಾರ್ಪೊರೇಷನ್ ವಹಿಸಿಕೊಟ್ಟಿದೆ. ಅದು ಜಂಟಿ ಬೀಗದಲ್ಲಿರುವ ಒಂದು ವ್ಯವಸ್ಥೆ ಗೋಡೌನ್‌ನಲ್ಲಿ ಬತ್ತ ಮತ್ತು ಏನೇನು ಇರುತ್ತದೆ ಅದು ಜಂಟಿ ಬೀಗದಲ್ಲಿರುತ್ತದೆ. ಅದು ಕರ್ನಾಟಕ ಫುಡ್ ಕಾರ್ಪೊರೇಷನ್ ಹತ್ತಿರ ಮತ್ತು ಟಿಎಪಿಸಿಎಮ್‌ಎಸ್ ಹತ್ತಿರ ಇರುತ್ತದೆ. ಆದರೆ ಈ ಡ್ರೈಯೇಜ್ ಪ್ರಶ್ನೆ ಬಂದಕೂಡಲೇ ಅಲ್ಲಿ ಏನಾದರೂ ಡ್ರೈಯೇಜ್ ಹೆಚ್ಚು ಇದ್ದರೆ ಅದನ್ನು ಅವರು ವಹಿಸಿಕೊಳ್ಳುವುದಕ್ಕೆ ತಯಾರು ಇರುವುದಿಲ್ಲ. ಈಗ ಮೂರು ಪರ್‌ಸೆಂಟ್ ಡ್ರೈಯೇಜ್ ೧೯೭೫ನೇ ಇಸವಿಯಿಂದ ಕೊಡಬೇಕೆಂದು ಗವರ್ನ್‌ಮೆಂಟ್ ಆರ್ಡರ್ ಇಸ್ಯು ಆಗಿದೆ. ಆದರೆ ರಾ ರೈಸ್‌ಗೆ ಮಾತ್ರ ನಾವು ಕೊಡುತ್ತಿದ್ದೇನೆ. ಬಾಯಿಲ್ಡ್ ರೈಸ್‌ಗೆ ಕೊಡುವುದಿಲ್ಲ ಅಂತ ಹೇಳುತ್ತಿದ್ದೇವೆ. ಅದೇ ರೀತಿ ಒಂದೂವರೆ ಪರ್‌ಸೆಂಟ್ ಡ್ರೈಯೇಜ್ ಸಹ ಕೊಡುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಒಂದೊಂದು ಸೊಸೈಟಿಗಳಿಗೆ ಟಿಎಪಿಸಿಎಮ್‌ಎಸ್ ಗಳಿಗೆ ಒಂದೂವರೆ ಲಕ್ಷದಿಂದ ಎರಡು ಲಕ್ಷ ರೂಪಾಯಿಗಳವರೆಗೆ ಕೆಎಫ್‌ಸಿಎಸ್ ನಿಂದ ಬರಬೇಕು. ಮಾನ್ಯ ಮಂತ್ರಿಗಳು ಇದರ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಟಿಎಪಿಸಿಎಮ್‌ಎಸ್ ಪ್ರಶ್ನೆ, ಲೆವಿ ಪ್ಯಾಡಿ ಪ್ರಶ್ನೆಯಲ್ಲಿ ತಾವು ಮಾನ್ಯ ಮಂತ್ರಿಗಳು ಒಟ್ಟಿಗೆ ಚರ್ಚಿಸಿ ಲೆವಿ ಪ್ಯಾಡಿಯನ್ನು ಒಂದೇ ಕರ್ನಾಟಕ ಫುಡ್ ಕಾರ್ಪೊರೇಷನ್ ತೆಗೆದುಕೊಂಡು ಅವರೇ ಸ್ಟೋರ್ ಮಾಡಿ ಖಾಲಿ ಹಲ್ಲಿಂಗ್‌ಗೆ ಮಾತ್ರ ಈ ಒಂದು ಟಿಎಪಿಸಿಎಮ್‌ಎಸ್ ಗೆ ಕೊಡುವಂತೆ ಆಗಬೇಕು. ಅಥವಾ ಅಲ್ಲಿ ನಿಜವಾಗಿ ಸಂಗ್ರಹಿಸಿದ್ದಕ್ಕೆ ಡ್ರೈಯೇಜ್ ಏನು ಉಂಟು ಅದನ್ನು ಕೊಡುವಂಥ ಆದೇಶ ಕೊಡಬೇಕೆಂದು ತಾವು ಅವರ ಜೊತೆ ಮಾತನಾಡಿ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನೊಂದು ಮಾತು ಫರ್ಟಿಲೈಸರ್ ಡಿಸ್ಟ್ರಿಬ್ಯೂಷನ್. ಈ ಫರ್ಟಿಲೈಸರ್ ಡಿಸ್ಟ್ರಿಬ್ಯೂಷನ್ ಮುಂಚೆ ಟಿಎಪಿಸಿಎಮ್‌ಎಸ್ ಕೃಷಿ ಉತ್ಪನ್ನ ಸಂಘಗಳಿಗೆ ಏನು ಮಾಡುತ್ತಾ ಇದ್ದವು ಅಂತ ಹೇಳಿದರೆ ನೇರ ಫ್ಯಾಕ್ಟರಿಗಳಿಗೆ ಆರ್ಡರ್ ಕೊಟ್ಟು ತರಿಸಿ ಅದನ್ನು ಮಾರುತ್ತಿದ್ದರು. ಫ್ಯಾಕ್ಟರಿಗಳಿಗೆ ಆರ್ಡರ್

ಕೊಟ್ಟಾಗ ಅಲ್ಲಿ ಮೂರು ತರಹದ ರಿಬೇಟ್ ಕೊಡುತ್ತಾರೆ. ಒಂದು ಡಿಸ್ಟೆನ್ಸ್ ಮೇಲೆ ಎರಡು ಕ್ಯಾಷ್ ಪರ್ಚೇಸ್ ಮೇಲೆ ಮೂರು ಕ್ವಾಂಟಿಟಿ ಮೇಲೆ ಈ ತರಹ ಮೂರು ತರಹದಲ್ಲಿ ರಿಬೇಟ್ ಕೊಡುತ್ತಾರೆ. ಒಂದು ಟನ್‌ನಲ್ಲಿ ನೂರು ರೂಪಾಯಿವರೆಗೆ ಅವರಿಗೆ ಲಾಭ ಸಿಕ್ಕುತ್ತಿತ್ತು. ಇವೊತ್ತು ತಾವು ಒಂದು ಆರ್ಡರ್ ಹೊರಡಿಸಿ ನೇರವಾಗಿ ಪರ್ಚೇಸ್ ಮಾಡಬಾರದು ಅಂತ ಹೇಳಿದ್ದೀರಿ. ಮಾರ್ಕೆಟಿಂಗ್ ಫೆಡರೇಷನ್ ಮಾತ್ರ ಪರ್ಚೇಸ್ ಮಾಡಬೇಕು ಅಂತ ಹೇಳಿದ್ದೀರಿ ಈ ಮಾರ್ಕೆಟಿಂಗ್ ಫೆಡರೇಷನ್ ಏನು ಮಾಡಿದೆ ಅದನ್ನು ಕೃಷಿ ಉತ್ಪನ್ನ ಸಂಘಗಳಿಗೆ ಮಾತ್ರ ಕೊಡುತ್ತಿಲ್ಲ ಅವರಿಗೆ ಅಲ್ಲಿ ಬ್ರಾಂಚಸ್ ಓಪನ್ ಮಾಡಿ ಅದು ರೀಟೈಲ್ ಮಾಡುತ್ತಿದ್ದಾರೆ. ಪ್ರಾಥಮಿಕ ಕೋಆಪರೇಟೀವ್ ಸೊಸೈಟಿಗಳಿಗೆ ಕೊಡುತ್ತಿದ್ದಾರೆ. ಇದರಿಂದಾಗಿ ಕೃಷಿ ಉತ್ಪನ್ನ ಮಾರಾಟ ಸಂಘಗಳಿಗೆ ಫರ್ಟಿಲೈಸರ್ ವ್ಯಾಪಾರವಾಗುತ್ತಿಲ್ಲ. ತಾವು ನೇರವಾಗಿ ಫ್ಯಾಕ್ಟರಿಯಿಂದ ತೆಗೆದುಕೊಳ್ಳಿ ಅಂಥ ಪರವಾನಿಗೆ ಕೊಡಿ ಆಗ ಅವರ ಒಟ್ಟಿಗೆ ಕಾಂಪೀಟ್ ಮಾಡಬಹುದು. ಅಥವಾ ನೀವು ಕೃಷಿ ಉತ್ಪನ್ನ ಮಾರ್ಕೆಟಿಂಗ್ ಸೊಸೈಟಿಗಳಿಗೆ ಕೊಡಿ ತಮ್ಮ ಬ್ರಾಂಚನ್ನು ಅಲ್ಲಿ ತೆರೆಯಬೇಡಿ ಅಂತ ಆದೇಶ ಕೊಡಬೇಕು. ಇನ್ನು ಕೊನೆಯದಾಗಿ ತಮ್ಮ ಸಿಬ್ಬಂದಿಗಳ ಒಂದು ರೇಷ್ಯು ಏನು ಉಂಟು ಅದನ್ನು ಷೇರ್ ಕ್ಯಾಪಿಟಲ್ ಮೇಲೆ ತೀರ್ಮಾನಿಸದೆ, ಟೋಟಲ್ ಟರ್ನ್ ಓವರ್ ಮೇಲೆ ಸಿಬ್ಬಂದಿ ವರ್ಗದ ಒಂದು ತೀರ್ಮಾನವನ್ನು ಕೈಗೊಳ್ಳಬೇಕೆಂದು ಹೇಳಿ, ನಮ್ಮ ಮಂಗಳೂರಿನ ಸಹಕಾರ ಸಕ್ಕರೆ ಕಾರ್ಖಾನೆಗೂ ತಾವು ಆದಷ್ಟು ಬೇಗ ಡೈರೆಕ್ಟರ್ ನೇಮಕ ಮಾಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಟಿ. ಫರೀದ್.—ಅಧ್ಯಕ್ಷರೆ, ಇವೊತ್ತು ಹತ್ತು ಕೋಟಿ ರೂಪಾಯಿ ಡಿಪಾಸಿಟ್ ಇಟ್ಟು ಕೊಂಡಿರತಕ್ಕಂಥ ಬ್ಯಾಂಕ್ ಅಂದರೆ ನಮ್ಮ ಸೌತ್ ಕೆನರಾ ಬ್ಯಾಂಕ್. ಆ ಬ್ಯಾಂಕಿನಲ್ಲಿ ದುರ್ವ್ಯವಹಾರ ಅನ್‌ನೆಸೆಸರಿಯಾಗಿ ಏನಾದರೂ ಬಂದರೆ ಖಂಡಿತವಾಗಿಯೂ ಪ್ರತಿಯೊಬ್ಬರೂ ಡಿಪಾಸಿಟ್ ವಿತ್‌ಡ್ರಾ ಮಾಡಿಕೊಂಡಾರು. ಈ ವರ್ಷ ೭೨ ಪರೆಸೆಂಟ್ ರೆಕವರಿ ಮಾಡಿರತಕ್ಕ ಡಿಸಿಸಿ ಬ್ಯಾಂಕ್ ಅಂದರೆ ಇಡೀ ರಾಜ್ಯದಲ್ಲಿಯೇ ನಮ್ಮ ಸೌತ್ ಕೆನರಾ. ಆ ಬ್ಯಾಂಕಿನ ಮೇಲೆ ಆ ರೀತಿ ಮಾತನಾಡುವುದು ಸರಿಯಲ್ಲ. ನಮ್ಮ ಮಂತ್ರಿಗಳ ಹಾಸನ ಜಿಲ್ಲೆಯುಲ್ಲಿ ರೆಕವರಿ ಆಗಿರತಕ್ಕದು ೧೦ ಪರೆಸೆಂಟ್ ಮಾತ್ರ. ಆದುದರಿಂದ, ನಮ್ಮ ಡಿಸಿಸಿ ಬ್ಯಾಂಕಿನ ಮೇಲೆ ಆ ರೀತಿ ಮಾತನಾಡುವುದು ಸರಿಯಲ್ಲ.

† ಶ್ರೀ ಹೆಚ್. ಡಿ ಚೌಡಯ್ಯ (ಕುರಗೋಡು).—ಸನ್ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಈ ಬೇಡಿಕೆಗಳ ವಿಷಯದಲ್ಲಿ ವಿವರವಾಗಿ ಹೇಳುವುದಕ್ಕೆ ಬಹುಶಃ ಕಾಲಾವಕಾಶವಿಲ್ಲ; ಆ ಕಾರಣದಿಂದ ಸೂಕ್ಷ್ಮವಾಗಿ ಕೆಲವಾರು ಅಂಶಗಳನ್ನು ಸಭೆಯ ಗಮನ ತರುವುದಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ಈ ಬೇಡಿಕೆಗಳ ಬಗ್ಗೆ ವ್ಯವಸಾಯ ನಮಗೆ ಸರ್ಕಾರದವರು ವಾರ್ಷಿಕ ವರದಿಯನ್ನು ಕಳುಹಿಸಿಕೊಡುತ್ತಾರೆ. ಬಹುಶಃ ಈ ಪುಸ್ತಕ ಮತ್ತು ಇದರೊಳಗಿರತಕ್ಕ ಅಂಶಗಳು ಏನಿದೆ, ಈ ವಿಷಯಗಳು ಏನಿದೆ ಇದು ಏನು ಹೊಸದಲ್ಲ. ನಾನು ಶಾಸನ ಸಭೆಗೆ ಬಂದು ನಾಲ್ಕು ವರ್ಷವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದರು ಅದೇ ಅಂಕಿಅಂಶಗಳನ್ನು ಈ ವರ್ಷ ಕೂಡ ಕೊಟ್ಟಿದ್ದಾರೆ.

೩-೩೦ ಪಿ. ಎಂ.

ಆದರೆ ಇವತ್ತಿನ ದಿವಸ ವ್ಯವಸಾಯ ಕ್ಷೇತ್ರದಲ್ಲಿ ಪ್ರಧಾನವಾಗಿರತಕ್ಕ ರೈತನನ್ನು ಕಾಡುತ್ತಿರುವ ಸಮಸ್ಯೆಗಳ ಬಗ್ಗೆ ಒಂದೆರಡು ಅಂಶಗಳ ಬಗ್ಗೆ ಮಾತ್ರ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಈ ರಾಜ್ಯದಲ್ಲಿ ಬಹಳ ಕಾಲದಿಂದ ಏನೊಂದು ಸಂಶೋಧನೆ ನಡೆದುಕೊಂಡು ಬಂದಿದೆ ಆ ಸಂಶೋಧನೆಯ ಫಲಿತಾಂಶವನ್ನು ವಿಸ್ತರಣಾ ಕಾರ್ಯಕರ್ತರ ಮುಖಾಂತರ ರೈತರ ಜಮೀನಿಗೆ ಕೊಂಡೊಯ್ಯತಕ್ಕ ವ್ಯವಸ್ಥೆ ಏನಿದೆ ಇದು ಪರಿಪೂರ್ಣವಾಗಿ ರಾಜ್ಯದಲ್ಲಿ ನಡೆದಿದೆ ಎಂದು ಹೇಳುವುದಕ್ಕೆ ನನಗೆ ಧೈರ್ಯವಿಲ್ಲ. ಆದರೆ ತಕ್ಕಮಟ್ಟಿಗೆ ನಡೆಯುತ್ತಾ ಬಂದಿದೆ. ಈ ಫಲಿತಾಂಶವನ್ನು ಕಾರ್ಯಗತ ಮಾಡತಕ್ಕ ಸಂದರ್ಭದಲ್ಲಿ ರೈತರಿಗಿರತಕ್ಕ ಹಿಂಸೆಗಳು ಏನಿವೆ ಅದರ ಕಡೆಗೆ ಹೆಚ್ಚಿನ ಗಮನ ಕೊಡಬೇಕಾದ್ದು ಅವಶ್ಯಕವೆಂದು ನನ್ನ ಭಾವನೆ. ಉದಾಹರಣೆಗೆ ಹೇಳುವುದಾದರೆ, ರೈತ ಬೆಳೆಯತಕ್ಕ,

ಕಬ್ಬು ಆಗಲಿ, ಭತ್ತ ಆಗಲಿ, ಜೋಳ ಆಗಲಿ, ಅಥವಾ ಇನ್ನು ಯಾವುದೇ ಬೆಳೆ ಆಗಲಿ ಅದಕ್ಕೆ ಆಕರ್ಷಕವಾದ, ಆ ರೈತರ ಶ್ರಮಕ್ಕೆ ಸರಿಹೋಗತಕ್ಕ ಬೆಲೆ ಮಾರುಕಟ್ಟೆಯಲ್ಲಿ ಇಲ್ಲದಿದ್ದರೆ ನಾವು ಎಷ್ಟೇ ಸಂಶೋಧನೆ ಮಾಡಿದರೂ, ಎಕ್ಸ್‌ಟೆನ್‌ಷನ್ ಮೆಥೆಡ್ಸ್ ಅನುಸರಿಸಿದರೂ ಕೂಡ ಈ ದೇಶದಲ್ಲಿ ವ್ಯವಸಾಯೋತ್ಪನ್ನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ.

ಸ್ವಾಮಿ, ಕಳೆದ ವರ್ಷ ಅಂದರೆ ಅಂದಿನ ವ್ಯವಸಾಯ ಮಂತ್ರಿಗಳಾಗಿದ್ದ ಮಾನ್ಯ ಬಂಗಾರಪ್ಪನವರು ಈ ರಾಜ್ಯದಲ್ಲಿ ಬೆಳೆಯತಕ್ಕ ಪ್ರತಿಯೊಂದು ವ್ಯವಸಾಯೋತ್ಪನ್ನಗಳು ಏನಿವೆ ಅವಕ್ಕೆ ಒಂದು ಕನಿಷ್ಠ ಇಂತಿಷ್ಟು ಎಂದು ಬೆಲೆಯನ್ನು ನೀಡಬೇಕೆಂದು ಸರ್ಕಾರದ ವತಿಯಿಂದ ಒಂದು ಹೇಳಿಕೆಯನ್ನು ನೀಡಿದ್ದರು. ಇದರ ಬಗ್ಗೆ ಸರ್ಕಾರ, ಮಾನ್ಯ ಮುಖ್ಯ ಮಂತ್ರಿಯವರೂ ಆಸ್ತು ಎಂದು ತಮ್ಮ ನಿಲುವನ್ನು ದೃಢಪಡಿಸಿದರು. ಅವತ್ತು ಅವರು ಹೇಳಿಕೆಯನ್ನು ಕೊಟ್ಟಂಥ ಸಂದರ್ಭದಲ್ಲಿ ಆ ಬೆಲೆಗಳು ಜಾಸ್ತಿ ಎನ್ನುವ ಅಭಿಪ್ರಾಯ ಕೆಲವರ ಮನಸ್ಸಿನಲ್ಲಿ ಇತ್ತೋ ಏನೋ ? ಆದರೆ ಇವತ್ತು ಅದು ಸತ್ಯವಾಗಿ ಪರಿಣಮಿಸಿದೆ. ಉದಾಹರಣೆಗೆ ಕಳೆದ ವರ್ಷ ಭತ್ತ ಒಂದು ಕ್ವಿಂಟಾಲಿಗೆ ೧೫೦ ರೂ. ಬೆಲೆ ಗೊತ್ತು ಪಡಿಸಬೇಕೆಂದು ಹೇಳಿದ್ದರು. ಆದರೆ ಸರ್ಕಾರ ಗೊತ್ತು ಮಾಡಿದ ಲೆವಿಪ್ರೈಸ್ ಏನಿದೆ ಅದು ಒಮ್ಮುಶಃ ದಪ್ಪ ಭತ್ತಕ್ಕೆ ೧೧೨ ರೂ. ನಿಂದ ೧೧೫ ರೂ. ಮೇಲಿಲ್ಲ. ಇವತ್ತು ಓಪನ್ ಮಾರ್ಕೆಟ್‌ನಲ್ಲಿ ಒಂದು ಕ್ವಿಂಟಾಲ್‌ಗೆ ೧೫೦ ರೂ. ವರೆಗೆ ಇದೆ. ಅದೇ ರೀತಿ ಕಬ್ಬು ಈ ರಾಜ್ಯದಲ್ಲಿ ಪ್ರಧಾನವಾದಂಥ ಬೆಳೆಗಳಲ್ಲಿ ಒಂದು. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಪ್ರಧಾನವಾದ ಬೆಳೆ ಎಂದರೆ ಕಬ್ಬಿನ ಬೇಸಾಯ. ಅಲ್ಲಿ ಸುಮಾರು ೧೦೦ ಸಕ್ಕರೆ ಕಾರ್ಖಾನೆಗಳಿವೆ, ೫ ಖಂಡಸಾರಿಗಳಿವೆ, ಸಾವಿರಾರು ಕಬ್ಬಿನ ಗಾಣಗಳಿವೆ. ಸ್ವಾಮಿ, ಇವತ್ತು ನಾನು ಬಿಚ್ಚು ಮನಸ್ಸಿನಿಂದ ಹೇಳುವುದಾದರೆ ಸರ್ಕಾರ ಎಂದರೆ, ... ನಾನು ಇಲ್ಲಿ ಸರ್ಕಾರ ಎಂದು ಸಂಬೋಧನೆ ಮಾಡುತ್ತಿರುವುದು ಚುನಾಯಿತ ಮುಖ್ಯ ಮಂತ್ರಿಗಳನ್ನಾಗಲಿ, ಅಥವಾ ಮಾನ್ಯ ಮಂತ್ರಿಗಳನ್ನಾಗಲಿ ನಾನು ದೃಷ್ಟಿಯಲ್ಲಿ ಇಟ್ಟುಕೊಂಡು ಹೇಳುತ್ತಿಲ್ಲ. ಸರ್ಕಾರದ ಮೆಷಿನರಿ, ಸರ್ಕಾರೀ ಆಡಳಿತ ಯಂತ್ರ ಏನಿದೆ ಸರ್ಕಾರದ ಅಧಿಕಾರಿಗಳು ಏನಿದ್ದಾರೆ ಅವರು ಈ ರೈತರ ಪ್ರಗತಿಗೆ, ರೈತರ ಉನ್ನತಿಗೆ ಅಡ್ಡ ಬರುತ್ತಿದ್ದಾರೆ ಎಂಬುದನ್ನು ಒಂದು ದೃಷ್ಟಾಂತಕ್ಕೆ ಇಟ್ಟುಕೊಂಡು ನಾನು ಹೇಳಬೇಕಾಗಿದೆ. ಕಬ್ಬಿನ ಬೆಲೆಯನ್ನು ಗೊತ್ತುಪಡಿಸಬೇಕಾದರೆ ಕೇಂದ್ರ ಸರ್ಕಾರ ಒಂದು ಮಿನಿಮಂ ಪ್ರೈಸ್ ಗೊತ್ತು ಮಾಡುತ್ತದೆ. ತದನಂತರ ಆಯಾಯ ಸಕ್ಕರೆ ಕಾರ್ಖಾನೆಯವರು ಆಯಾಯ ಪ್ರದೇಶಗಳ ಕಬ್ಬು ಬೆಳೆಗಾರರು ಯಾರಿದ್ದಾರೆ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸುವ ರೈತರು ಯಾರಿದ್ದಾರೆ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಮಾತುಕತೆ ನಡೆಸಿ ಅವರು ಒಂದು ಒಪ್ಪಂದಕ್ಕೆ ಬರುತ್ತಾರೆ. ಆ ಒಪ್ಪಂದದ ಪ್ರಕಾರ ಒಂದು ಬೆಲೆಯನ್ನು ಗೊತ್ತು ಮಾಡುವುದು ಸಂಪ್ರದಾಯವಾಗಿ ಬಂದಿರತಕ್ಕದ್ದು. ಉದಾಹರಣೆಗೆ ಹೇಳುವುದಾದರೆ ನಮ್ಮ ಮಂಡ್ಯ ಸಕ್ಕರೆ ಕಾರ್ಖಾನೆ ವಿಚಾರದಲ್ಲಿ ಹೇಳುವುದಾದರೆ, ಇದು ಪ್ರಾರಂಭವಾಗಿ ೪೮ ವರ್ಷಗಳಾಯಿತು. ಈ ಫ್ಯಾಕ್ಟರಿಯ ಸಂಪ್ರದಾಯದಂತೆ ಮೊದಲಿನಿಂದಲೂ ಕೂಡ ಜೂನ್ ಅಥವಾ ಜುಲೈ ತಿಂಗಳಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಬೇಕಾದರೆ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಪೂರ್ವಭಾವಿಯಾಗಿ ರೈತರ ಪ್ರತಿನಿಧಿಗಳು ಮತ್ತು ಮಂಡಲಿಯವರೂ ಒಟ್ಟಿಗೆ ಕೂತು ಚರ್ಚೆಮಾಡಿ ಒಂದು ಬೆಲೆಯನ್ನು ನಿಗದಿ ಮಾಡಿದನಂತರ ಕಬ್ಬನ್ನು ಸಪ್ಲೈ ಮಾಡಿಸಿಕೊಳ್ಳುವ ಒಂದು ಪದ್ಧತಿ ಬೆಳೆದು ಬಂದಿದೆ. ಈ ವರ್ಷವೂ ಕೂಡ ಅದೇರೀತಿ ಕಳೆದ ಏಪ್ರಿಲ್ ತಿಂಗಳಲ್ಲಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಸರ್ಕಾರದ ಅಧಿಕಾರಿಗಳೂ ರೈತರ ಪ್ರತಿನಿಧಿಗಳನ್ನು ಕರೆದು ಸಮಾಲೋಚನೆ ನಡೆಸಿ ಕೊನೆಗೆ ಒಂದು ಬೆಲೆಯನ್ನು ಗೊತ್ತುಮಾಡಿದರು. ಒಂದು ಟನ್‌ಗೆ ೨೫೦ ರೂ. ಗಳನ್ನು ಅಡ್ವಾನ್ಸ್ ಆಗಿ ಕೊಡುವುದು ಎಂದು ಮಾಡಿಕೊಂಡರು, ಆದರೆ ಇತ್ತೀಚೆಗೆ ವಿಧಾನಸೌಧದಲ್ಲಿ ಒಂದು ದೊಡ್ಡ ರ್‍ಯಾಕೆಟ್ಟೇ ನಡೆದಿದೆ. ಆ ರ್‍ಯಾಕೆಟ್ ಏನೆಂದರೆ ಆಡಳಿತ ಮಂಡಲಿಯವರು ಟನ್‌ಗೆ ೨೭೫ ರೂ. ಕೂಡ ಕೊಡುತ್ತೇವೆಂದು ಹೇಳಿದರೂ ಕೂಡ ಅದು ಬೇಡವಂತೆ ೨೧೦ ರೂ. ಗಳ ಮೇಲೆ ಕೊಡಬಾರದೆಂದು ಇವರು ಹೇಳುತ್ತಿದ್ದಾರೆ. ಇದು ರೈತನ ಪ್ರಗತಿಗೆ ಸಾಧಕವೇ? ಅಥವಾ ಬಾಧಕವೇ? ಎಂಬುದನ್ನು ನಾವು ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ಯಾವ ಸಕ್ಕರೆ ಕಾರ್ಖಾನೆಯವರು ಇಷ್ಟೊಂದು ಹಣ ಕೊಡುವುದಕ್ಕೆ ನಮಗೆ ಶಕ್ತಿ ಇದೆ ಕೊಡುತ್ತೇವೆಂದರೆ ಅದಕ್ಕೆ ಈ ಸರ್ಕಾರೀ ಅಧಿಕಾರಿಗಳು ಅಡ್ಡ ಬರುತ್ತಿರುವುದು ನಿಜವಾಗಿಯೂ ಖಂಡನೀಯವಾದುದು ಎಂದು ಅತ್ಯಂತ ವಿಷಾದದಿಂದ ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಈ ಮಾತನ್ನು ನಾನು ಹೇಳುತ್ತಿದ್ದೇನೆ,

ಮಾನ್ಯ ಅಧ್ಯಕ್ಷರೇ. ಇನ್ನು ಮುಂದಾದರೂ ಕೂಡ ಅಧಿಕಾರಿಗಳು ಇಂಥ ತಮ್ಮ ವರ್ತನೆಯನ್ನು ತಿದ್ದಿಕೊಳ್ಳುವುದು ಬಹಳ ಅವಶ್ಯಕವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಸಹಕಾರ ಮಂತ್ರಿಯವರು ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಉತ್ತರವನ್ನು ಕೊಡುವವರಿದ್ದಾರೆ. ಈ ರೈತರ ಅಭಿವೃದ್ಧಿಗೆ ಯಾವ ರೀತಿ ಮಾರಕವಾದ ಕೆಲವು ಕಾನೂನುಗಳು ಅಡ್ಡ ಬರುತ್ತವೆ ಎಂದರೆ ೧೯೬೬ನೇ ಷುಗರ್ ಕಂಟ್ರೋಲ್ ಆ್ಯಕ್ಟ್ ಪ್ರಕಾರ ನಮ್ಮ ರಾಜ್ಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಯವರು ನಿಗದಿ ಮಾಡಿರತಕ್ಕ ಒಂದು ಪ್ರದೇಶ ಏನಿದೆ ಅದರಲ್ಲಿ "95% of the cane grown in the area shall be supplied to the sugar factory." ಎಂದು ಇದೆ. ಇದು ಏನು ? ನಾವು ಯಾವ ದೇಶದಲ್ಲಿದ್ದೇವೆ? ಸರ್ವಾಧಿಕಾರತ್ವ ಇರತಕ್ಕ ದೇಶದಲ್ಲಿದ್ದೇವೆಯೇ? ಅಥವಾ ಪ್ರಜಾಪ್ರಭುತ್ವ ದೇಶದಲ್ಲಿದ್ದೇವೆಯೇ? ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಬೆಳೆದಿದ್ದರಲ್ಲಿ ೯೫ ಪರ್ಸೆಂಟ್‌ನ್ನು ಷುಗರ್ ಫ್ಯಾಕ್ಟರಿಗೆ ಸಪ್ಲೈ ಮಾಡಬೇಕಂತೆ. ಹಾಗಾದರೆ ಈ ರೈತನಿಗೆ ಸ್ವಾತಂತ್ರ್ಯವೇ ಇಲ್ಲವೆ? ಈ ವಿಚಾರವನ್ನು ನಾನು ಅನೇಕ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ರೈತರ ಅಭಿವೃದ್ಧಿಗೆ ಅಡ್ಡಲಾಗಿ ಬರತಕ್ಕ ದುಷ್ಟ ಶಕ್ತಿಗಳು ಏನಿವೆ, ಆ ದುಷ್ಟ ಶಕ್ತಿಗಳ ನೀತಿ ಏನಿದೆ ಅದಕ್ಕೆ ಉದಾಹರಣೆಯಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಪಾಂಡವಪುರ ಸಕ್ಕರೆ ಕಾರ್ಖಾನೆ ಬಹಳ ಚೆನ್ನಾಗಿ ನಡೆಯುತ್ತಿದೆ. ಅವರು ೩೫೦ ರೂ. ಕೊಡುತ್ತೇವೆಂದು ಹೇಳಿದರೆ ಇವರು ಬೇಡವೆಂದು ಹೇಳುತ್ತಿದ್ದಾರೆ. ಇವರು ೩೫೦ ರೂ. ಕೊಟ್ಟರೆ ಮಂಡ್ಯದಲ್ಲಿ, ೨೭೫ ರೂ. ಕೊಟ್ಟರೆ ನಮಗೆ ಇದು ಸಾಧ್ಯವಿಲ್ಲ. ಈಗ ೨೧೦ ರೂ. ನಂತೆ ಕೊಡಿ ಆಮೇಲೆ ವರ್ಷದ ಕೊನೆಯಲ್ಲಿ ಉಳಿದುದನ್ನು ಕೊಡಿ ಎಂದು ಹೇಳುತ್ತಿದ್ದಾರೆ, ಅಂದರೆ ವರ್ಷದ ಕೊನೆಯುವರೆಗೂ ರೈತ ಕಾಯಬೇಕೆ. ಬೇರೆಯವರ ಮನೆ ಬಾಗಿಲಿಗೆ ಆತ ಹೋಗಬೇಕೆ? ಅಣೆ ಬಡ್ಡಿಯಂತೆ ದುಡ್ಡು ತಂದು ಆತನ ವ್ಯವಹಾರ, ಆತನ ಸಂಸಾರವನ್ನು ನಡೆಸಬೇಕೆ? ಆದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಬಗ್ಗೆ ಇವತ್ತು ಬೆಳಿಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಯವರ ಜೊತೆಯಲ್ಲಿ ಕೂಡ ವೈಯುಕ್ತಿಕವಾಗಿ ಮಾತನಾಡಿದ್ದೇನೆ. ಆದ್ದರಿಂದ ತಾವು ಉತ್ತರ ಕೊಡುವುದಕ್ಕೆ ಮುಂಚಿತವಾಗಿ "95% of the cane grown in the area shall be supplied to sugar factories" ಇದರ ಬಗ್ಗೆ ಹೇಳಬೇಕು. ಇನ್ನು ಎರಡನೆಯದಾಗಿ — — ಪ್ರೈಸ್ ವಿಚಾರದಲ್ಲಿ ಮತ್ತು ಕೇನ್ ಪ್ರೈಸ್ ವಿಚಾರದಲ್ಲಿ ತಾವು ಮಾನ್ಯ ಮುಖ್ಯ ಮಂತ್ರಿಯವರ ಜೊತೆಯಲ್ಲಿ ವಿಚಾರ ಮಾಡಿ, ಸಮಾಲೋಚನೆ ಮಾಡಿ ನಂತರ ಸಮಾಧಾನಕರವಾದ ಉತ್ತರವನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಸ್ವಾಮಿ, ವ್ಯವಸಾಯೋತ್ಪನ್ನವನ್ನು ಜಾಸ್ತಿ ಮಾಡಬೇಕಾದರೆ ಅತ್ಯವಶ್ಯಕವಾಗಿ ಬೇಕಾದ ಇನ್ ಪುಟ್ಸ್ ಅಂದರೆ ರಾಸಾಯನಿಕ ಗೊಬ್ಬರ, ನೀರು, ಲೇಬರ್ ಮತ್ತು ಹಣಕಾಸು ಈ ಮೂರುನಾಲ್ಕು ಅಂಶಗಳು ಸಕಾಲದಲ್ಲಿ ರೈತನಿಗೆ ಸಿಕ್ಕಿದರೆ ಬಹುಶಃ ರೈತ ಇದುವರೆಗೆ ಪಡೆದಿರತಕ್ಕ ಅನುಭವ ಏನಿದೆ, ತಾಂತ್ರಿಕ ಜ್ಞಾನ ಏನಿದೆ ಅದನ್ನು ಉಪಯೋಗಿಸಿಕೊಂಡು ವ್ಯವಸಾಯೋತ್ಪನ್ನವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಇನ್‌ಪುಟ್ಸ್ ಬೆಲೆಗಳು ತಿಂಗಳು ತಿಂಗಳಿಗೂ ಜಾಸ್ತಿಯಾಗುತ್ತಾ ಹೋಗುತ್ತಿವೆ. ಈಗ್ಗೆ ಸ್ವಲ್ಪ ಹೊತ್ತಿನ ಮುಂಚೆ ಮಾನ್ಯ ಸದಸ್ಯರಾದ ಡಿ. ಟಿ. ರಾಮುರವರು ಮಾತನಾಡುತ್ತಾ ಈ ಫರ್ಟಿಲೈಸ್ ಬೆಲೆ ಏನಿದೆ ಇದನ್ನು ಈ ಸರ್ಕಾರ ಸಬ್ಸಿಡೈಸ್ ಮಾಡಬೇಕೆಂದು ಹೇಳಿದರು. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದನ್ನು ಮಾಡುವುದು ಅವರಿಗೆ ಕಷ್ಟವಾಗಬಹುದು. ಇವತ್ತು ಕಾಸ್ಟ್ ಆಫ್ ಲೇಬರ್ ಏನಿದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಲೇಬರ್ ಡಿಪಾರ್ಟ್‌ಮೆಂಟ್ ಏನಿದೆ ಇದು ವ್ಯವಸಾಯ ಕ್ಷೇತ್ರದಲ್ಲಿ ಪ್ರತಿಯೊಂದು ಆಪರೇಷನ್‌ಗೂ ಕೂಡ ಅಂದರೆ ಉಳುವುದಕ್ಕೆ, ದನ ಕಾಯುವುದಕ್ಕೆ, ಗಾಡಿ ಹೊಡೆಯುವುದಕ್ಕೆ, ಕುರಿ ಕಾಯುವುದಕ್ಕೆ, ಅಗ್ರಿಕಲ್ಚರಲ್ ಆಪರೇಷನ್‌ಗೆ ಇಂತಿಷ್ಟೇ ಬೆಲೆ, ಇಂತಿಷ್ಟೆ ಕೂಲಿ ಎಂದು ನಿಗದಿ ಮಾಡಿದ್ದಾರೆ.

ರೈತರಿಗೆ ಈ ವತ್ತಿನದಿವಸ ಕೊಡತಕ್ಕಂಥ ಕೂಲಿ ಎರಡು ಮೂರಪಟ್ಟು ಜಾಸ್ತಿಯಾಗಿರುತ್ತದೆ. ನಮ್ಮ ಪಶುಸಂಗೋಪನಾ ಮಂತ್ರಿಗಳು ತೀವ್ರವಾಗಿ ಗಮನಿಸಬೇಕು ಈವತ್ತಿನದಿವಸ ಒಬ್ಬ ಕೂಲಿಗೆ ೧೨ ರೂಪಾಯಿಗಳನ್ನು ಕೊಡುತ್ತಿರುವುದಲ್ಲದೆ ಎರಡು ಹೊತ್ತು ಊಟವನ್ನು ಸಹ ಕೊಡುತ್ತಿದ್ದೇವೆ. ಈವತ್ತಿನ ದಿವಸ ವ್ಯವಸಾಯ ಯಾವ ಮಟ್ಟಕ್ಕೆ ಹೋಗಿದೆ ಎನ್ನುವುದನ್ನು ತಾವು ಬಹಳ ತೀವ್ರವಾಗಿ ಯೋಚನೆ ಮಾಡಬೇಕಾಗಿರುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು inputs ಬಗ್ಗೆ ಹೇಳುವುದಾದರೆ ಇದರಲ್ಲಿ ವಾಟರ್‌ರೇಟ್ ತೆಗೆದುಕೊಂಡರೆ ಸರ್ಕಾರದವರು ಏನು ನಿಗದಿಮಾಡಿ ವಸೂಲು ಮಾಡತಕ್ಕಂಥದ್ದು ಇರುತ್ತದೆ. ಅದರ ಬಗ್ಗೆ ಬೆಳಿಗ್ಗೆನೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟಿರುತ್ತೇನೆ. ಅದರ ಬಗ್ಗೆ ನಾಲ್ಕೂವರೆ ಗಂಟೆಯಲ್ಲಿ ಈವತ್ತು ಸಭೆ ಸೇರಿತ್ತು. ಅಲ್ಲೂ ಕೂಡ ಸಲಹೆಯನ್ನು ಕೊಟ್ಟಿರುತ್ತೇನೆ ಈಗ ಬೆಟರ್‌ಮೆಂಟ್ ಲೆವಿಯನ್ನು ರದ್ದುಮಾಡಿದ್ದು ಒಂದು ಸ್ವಾಗತಾರ್ಹವಾದ ವಿಚಾರ. ಇದರಿಂದ ಎಪ್ಪೋ ಕೋಟಿ ರೂಪಾಯಿಗಳಷ್ಟು ತ್ಯಾಗ ಮಾಡಿದಂತಾಗಿರುತ್ತದೆ. ಆದರೆ ಈ ರಾಜ್ಯದಲ್ಲಿ ವಾಟರ್‌ರೇಟ್ ಡಿಮ್ಯಾಂಡ್ ಸುಮಾರು ನಾಲ್ಕೂವರೇಕೋಟಿ ರೂಪಾಯಿಗಳು ಏನು ಇರುತ್ತದೆ ಅದಷ್ಟನ್ನೂ ಕೂಡ ವಸೂಲು ಮಾಡುವುದು ಬಹಳ ಕಷ್ಟ. ಸಿಬ್ಬಂದಿಯ ಕೊರತೆಯಿಂದಾಗಿ ವಾಟರ್‌ರೇಟನ್ನು ವಸೂಲು ಮಾಡುವುದು ಕಷ್ಟವಾಗಿರುತ್ತದೆ. ಮಂಡ್ಯಾ ಜಿಲ್ಲೆಯಲ್ಲಿ ವಾಟರ್‌ರೇಟನ್ನು ವಸೂಲು ಮಾಡಲು ಸಾಕಷ್ಟು ಸಿಬ್ಬಂದಿಯನ್ನು ಒದಗಿಸಿದ್ದಿರಿ. ನಮ್ಮ ರಾಜ್ಯದ ಹುಟ್ಟುವಳಿ ಒಂದು ಸಾವಿರ ಕೋಟಿ ರೂಪಾಯಿಯ ಹತ್ತಿರ ಹೋಗುತ್ತದೆ. ಈ ಒಂದುಸಾವಿರ ಕೋಟಿ ರೂಪಾಯಿಗಳಲ್ಲಿ ನಾಲ್ಕುವರೇಕೋಟಿ–It is as good as a drop in an ocean. ದಯವಿಟ್ಟು ವಾಟರ್‌ರೇಟ್ ಏನು ಇದೆ, ಇದನ್ನು ಪೂರ್ಣವಾಗಿ ಡೆವಲಪ್‌ಮೆಂಟ್ ಲೆವಿಯನ್ನು ರದ್ದುಮಾಡಿದಂತೆ, ರದ್ದುಮಾಡಿದರೆ ಬಹುಶಃ ಬಹಳವಾಗಿ ಪರಿಹಾರವನ್ನು ಕೊಟ್ಟಂತಾಗುತ್ತದೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಸ್ವಾಮಿ ಕಳೆದ ಜನವರಿ ತಿಂಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಂಡ್ಯಾದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲು ಬಂದಾಗ ಸಾರ್ವತ್ರಿಕವಾಗಿ ಬೇಡಿಕೆಯನ್ನು ಇಟ್ಟಂಥ ಸಂದರ್ಭದಲ್ಲಿ, ಮಂಡ್ಯಾದಲ್ಲಿ ವಿ.ಸಿ. ಫಾರಮ್ ಏನು ಇದೆ. ಇದು ರಾಜ್ಯದಲ್ಲಿ ಬಹಳ ದೊಡ್ಡ ಹಾಗೂ ಬಹಳ ಪ್ರಗತಿಯನ್ನು ಸಾಧಿಸಿದಂಥ ಸಂಶೋಧನಾ ಕೇಂದ್ರವಾಗಿರುತ್ತದೆ, ಅಲ್ಲಿ ಒಂದು ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲ ಸವಲತ್ತುಗಳು ಇರುತ್ತವೆ ಆದ್ದರಿಂದ ಇದಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕೆಂದು ಕೇಳಿದಾಗ ೧೯೮೧–೮೨ನೇ ಸಾಲಿಗೆ ವಿ.ಸಿ. ಫಾರಮ್‌ನಲ್ಲಿ ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಭರವಸೆಯನ್ನು ಕೊಟ್ಟಿದ್ದರು. ದಯವಿಟ್ಟು ಮಾನ್ಯ ಸಚಿವರು ಉತ್ತರ ಕೊಡುವಾಗ ಸರ್ಕಾರದವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತಾರೆ ಎನ್ನುವ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಶುಸಂಗೋಪನಾ ಸಚಿವರು ಇರತಕ್ಕಂಥ ಸಂದರ್ಭದಲ್ಲಿ ತಮಗೆ ಗೊತ್ತಿರುವಹಾಗೆ ರಾಜ್ಯದಲ್ಲಿ ವೆಟರ್‌ನರಿ ಡಿಪಾರ್ಟ್‌ಮೆಂಟ್‌ನಲ್ಲಿ ೪–೫ ನೂರು ಡಾಕ್ಟರಗಳ ಕೊರತೆ ಇದೆ ಎಂದು ಕಾಣುತ್ತದೆ. ಅಂಕಿ ಸಂಖ್ಯೆಯಲ್ಲಿ ನಾನೇನಾದರೂ ತಪ್ಪುಹೇಳಿದ್ದರೆ ಅದನ್ನು ಕರ್‌ಕ್ಟ್ ಮಾಡಿಕೊಳ್ಳಬೇಕು. ಇಷ್ಟೊಂದು ವೆಟರ್‌ನರಿ ಡಾಕ್ಟರುಗಳ ಕೊರತೆ ಇದ್ದರೂ ನಮ್ಮ ರಾಜ್ಯದಲ್ಲಿ ಏತಕ್ಕೆ ವೆಟರ್‌ನರಿ ಕಾಲೇಜುಗಳನ್ನು ಸ್ಥಾಪನೆ ಮಾಡಬಾರದೆಂದು ಕೇಳುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಸಂಬಂಧಪಟ್ಟಿರುವುದರಿಂದ ನಾನು ಈ ವಿಷಯವನ್ನು ತೀವ್ರಗತಿಯಿಂದ ಪರಿಶೀಲನೆ ಮಾಡಿ ಈ ವರ್ಷವೇ ಒಂದು ತೀರ್ಮಾನವನ್ನೂ ಕೈಗೊಂಡು ವೈದ್ಯರ ಅಭಾವವನ್ನು ಈ ಕ್ಷೇತ್ರದಲ್ಲಿ ನೀಗುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅಲ್ಲದೆ ಈ ವ್ಯವಸಾಯ ಕಾಲೇಜಿನಲ್ಲಿ ಸೀಟಿನ ಹಂಚಿಕೆಯು ಏನು ಇದೆ ಇದು ಸಮರ್ಪಕವಾಗಿ ಆಗುತ್ತಿಲ್ಲ ಶೇಕಡ ೮೦ ಜನ, ಹಳ್ಳಿಗಳಲ್ಲಿಯೇ ವಾಸಮಾಡತಕ್ಕಂಥ ಜನ, ವ್ಯವಸಾಯವೇ ಪ್ರಧಾನ್ಯವಾದ ವೃತ್ತಿಯನ್ನಾಗಿ ಅವಲಂಬಿಸಿರುವಂಥ ಜನಕ್ಕೆ ಈವತ್ತಿನದಿವಸ ಅಂಕಿಅಂಶಗಳನ್ನು ತೆಗೆದು ನೋಡಿದರೆ ಬಹುಶಃ ಅವರಿಗೆ ನ್ಯಾಯವಾಗಿ ದೊರಕಬೇಕಾಗಿರುವಂಥ ಒಂದು ಪಾಲೂ ಕೂಡ ದೊರಕುತ್ತಿಲ್ಲವೆಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಆದ್ದರಿಂದ ಈ ಒಂದು ವಿಷಯದಲ್ಲಿ ಪುನರ್ ವ್ಯವಸ್ಥೆಯನ್ನು ಮಾಡತಕ್ಕಂಥದ್ದು ಬಹಳ ಅಗತ್ಯವಿರುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಸಹಕಾರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ನಾನು ಮಾತನಾಡಬಾರದು ಎಂದು ಇದ್ದೆ. ಆದರೆ ಮಾನ್ಯ ಭಾಸ್ಕರಶೆಟ್ಟರು ತಾವು ಇನ್‌ಷಿಯೇಟ್ ಮಾಡಿ ಎಂದು ಹೇಳಿದ್ದರಿಂದ ಮಾತನಾಡಬೇಕಾಗಿರುತ್ತದೆ. ಕಳೆದ ಮೂರು ಸಾರಿಯಿಂದಲೂ ಕೂಡ ನಾನು ವಿರೋಧಪಕ್ಷದಲ್ಲಿದ್ದು ಇದನ್ನು ವಿರೋಧಿಸಿಕೊಂಡೆ ಬಂದಿರುತ್ತೇನೆ. ಈ ಕ್ಷೇತ್ರದಲ್ಲಿರತಕ್ಕಂಥ ನ್ಯೂನ್ಯತೆಗಳನ್ನು ಎತ್ತಿ ತೋರಿಸಿದ್ದೆ. ಇವುಗಳಲ್ಲಿ ಯಾವುದೇ ಆಗಲಿ ಕಾರ್ಯವಾಗಿಲ್ಲ, ಮತ್ತೆ ಅವುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ಹೇಳುತ್ತಾರೆ ಆಡಿದ್ದೇ ಆಡಿದ ಕಿಸಬಾಯಿ ದಾಸಯ್ಯ ಎಂದು

ಹೇಳಿದಹಾಗೆ ದಯವಿಟ್ಟು ಇದನ್ನು ತಿರುವಿಹಾಕಿ ನೋಡಿದರೆ ನಾನು ಹೇಳಿರತಕ್ಕಂಥ ಒಂದೆರಡು ಉತ್ತಮ ಅಂಶಗಳು ಈ ಕ್ಷೇತ್ರದ ಉನ್ನತಿಗೆ ಸಹಾಯವಾಗುತ್ತದೆಂದು ಭಾವಿಸುತ್ತೇನೆ. ಅವುಗಳನ್ನಾದರೂ ಕಾರ್ಯಗತಗೊಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಖ್ಯವಾಗಿ ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಇರಬಾರದು. ಆದರೆ ಇದರಲ್ಲಿ ಸ್ವಲ್ಪ ರಾಜಕೀಯ ಮಾಡಿಬಿಟ್ಟರು. ಇದರಿಂದ ವೈಯುಕ್ತಿಕ ವಾಗಿ ನನಗೇನೂ ವ್ಯಥೆ ಇಲ್ಲ. ವೈಯುಕ್ತಿಕವಾಗಿ ಸಹಕಾರಿ ಮಂತ್ರಿಗಳೂ ಕಾರಣರಲ್ಲವೆಂದು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ವ್ಯವಹಾರ ತಮಗೆ ಗೊತ್ತಿರುತ್ತದೆ. ಅನುಭವ ಇಲ್ಲದ ಜನ ಈ ಕ್ಷೇತ್ರದಲ್ಲಿ ಕೈಹಾಕಿದ್ದರಿಂದ ಈ ರೀತಿ ಆಯಿತು. ಈ ರೀತಿ ಆಗಬಾರದಿತ್ತು. ಯಾವುದೇ ಪಕ್ಷ ದಲ್ಲಿ ಇರಲಿ, ಆಡಳಿತ ಪಕ್ಷದಲ್ಲಿ ಇರಲಿ. ವಿರೋಧಪಕ್ಷದಲ್ಲಿಯೇ ಇರಲಿ, ಪಕ್ಷ ಮುಖ್ಯವಲ್ಲ. ಈ ಕ್ಷೇತ್ರ ವನ್ನು ಸಹಕಾರಿ ರೀತಿಯಲ್ಲಿ ನಡೆಸಿಕೊಂಡು ಬರಬೇಕಾಗಿತ್ತು. ಸಾಧಾರಣವಾಗಿ ೯೭೨ ರಿಂದ ಸುಮಾರು ೭-೮ ವರ್ಷಗಳ ಅವಧಿಯಲ್ಲಿ ೧೯ ಜಿಲ್ಲೆಗಳಲ್ಲಿ ಪ್ರಗತಿಯನ್ನು ಸಾಧಿಸಿದಂಥ ಜಿಲ್ಲೆ ಎಂದರೆ ದಕ್ಷಿಣಕನ್ನಡ ಜಿಲ್ಲೆ. ಈವತ್ತಿನದಿನ ಅಲ್ಲಿ ಒಂದು ಸಹಕಾರಿ ಸಂಘದಲ್ಲಿ ೧೭ ಲಕ್ಷ ರೂಪಾಯಿಗಳ ದುರುಪಯೋಗ ವಾಗಿದೆ ಎಂದರೆ ಬಹಳ ಆಶ್ಚರ್ಯವಾಗಿದೆ. ಯಾವುದೇ ಅಧಿಕಾರಿ ಇಂಥ ಒಂದು ಭೀಕರವಾದ ಪ್ರವೃತ್ತಿಯನ್ನು ಮಾಡಿರುತ್ತಾನೋ ಅವರು ಬಹುಶಃ ಮುಂದೆ ಬಹಳ ಉಗ್ರವಾದ ಕ್ರಮಗಳನ್ನು ಎದುರಿಸಬೇಕಾಗುತ್ತದೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬಾರದು. ಇಂಥ ಬ್ಯಾಡ್ ಡೆಬ್ಟ್ಸ್‌ಗೆ ಅವಕಾಶ ಕೊಡಬಾರದು. ಸಹಕಾರಿ ಸಂಘಗಳನ್ನು ಪುನರ್ ವಿಂಗಡಣೆ ಮಾಡಬೇಕೆಂದು ಸುಮಾರು ಹದಿಮೂರು ವರ್ಷಗಳಿಂದಲೂ ಹೇಳಿಕೊಂಡೇ ಬಂದಿರುತ್ತೇನೆ. ರಿಸರ್ವ್‌ಬ್ಯಾಂಕ್‌ನ ಉದ್ದೇಶ ಸರಿ ಯಾಗಿ ನಡೆಯುವುದಿಲ್ಲ ಆಡಿಟ್ ಮೊದಲಿನಿಂದಲೂ ಸಹಕಾರಿ ಸಂಘಗಳಲ್ಲಿ ಸರಿಯಾಗಿ ನಡೆಯುತ್ತಿಲ್ಲ ಸಿಬ್ಬಂದಿ ಕೊರತೆ, ಹಣದ ಕೊರತೆ ಇದೆ ಎಂದು ಹೇಳಿದರೆ ಯಾರೂ ಒಪ್ಪುವುದಿಲ್ಲ. ಮಾನ್ಯ ಜಕನೂರ್ ರವರೂ ಒಪ್ಪುವುದಿಲ್ಲ, ಮಾನ್ಯ ಕುಶನೂರ್‌ರವರೂ ಒಪ್ಪುವುದಿಲ್ಲ ಯಾವುದೇ ಒಂದು ಸೊಸೈಟಿಯ ಆಡಿಟ್ ಸೆಪ್ಟೆಂಬರ್ ೩೦ನೇ ತಾರೀಖಿನೊಳಗೆ ಆಗಲೇಬೇಕು, ಮೂವತ್ತನೆ ತಾರೀಖಿನೊಳಗೆ ಸಾರ್ವ ತ್ರಿಕ ಸಭೆಯನ್ನು ಕರೆಯಲೇಬೇಕು. ಸಿಬ್ಬಂದಿಯ ಕೊರತೆ ಏನೇ ಇರಲಿ, ಹಣಕಾಸಿನ ಕೊರತೆ ಏನೇ ಇರಲಿ ಆಡಿಟ್ ಕಾಲಕಾಲಕ್ಕೆ ಸರಿಯಾಗಿ ನಡೆಯುತ್ತಿದ್ದರೆ ಈ ರೀತಿಯಾದ ಹಣದ ದುರುಪಯೋಗಕ್ಕೆ ಅವಕಾಶವಾಗುತ್ತಿರಲೇ ಇಲ್ಲ. ಈ ರೀತಿಯಾದ ದುರುಪಯೋಗವಾಗುವುದನ್ನು ತಡೆಗಟ್ಟಲು ಸಾಧ್ಯ ವಾಗುತ್ತಿತ್ತೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಾಮಿನೇಷನ್ ವಿಚಾರದಲ್ಲಿ ಹೇಳುವುದಾದರೆ ಸಹಕಾರಿ ಕ್ಷೇತ್ರದಲ್ಲಿ ಇದನ್ನು ಪೀಪಲ್ಸ್ ಮೂವ್‌ಮೆಂಟ್ ಎಂದು ಹೇಳುತ್ತೇನೆ. ನಿಜವಾಗಿಯೂ ಜನತಾ ಕೂಡ ಮೂವ್‌ಮೆಂಟ್‌ನ್ನು ಕರ್ನಾಟಕದಲ್ಲಿ ತರಬೇಕಾದರೆ ಈ ನಾಮಿನೇಷನ್ ಪದ್ಧತಿಯನ್ನು ರದ್ದುಪಡಿಸಬೇಕೆಂದು ಹೇಳುತ್ತೇನೆ. ನಮ್ಮ ಯುವಕ ಮಂತ್ರಿಗಳಾದ ಶ್ರೀ ಕಸಬೆಯವರು ಏನಿದ್ದಾರೆ ಅವರಿಗೆ ನಾನು ವಂದಿಸಬೇಕಾಗಿದೆ. ನಮ್ಮ ಮಂಡ್ಯ ನಗರ ಜಿಲ್ಲಾ ಕೇಂದ್ರವಾಗಿದ್ದು, ಇದುವರೆವಿಗೂ ಕೂಡಾ ನಮ್ಮಲ್ಲಿ ಮಾರುಕಟ್ಟೆ ಇರಲಿಲ್ಲ. ಈ ಬಗ್ಗೆ ನಾವು ಶಾಸನ ಸಭೆಗೆ ಬಂದು, ಆ ಬಗ್ಗೆ ಒತ್ತಾಯ ತಂದಮೇಲೆ, ಆ ಪರಿಣಾಮವಾಗಿ ಆಕ್ವಿಸಿಷನ್ ಪ್ರೊಸೀಡಿಂಗ್ಸ್ ಏನಿತ್ತು ಅದು ಅಂತಿಮ ಘಟ್ಟಕ್ಕೆ ಬಂದು ಆ ಬಗ್ಗೆ ಕೆಲಸ ಪ್ರಾರಂಭವಾಗಬೇಕಾಗಿದೆ. ಆದಷ್ಟು ಜಾಗ್ರತೆ ಈ ಆಷಾಢ ಮುಗಿದ ಕೂಡಲೇ ಅದಕ್ಕೆ ಗುದ್ದಲಿ ಪೂಜೆ ನಡೆಸಿ ಇದನ್ನು ಒಂದು ಮಾದರಿಯನ್ನಾಗಿ ಮಾಡಬೇಕು. ಇದ ಕ್ಕಾಗಿ ಮಂಡ್ಯಾದಲ್ಲಿ ಆರಿಸಿರತಕ್ಕ ಜಾಗ ಏನಿದೆ ಅದು ಬೆಂಗಳೂರು ಹಾಗೂ ಮೈಸೂರು ಹೆದ್ದಾರಿಯ ಪಕ್ಕದಲ್ಲಿ ಇರತಕ್ಕದ್ದು. ಇದು ಒಂದು show piece ಇದ್ದ ಹಾಗೆ ಇರಬೇಕು. ಯಾರಾದರೂ ಹೊರದೇಶ ಗಳಿಂದ ಹೊರ ರಾಜ್ಯಗಳಿಂದ, ಈ ಬಗ್ಗೆ ಆಸಕ್ತಿ ಇದ್ದವರಾಗಲೀ, ಸಂಬಂಧಪಟ್ಟವರಾಗಲೀ ಬಂದು ಇದನ್ನು ನೋಡಿದಾಗ ಇದು ಒಂದು ಉತ್ತಮವಾದ ಮಾರುಕಟ್ಟೆ. ಎಂದು ಹೇಳುವಂತಿರಬೇಕು. ಉತ್ತಮ ವಾದ ಒಂದು ಮಾರುಕಟ್ಟೆಯನ್ನು ನೋಡಬೇಕೆಂದರೆ ಮಂಡ್ಯಕ್ಕೆ ಹೋಗಬೇಕೆಂಬ ಭಾವನೆ ಬರಬೇಕು. ಈ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಏನು ಸೇಲ್ಸ್ ಕಲೆಕ್ಷನ್ ಇದೆ ಇದರಲ್ಲಿ ಬಹಳ ಲೀಕೇಜ್ ಇದೆ ಎಂದು ಅನೇಕ ಸ್ನೇಹಿತರು ಹೇಳಿದ್ದಾರೆ, ಆದ್ದರಿಂದ ಇಲ್ಲಿನ ಸಿಬ್ಬಂದಿವರ್ಗವನ್ನು ಸ್ವಲ್ಪ ಬಿಗಿ ಮಾಡತಕ್ಕದ್ದು ಅವಶ್ಯಕ ಎಂದು ಹೇಳಿದರೆ ಇದರ ಬಗ್ಗೆ ಇನ್ನೂ ಹೆಚ್ಚಿನದನ್ನು ಹೇಳಬೇಕಾಗಿಲ್ಲ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆನಂದ ಕುಂದ ಹೆಗ್ಡೆ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ೧೯೮೧–೮೨ನೇ ಸಾಲಿನ ಕೃಷಿ ಸಹಕಾರ ಹಾಗೂ ಮಾರುಕಟ್ಟೆ ವಿಚಾರಗಳ ಮುಂಗಡ ಪತ್ರದ ಮೇಲೆ ನಾನು ಕೆಲವು ಮಾತುಗಳನ್ನಾಡ ಬಯಸುತ್ತೇನೆ. ಕೃಷಿಗೆ ಪ್ರಧಾನವಾದ ದೇಶ ಹಾಗೂ ಕೃಷಿಗೆ ಪ್ರಧಾನವಾದ ರಾಜ್ಯದಲ್ಲಿ ಕಡೆಗಣಿಸಲ್ಪಟ್ಟಿರುವುದು ಕೃಷಿ ಮಾತ್ರ ಎಂದು ಹೇಳಿದರೆ ತಪ್ಪಾಗಲಾರದು. ೧೦೦ಕ್ಕೆ ೧೦೦ ಜನ ಕೃಷಿಕರೇ ಇರುವ ರಾಜ್ಯ ನಮ್ಮದು. ಈಗ ಪಟ್ಟಣದಲ್ಲಿ ಇರುವ ಜನರ ಪೂರ್ವಿಕರೂ ಕೃಷಿಕರೇ ಆದಮೇಲೆ ಇವರೂ ಕೂಡಾ ಕೃಷಿಕರೇ ಎಂದು ನಾವು ಹೇಳಬೇಕಾಗುತ್ತದೆ. ಇವರಿಗೇ ಪ್ರತ್ಯೇಕತೆ ಇಲ್ಲ. ಇದಕ್ಕೆ ಕಾರಣ ಇದೆ. ಇವರೂ ಕೂಡಾ ಕೃಷಿ ಮಹಾಶಯರೇ. ಕೃಷಿಯ ಉದ್ದೇಶ ಬದಲಾವಣೆ ಆದರೆ ಆ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಯಾವುದೇ ವಿಷಯದಲ್ಲಿ ಉದ್ದೇಶ ಬದಲಾದರೂ, ಗತಿ ಬದಲಾಗುತ್ತದೆ. ಗತಿ ಬದಲಾದರೆ ಅದರ ಪರಿಣಾಮ ಬದಲಾಗುತ್ತದೆ. ಆದ್ದರಿಂದ ಉದ್ದೇಶವೇ ಚೆನ್ನಾಗಿಲ್ಲವೆಂದು ಹೇಳಬೇಕಾಗುತ್ತದೆ. ಈ ಕೃಷಿ ಕ್ಷೇತ್ರ ಒಂದು ರೀತಿಯ ಅನಾಸಕ್ತಿಯ ವಿಭಾಗ ಎಂದು ಹೇಳಬಹುದು. ಈ ಬಗ್ಗೆ ವಾದಗಳು ಎಷ್ಟೇ ಇರಲಿ, ಜನಸಂಖ್ಯೆ ಎಷ್ಟೇ ಇರಲಿ, ಈ ದೇಶದ ಒಬ್ಬ ಉಪರಾಷ್ಟ್ರಪತಿ ಒಬ್ಬ ಕೃಷಿಕನಾಗಬೇಕಾಗುತ್ತದೆ. ಹಾಗೆಯೇ ರಾಜ್ಯದಲ್ಲೂ ಕೂಡ ಈ ಖಾತೆ ಪ್ರಾಮುಖ್ಯತೆ ಪಡೆಯಬೇಕಾಗುತ್ತದೆ. ವಿದ್ಯುಚ್ಛಕ್ತಿ ಖಾತೆಯೇ ಇರಲಿ, ಪಶು ಸಂಗೋಪನಾ ಖಾತೆಯೇ ಇರಲಿ, ಮಾರುಕಟ್ಟೆ ಖಾತೆಯೇ ಇರಲಿ, ನೀರಾವರಿಯ ಖಾತೆಯೇ ಇರಲಿ, ಅಣೆಕಟ್ಟುಗಳ ವಿಚಾರವೇ ಇರಲಿ, ಇವೆಲ್ಲಾ ಕೃಷಿಗೆ ಪೂರಕವಾಗಿರುತ್ತವೆ. ಏಕೆಂದರೆ ಇವೆಲ್ಲಾ ಆಹಾರ ಪ್ರಧಾನವಾದುವಾಗಿವೆ. "ಅನ್ನದೇವರಿಗಿಂತ, ಇನ್ನೊಬ್ಬ ದೇವರಿಲ್ಲ" ಎಂದು ಸರ್ವಜ್ಞರು ಹೇಳಿದ್ದಾರೆ. ಹಾಗಿದ್ದರೂ ಕೂಡಾ ಈ ಕೃಷಿ ಖಾತೆ ಕಡೆಗಣಿಸಲ್ಪಟ್ಟಿದೆ. ಇಲ್ಲಿ ಕೃಷಿಕನ ವಿಷಯದಲ್ಲಿ, ಕೃಷಿಯ ವಿಚಾರಗಳಲ್ಲಿ ಕೆಲವು ಸಹಕಾರ ಹಾಗೂ ಸವಲತ್ತುಗಳನ್ನು ಕೊಡಲಾಗಿದೆಯೆಂದು ಹೇಳಲಾಗಿದೆ. ಇದರ ಪರಿಣಾಮ ಅಷ್ಟೊಂದು ಆಗುತ್ತದೆಂದು ನಾನು ನಂಬುವುದಿಲ್ಲ. ಸಂಪ್ರದಾಯಿಕವಾಗಿಯಾದರೂ ಇದು ಮುಂದುವರಿಯುತ್ತಾ ಹೋಗುತ್ತಿದೆ. ಜೊತೆಗೆ ಕೃಷಿಕನ ಶಕ್ತಿಯನ್ನು ಹೆಚ್ಚು ಮಾಡಿದರೆ, ಕೃಷಿ ಕ್ಷೇತ್ರದಲ್ಲಿ ಶಕ್ತಿ ಹೆಚ್ಚಾಗುತ್ತದೆ. ತನ್ಮೂಲಕ ಪರಿಣಾಮ ಅಥವಾ ಇಳುವರಿ, ಉತ್ಪಾದನೆ ಜಾಸ್ತಿಯಾಗುತ್ತದೆ. ಇಲ್ಲಿ ಕೃಷಿಕನ ಶಕ್ತಿಯನ್ನು ಹೆಚ್ಚು ಮಾಡುವ ಪ್ರಯತ್ನ ಎಲ್ಲೂ ಕೂಡಾ ಕಾಣಲಿಲ್ಲ. ಕೃಷಿಯನ್ನು ಹೆಚ್ಚು ಬೆಳೆಯಿರಿ ಎಂದು ಮಾತ್ರ ಹೇಳಿದ್ದಾರೆ. ಸಾಂಪ್ರದಾಯಿಕ ಕೃಷಿ, ಆತನ ಆಂತರಿಕ ಅವಶ್ಯಕತೆಯನ್ನು ಪೂರೈಸುವುದೇ ವಿನ: ಅವನ ಸಾಮಾಜಿಕ ಅವಶ್ಯಕತೆಗಳನ್ನು ಖಂಡಿತಾ ಪೂರೈಸಂವುದಿಲ್ಲ. ಜೊತೆಯಲ್ಲಿ ರಾಷ್ಟ್ರೀಯ ಅವಶ್ಯಕತೆಗಳೂ ಸಹಾ ಸೇರಿವೆ. ಜೊತೆಗೆ ಜನಸಂಖ್ಯೆ ವಿಷಯ ಇದೆ. ನಮ್ಮ ರಾಜ್ಯದಲ್ಲಿ ಆಂತರಿಕ ಉತ್ಪಾದನೆಯೂ ಸೀಮಿತವಾಗಿದೆ. ಕೃಷಿ ಉತ್ಪಾದನೆ ಹೆಚ್ಚಾಗಿದೆಯೆಂದು ಅಂಕಿಸಂಖ್ಯೆಗಳ ಮೂಲಕ ಅಥವಾ ಅನುಭವದಲ್ಲಿ ಕಂಡುಬರುತ್ತಿದೆ. ನೆರೆ ರಾಜ್ಯಗಳಾದ ಪಂಜಾಬು, ಆಂಧ್ರಪ್ರದೇಶ, ತಮಿಳುನಾಡು ಇವುಗಳು ಆಹಾರ ಧಾನ್ಯಗಳನ್ನು ನಿರ್ಯಾತ ಮಾಡುತ್ತಿವೆ. ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಇವೆ. ಕಾಲಕಾಲಕ್ಕೆ ಅನಿಶ್ಚಿತ ಮಳೆಯಿಂದಾಗಿ ಬರಗಾಲ ಬರುತ್ತಲೇ ಇರುತ್ತದೆ. ಇದು ಅನುಭವದಲ್ಲಿ ಮೊದಲಿನಿಂದಲೂ ಇದ್ದು ಪ್ರತ್ಯಕ್ಷವಾಗಿ ಇದು ಚಾಲ್ತಿ ವರ್ಷದಲ್ಲಿಯೂ ಮುಂದುವರಿಯುತ್ತಿದೆ. ಇವೆಲ್ಲಕ್ಕೂ ಪೂರಕವಾದ ನೀರಾವರಿ ಮಂತ್ರಿಗಳು ಇರಬೇಕೆಂದು ನಾನು ಅದಕ್ಕೇ ಹೇಳಿದ್ದು. ನೀರು ಎಂದರೆ ನಿಧಿ ಎಂದು ಹೇಳಿದ್ದಾರೆ. ನೀರಿನ ತೀರ್ಮಾನದಲ್ಲಿ ಈ ವಿಭಾಗದಲ್ಲಿ ಆಸಕ್ತಿಯಿಂದ ಕಾರ್ಯ ಆಗುತ್ತಾ ಇಲ್ಲ. ರಾಜ್ಯದಲ್ಲಿಯೇ ಆಗಲೀ ದೇಶದಲ್ಲಿಯೇ ಆಗಲೀ ಪೂರ್ಣ ಪ್ರಮಾಣದ ನೀರನ್ನು ಕೃಷಿಗೆ ಬಳಸಿದರೂ ಸಹ ಇನ್ನೂ ಶೇಕಡಾ ೫೦ ಭಾಗದಷ್ಟು ಭೂಮಿ ಒಣಭೂಮಿಯಾಗಿ ಉಳಿಯುತ್ತದೆಂದು ನಾನು ಹೇಳುತ್ತೇನೆ. ಅದರಲ್ಲೂ ಕೂಡ ಒಣ ಬೆಳೆಗಳಾದ ರಾಗಿ ಬಾಜರ, ಜೋಳ ಮುಂತಾದವನ್ನು ಬೆಳೆಯಲಾಗುತ್ತದೆ. ಅದಕ್ಕೂ ಕೂಡಾ ನೀರನ್ನು ಪೂರೈಕೆ ಮಾಡುವುದಕ್ಕೆ ಸಾಧ್ಯವಿದೆ. ಆ ಬಗ್ಗೆ ಧೈರ್ಯ, ಸಾಹಸ ನಮ್ಮ ರಾಜ್ಯಕ್ಕೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ, ನಮ್ಮ ಅರಬ್ಬೀ ಸಮುದ್ರದಲ್ಲಿ ಶೇಕಡಾ ೨½ ದಾಮಾಶಾ ಪ್ರಮಾಣದಲ್ಲಿ ಉಪ್ಪು ಇದೆ. ಹಾಗೆಯೇ ಬಂಗಾಳ ಕೊಲ್ಲಿಯಲ್ಲಿ ಶೇಕಡಾ ೩ ಪ್ರಮಾಣದಲ್ಲಿ ಉಪ್ಪು ಇದೆ. ಹಾಗೆಯೇ ಭೂಮಧ್ಯ ಕೆಂಪು ಸಮುದ್ರದಲ್ಲಿ ಶೇಕಡಾ ೨೪ ಭಾಗ ಉಪ್ಪು, ಇದ್ದರೂ ಸಹಾ ಇಸ್ರೇಲಿನವರು ಆ ನೀರನ್ನು ಶುಭ್ರ ಮಾಡಿ, ಸೋಸಿ ಕೃಷಿಗಾಗಿ ಬಳಸಿಕೊಳ್ಳುತ್ತಾ ಇದ್ದಾರೆ. ಅಲ್ಲಿ ಆತ್ಮಾಹುತಿ ಮಾಡಿಕೊಳ್ಳಲು ಹೋಗಿ ನೀರಿಗೆ ಬಿದ್ದರೂ ಸಹಾ ಅಷ್ಟೊಂದು ಅಘಾದ ಪ್ರಮಾಣದಲ್ಲಿ ಇರುವ ಉಪ್ಪಿನಿಂದಾಗಿ ಆತ ನೀರಿನಲ್ಲಿ ಮುಳುಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಕಡೆ ನೀರನ್ನು ಶುದ್ಧ ಮಾಡಿ ಕೃಷಿಗೆ ಉಪಯೋಗಿಸಿಕೊಳ್ಳುತ್ತಿರುವಾಗ. ಶೇಕಡಾ ಎರಡೂವರೆ, ಮೂರು ಉಪ್ಪಿನ ಪ್ರಮಾಣ ಇರುವ ನೀರನ್ನು ನಮ್ಮ

ರಾಜ್ಯವಾಗಲೀ, ಕೇಂದ್ರವಾಗಲೀ, ಪ್ರಯತ್ನ ಮಾಡಿ ಬಳಸಿಕೊಳ್ಳುವುದಾದರೆ ದೇಶದಲ್ಲಿನ ಅಭಾವವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಕೃಷಿ ಉತ್ಪಾದನೆಯಲ್ಲಿ ಕೃಷಿಕನಿಗೆ ಬೆಲೆ ಹೆಚ್ಚು ಸಿಗಬೇಕು ಎಂದು ಮಾನ್ಯ ಚೌಡಯ್ಯನವರು ಹೇಳಿದರು. ಏಕೆ ? ಇದಕ್ಕೆ ಪೂರಕವಾದ ಬೇರೆ ಕಾರಣ ಇದೆ. ನಾನು ಮೊದಲೇ ಹೇಳಿದ ಹಾಗೆ, ಕೃಷಿಕನ ಶಕ್ತಿ ಹೆಚ್ಚು ಆಗಬೇಕು. ಈ ಕೃಷಿಕ ಯಾವುದೇ ಒಂದು ಕೃಷಿ ಕ್ಷೇತ್ರದಲ್ಲಿ ಕೃಷಿಯನ್ನು ಸಮೃದ್ಧಿಯಿಂದ ಮಾಡಬೇಕಾದರೆ ಆತನಲ್ಲಿ ಮರು ಬಂಡವಾಳ ತೊಡಗಿಸುವ ಸಾಧ್ಯತೆ ಇರಬೇಕು. ಅವನ ಸಾಗುವಳಿಗೆ ಬೇಕಾಗುವ, ಎತ್ತನ್ನೋ, ಕೋಣ ಗಳನ್ನೋ ಅಥವಾ ಉಪಕರಣಗಳನ್ನೋ ಅಥವಾ ನೀರಾವರಿಗಾಗಿ ಆಂತರಿಕ ಜಲಸಂಪನ್ಮೂಲಗಳನ್ನು, ಗೊಬ್ಬರದ ಪ್ರಮಾಣವನ್ನು ಹೆಚ್ಚು ಮಾಡಬೇಕಾದರೆ, ಆತನಿಗೆ ಕೃಷಿಯಲ್ಲಿ ಮರು ಬಂಡವಾಳ ಬೇಕಾಗುತ್ತದೆ. ಉತ್ಪಾದನೆಯಲ್ಲಿನ ಕನಿಷ್ಟ ಮೂರನೇ ಒಂದು ಅಂಶ ಮರು ಬಂಡವಾಳ ಇಲ್ಲದ ಕೃಷಿಕ ಖಂಡಿತಾ ಉತ್ಪಾದನೆಯನ್ನು ಹೆಚ್ಚಿಸುವುದಿಲ್ಲ. ಆದುದರಿಂದಲೇ ಕೃಷಿಕನ ಶಕ್ತಿಯನ್ನು ಹೆಚ್ಚು ಮಾಡುವುದರಲ್ಲಿ ಯಾವ ಸರ್ಕಾರ ಹೆಚ್ಚು ಪ್ರೋತ್ಸಾಹಕಾರಿ ವಾತಾವರಣವನ್ನು ನಿರ್ಮಾಣ ಮಾಡುತ್ತದೆಯೋ ಅಲ್ಲಿ ಕೃಷಿಕನ ಉತ್ಪಾದನೆ ಸ್ವಾಭಾವಿಕವಾಗಿ ಹೆಚ್ಚಾಗುವುದರೊಂದಿಗೆ, ಆತ ಪೇಟೆಯುವರ ಸಮಾನತೆಯಲ್ಲಿ ಆತನ ಅವಶ್ಯಕತೆಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ನಾವು ಕೃಷಿ ಉಪಕರಣಗಳನ್ನು ಮಾತ್ರ ಅಲ್ಲದೆ ಆತನು ಬಳಸುವಂತಹ ಬಾಕಿ ಉಪಕರಣಗಳನ್ನೂ ನಾವು ಗುರ್ತಿಸಿ ಇಡಬೇಕಾಗುತ್ತದೆ. ಪಟ್ಟಣದಲ್ಲಿ ಇರುವವನು ಏನೇನು ಉಪಕರಣಗಳನ್ನು ಬಳಸುತ್ತಾನೆ, ಕೃಷಿಯಲ್ಲಿ ಇರುವವನು ಎಷ್ಟೆಷ್ಟು ಉಪಕರಣ ಗಳನ್ನು ಬಳಸುವುದಕ್ಕೆ ಸಾಧ್ಯತೆ ಇದೆ. ಇವೆಲ್ಲದರಲ್ಲಿ ವ್ಯಕ್ತಿಗತವಾದ ಪ್ರಯತ್ನ ಇದ್ದೇ ಇದೆ. ಎಲ್ಲಿ ಜನ ಜಾಗೃತಿ ಇಲ್ಲ, ಎಲ್ಲಿ ಶ್ರಮ ಇಲ್ಲ, ಎಲ್ಲಿ ಸಾಹಸ ಇಲ್ಲ, ಎಲ್ಲಿ ಧೈರ್ಯ ಇಲ್ಲ, ಅಲ್ಲಿ ಯಾವ ಉತ್ಪಾದನೆ ಕೂಡಾ ಸಾಧ್ಯವಾಗುವುದಿಲ್ಲ. ಆದರೆ ಇವೆಲ್ಲಕ್ಕಿಂತ ಹಿಂದೆ ಈ ಪೂರಕವಾದ ವಿಚಾರಗಳಿಂದ ಬಂಡವಾಳ ಬೆಳೆಯಬೇಕಾಗುತ್ತದೆ. ಉತ್ಪಾದನೆ ಆದಾಗ, ಉತ್ಪಾದನೆಯೊಂದಿಗೆ ಮಾರುಕಟ್ಟೆಯಲ್ಲಿ ಬೆಲೆಗಳೂ ಸಹಾ ಸಿಗಬೇಕು. ಈ ಬಗ್ಗೆ ಲೆವಿಯ ವಿಷಯವನ್ನು ನೋಡಬೇಕಾಗುತ್ತದೆ. ನಮಗೆ ೧೫೦ ರೂಪಾಯಿ ಗುರು ತಿಸಿರುವುದು ಕಳೆದ ವರ್ಷ. ಈ ವರ್ಷಕ್ಕೆ ಅದು ಸಾಲದು. ಮುಂದಿನ ವರ್ಷದ ಪರಿಸ್ಥಿತಿ ನಮಗೆ ಗೊತ್ತಿಲ್ಲ. ಆದರೆ ಈ ಲೆವಿಯನ್ನು ಸಂಗ್ರಹಿಸುವಾಗ, ನಮ್ಮಲ್ಲಿ ದಪ್ಪ ಬತ್ತ ಎನ್ನುವ ಕೆಂಪು ಅಕ್ಕಿಗೇ ಒಂದು ದರವನ್ನು, ರತ್ನಚೂಡಿಗೆ, ಅಕ್ಕಳ್ಳಿಗೆ ಬೇರೆ ಬೇರೆ ದರಗಳು ಇವೆ. ಈ ತಾರತಮ್ಯ ಏಕೆ ಸ್ವಾಮಿ? ನಮ್ಮಲ್ಲಿ ೧೪೦ ರಿಂದ ೧೫೦ ಇಂಚಿನವರೆಗೆ ಮಳೆ ಬರುವ ಜಾಗದಲ್ಲಿ ದಪ್ಪ ಕೆಂಪು ಬತ್ತ ಅಲ್ಲದೇ ಬೇರೆ ಬತ್ತವನ್ನು ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ. ರತ್ನಚೂಡಿಯನ್ನು ನಾವು ಬೆಳೆಯುವುದೂ ಇಲ್ಲ, ಹಾಗೂ ನಾವು ತಿನ್ನುವುದೂ ಇಲ್ಲ. ಇದರಿಂದ ನಮಗೆ ಏಕೆ ಕಡಿಮೆ ದರ ಸಿಗಬೇಕು ? ಯಾಕೆಂದರೆ, ಕಪ್ಪಿಗೂ, ಬಿಳುಪಿಗೂ ಹೊಂದಿಕೆ ಇದೆ. ಅಲ್ಲಿ ಮದುವೆ ಆಗುತ್ತದೆ. ಆದರೆ ಅದರಲ್ಲಿ ಮುಖ್ಯವಾಗಿ ಆಹಾರದಲ್ಲಿ ದರ ಮಾತ್ರ ಏಕೆ ಕಡಿಮೆ ಕೊಡಬೇಕು. ಅವರವರ ಹವಾಮಾನದಲ್ಲಿ ಬೆಳೆಯುವ ಬೆಳೆಯನ್ನು ಅವರವರೇ ಬೆಳೆಯುತ್ತಾರೆ. ರತ್ನಚೂಡಿ ಹಾಗೂ ಅಕ್ಕಳ್ಳನ್ನು ಬೇರೆ ಭಾಗಗಳಲ್ಲಿ ಬೆಳೆಯುತ್ತಾರೆ. ಉತ್ತರಕನ್ನಡ ಹಾಗೂ ದಕ್ಷಿಣ ಕನ್ನಡದಲ್ಲಿನ ೧೪೦–೧೫೦ ಇಂಚು ಮಳೆ ಆಗುವ ಕಡೆ ಯಾವುದು ಸಾಧ್ಯ ಇದೆ, ಅವನ್ನು ಮಾತ್ರ ಬೆಳೆಯಲಾಗುತ್ತದೆ. ನಮಗೆ ಮಾತ್ರ ಏಕೆ ಕಡಿಮೆ ಬೆಲೆ ಕೊಡಬೇಕು. ಎಲ್ಲಾ ಹಂತದಲ್ಲೂ ಸ್ಥೂಲವಾಗಿ ಒಲವಿನ ಮಾತನಾಡಿದರೂ ಸೂಕ್ಷ್ಮದಲ್ಲಿ ಪರಿಣಾಮಕಾರಿಯಾದ ಪಾತ್ರ ಇಲ್ಲ, ಆಸಕ್ತಿ ಇಲ್ಲ, ಬಹುಶ: ಅರ್ಥ ಆಗಿಲ್ಲವೆಂದೇ ಹೇಳಬೇಕಾಗುತ್ತದೆ. ಈ ಕಾರಣಕ್ಕೆ ನಾನು ಹೇಳಿದೆ, ಈ ಭಿನ್ನತೆ ಬರುವ ಅವಶ್ಯಕತೆ ಇಲ್ಲ ಎಂದು. ಮನುಷ್ಯ ಏನೇನು ತಿನ್ನುವುದಕ್ಕೆ ಕಲಿತಿದ್ದಾನೆ, ಅದನ್ನು ಬೆಳೆಯುವುದಕ್ಕೆ ಕಲಿತಿದ್ದಾನೆ. ಏನನ್ನು ಬೆಳೆಯುವುದಕ್ಕೆ ಕಲಿತಿದ್ದಾನೆ ಅದನ್ನು ತಿನ್ನುವುದಕ್ಕೆ ಕಲಿತಿದ್ದಾನೆ. ಹೀಗಿರುವಾಗ ಈ ಅಸಮಾನತೆ ಅವಶ್ಯಕವಿಲ್ಲವೆಂದು ನನ್ನ ಅಭಿಪ್ರಾಯ. ಜೊತೆಗೆ ಆಡಳಿತಾತ್ಮಕ ವಾಗಿ ಈ ಕ್ರಮ ಸಹಕಾರಿಯೆಂದಿದ್ದಾರೆ. ವಿಶ್ವ ಬ್ಯಾಂಕಿನ ಸಹಕಾರದ ಮೂಲಕ ೪೦ ಕೋಟಿ ರೂಪಾಯಿಗಳು ೮೨ರ ಒಳಗೆ ಮುಗಿಯಬೇಕಾದ ಯೋಜನೆಗಳಿಗೆ ಅವಶ್ಯಕತೆಗಳಿಗೆ ಹಣ ಸಿಗುತ್ತಾ ಇದೆ. ಆದರೂ ಸಾಕಷ್ಟು ಸಂಖ್ಯೆಯಲ್ಲಿ ರಾಜ್ಯದಾದ್ಯಂತ ಕಾರ್ಯಕ್ರಮದ ವಿಭಾಗಾಧಿಕಾರಿಗಳು ಇಲ್ಲ. ಇದು ಆದಷ್ಟು ಬೇಗ ಸಿಗಬೇಕು. ಈ ಕೃಷಿಯಲ್ಲಿ ಬಹಳ ಸ್ವಾರಸ್ಯ ಎಂದರೆ, ಸರ್ಕಾರಿ ಹಾಗೂ ಬ್ಯಾಂಕಿಂಗ್ ಕ್ಷೇತ್ರ ಎಂಬ ಎರಡು ವಿಭಾಗಗಳನ್ನು ದೃಷ್ಟಿಸಲಾಗಿದೆ. ಸಿಂಡಿಕೇಟ್ ಬ್ಯಾಂಕಿನವರು ಕೃಷಿ ಚಿಕಿತ್ಸಾಲಯ ಎಂಬ ವಿಭಾಗವನ್ನು ಕಳೆದ ೯ ವರ್ಷಗಳ ಹಿಂದೆ ಎಂದರೆ ೧೯೭೨ರಲ್ಲಿ ಪ್ರಾರಂಭಿಸಿದರು. ಈ ಚಿಕಿತ್ಸಾಲಯ ಏಕೆಂದರೆ, ಬೆಟ್ಟ ಸ್ಥಳ, ಬಯಲು ಸ್ಥಳ, ಜಲದ ಸ್ಥಳ, ಒಣ ಸ್ಥಳ, ಜಲದ ಅಭಾವ ಸ್ಥಳ ಇವೆಲ್ಲದರಲ್ಲೂ ಪ್ರತ್ಯೇಕ ಪ್ರತ್ಯೇಕವಾದ ಬೆಳೆಗಳು ಇವೆ. ಇವು ಸ್ವಾಭಾವಿಕವಾಗಿ ಇರತಕ್ಕವುಗಳು.

೪-೦೦ ಪಿ. ಎಂ.

ಏನು ಬೆಳೆಯನ್ನು ಬೆಳೆಯುತ್ತಾರೆ, ರೈತನಿಗೆ ಪೂರಕವಾಗಿ ಬೇಸಿಕ್ ಆಗಿ ಆಯಾ ಬೆಳೆಗೆ ಪೋಷಕ ಸಹಾಯಕ ಅಧಿಕಾರಿ ಅದನ್ನು ಗುರುತಿಸಿ, ಅವನಿಗೆ ಕೃಷಿ ಚಿಕಿತ್ಸಾಲಯದಲ್ಲಿ ಸಹಾಯ ಸಲಹೆ ಸವಲತ್ತುಗಳನ್ನು ಕೊಡುವುದರ ಮೂಲಕ ಉತ್ಪಾದನೆಗೆ ಪ್ರೋತ್ಸಾಹವಾಗಿ, ಬಹಳ ಯಶಸ್ವಿಯಾಗಿದೆ. ಏಕೆಂದರೆ ಈ ಕೃಷಿಯಲ್ಲಿ ಅಂದರೆ ಕೃಷಿಕನಿಗೆ ಅಜಾಗೃತಿಕ ಕೃಷಿಕರು ಎಚ್ಚರವಿಲ್ಲದ ಕೃಷಿಕರು ಜಾಸ್ತಿ ಇದ್ದಾರೆ. ವಿದ್ಯಾವಂತರ ಸಂಖ್ಯೆ ಈಗ ಬೆಳೆಯುತ್ತಿದೆ ಅದು ಬಹಳ ಕಡಿಮೆ. ಬಹಳ ಸ್ವಾರಸ್ಯ ಇದೆ, ನಮ್ಮ ಸರ್ಕಾರದಲ್ಲೂ ಬಹುಶಃ ನಮ್ಮ ಕುಟುಂಬ ಕ್ಷೇತ್ರದಲ್ಲಿ ಒಂದು ಸಮಾನತೆ ಇದೆ. ಒಬ್ಬ ತಂದೆ ನಾಲ್ಕು ಜನ ಮಕ್ಕಳು ಇದ್ದರೆ ಕಲಿಯಬಹುದಾದವರೆಲ್ಲರನ್ನು ಶಾಲಾಕಾಲೇಜುಗಳಲ್ಲಿ ಕಲಿಸುತ್ತಾನೆ. ಬಹುಶಃ ಸವಕಲು ನಾಣ್ಯದ ರೀತಿಯಲ್ಲಿ ನಮ್ಮ ಕೃಷಿಕ್ಷೇತ್ರ ಇರುವುದು. ಆದ್ದರಿಂದ ಜಾಗೃತಗೊಳಿಸುವ ಅವಶ್ಯಕತೆ ಇದೆ ಎಂದು ನಾನು ಹೇಳಿದ್ದು. ಗ್ರಾಮಸೇವಕರುಗಳು ರೈತರ ಸಂಪರ್ಕವನ್ನು ಇಟ್ಟುಕೊಂಡು ರೈತ ಕಾಲ ಕಾಲಕ್ಕೆ ಸಕಾಲಕ್ಕೆ ಬೆಳೆಯುವ ವಿಧಾನ, ಉತ್ಪಾದನೆಯನ್ನು ಪಡೆಯುವ ವಿಧಾನಗಳನ್ನು ಹೇಳುವುದರ ಮೂಲಕ ಸರ್ಕಾರಿ ಆಡಳಿತಾತ್ಮಕವಾಗಿ ಸಿಗುವ, ಅಂದರೆ ಮನಿಯಾರ್ಡರ್ ಮಾಡುವುದಕ್ಕಾಗುವುದಿಲ್ಲ. ಪೂರಕಪಾತ್ರವನ್ನು ನಿರ್ವಹಿಸುವುದರೊಂದಿಗೆ ಉತ್ಪಾದನೆಗೆ ಪೋಷಕ, ಪ್ರೋತ್ಸಾಹಕ ಉತ್ಪಾದನೆಗೆ ಪೂರಕ ವಿಚಾರಗಳನ್ನು ನಾವು ಸರ್ಕಾರದಿಂದ ಅಪೇಕ್ಷೆ ಪಡುವುದು, ಅಥವಾ ಪಡೆಯಲಿಕ್ಕೆ ಇರುವ ವಿಧಾನ. ಏಕೆಂದರೆ ಅಜಾಗೃತಿಕ ರೈತನಿದ್ದಾರೆ. ಅವರ ಜೊತೆಗೆ ನಿಂತ ಅವಕಾಶವು ಅಷ್ಟಕಷ್ಟಕ್ಕೆ ಇದೆ. ಈ ನೆಲೆಯಲ್ಲಿ ಹೆಚ್ಚು ಉತ್ಪಾದನೆಗೆ ಪೋಷಕಪಾತ್ರವನ್ನು ನಿರ್ವಹಿಸಿಕೊಂಡು ಸಿಂಡಿಕೇಟ್ ಬ್ಯಾಂಕ್‌ನವರು ಖಾಸಗೀ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಂದುವರಿಸಿಕೊಂಡು ಬಂದಿರುವುದು ಒಳ್ಳೆಯ ಉದ್ದೇಶ ಇದೆ. ಅದು ಐಚ್ಛಿಕ ವಿಭಾಗ. ರಾಷ್ಟ್ರೀಯ ಚಿಂತನೆಯಲ್ಲಿ ತಾವು ಒಂದು ಅಂಗ, ಒಳ್ಳೆಯದು ಕೆಟ್ಟದ್ದು ಉತ್ಪಾದನೆ ಮಾಡುವುದರಲ್ಲಿ ತಮ್ಮದೂ ಪಾತ್ರ, ಹೊಣೆಗಾರಿಕೆ ಮತ್ತು ಕರ್ತವ್ಯ ಇದೆ. ಅದೇ ಸರ್ಕಾರಿ ಕ್ಷೇತ್ರ ನಿಷ್ಕ್ರಿಯ. ಈ ಕಾರಣಕ್ಕಾಗಿ ಹೇಳಿದೆ, ಅದನ್ನು ಗುರುತಿಸಬೇಕಾಗುತ್ತದೆ. ಈ ಕೃಷಿಕ್ಷೇತ್ರದಲ್ಲಿ ರೈತನಿಗೆ ಮಿಶ್ರ ಬೆಳೆಗಳು ಬಹಳ ಅವಶ್ಯ. ಏಕೆಂದರೆ ಮಾರುಕಟ್ಟೆಗಳ ಏರಿಳಿತಗಳು ಉತ್ಪಾದನೆಗನುಸಾರವಾಗಿ ಇರುತ್ತವೆ. ಇದರಲ್ಲಿ ಯಾರದ್ದೂ ಹಸ್ತಕ್ಷೇಪ ಇರುವುದಿಲ್ಲ. ಆದರೆ ಯಾವುದೇ ಮಾರುಕಟ್ಟೆಗಳ ಏರಿಳಿತಗಳು ಉತ್ಪಾದನೆಯಿಂದ ಆರ್ಥಿಕ ಪರಿಸ್ಥಿತಿಗೆ ಅನಿಷ್ಟ ಪರಿಣಾಮ ಉಂಟುಮಾಡಬಾಗದು. ಮಿಶ್ರ ಬೆಳೆ ಬೆಳೆಯುವ ಭೂಮಿ ಇದೆ. ಹಾಗೆ ಬೆಳೆಯುವಾಗ ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಯಲ್ಲಿ ಪ್ರಾಮುಖ್ಯತೆ ಇದೆ. ಕೋಳಿಸಾಕಾಣಿಯಿಂದ ಏನು ಇದೆ? ಯಾವುದೇ ಜಿಲ್ಲೆಯಲ್ಲಿ ೭೫ ಸಾವಿರದಿಂದ ೧ಲಕ್ಷ ರೂಪಾಯಿ ಹೆಚ್ಚು ಉತ್ಪಾದನೆ ಮಾಡಬೇಕೆಂದು, ಕೋಳಿಸಾಕಾಣಿ ಮಾಡಿದರೆ, ಅದಕ್ಕೆ ತನ್ನದೇ ಆದ ಬಜಾರು ಅಥವಾ ಮಾರುಕಟ್ಟೆಯನ್ನು ಉಳಿಸಿಕೊಳ್ಳುವುದಕ್ಕೆ, ಸಮತೋಲನೆಯನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಹೊಸ ವ್ಯವಸ್ಥೆ ಇದೆ ಅಂದರೆ ಯಾಂತ್ರಿಕ ವಿಧಾನದಲ್ಲಿ ಮೊಟ್ಟೆಗಳನ್ನು ಸಂಗ್ರಹಿಸಿ ಪ್ರತಿ ದಿವಸಕ್ಕೆ ೨ ರಿಂದ ೩ ಲಕ್ಷ ಮೊಟ್ಟೆಗಳನ್ನು ಯಂತ್ರಗಳ ಯತ್ನದಿಂದ ಉತ್ಪಾದಿಸಿ ಅದನ್ನು ನಿರ್ಯಾತ ಮಾಡುವ ಸಾಧ್ಯತೆ ಇದೆ. ಈ ಮೂಲಕ ಪ್ರತಿ ಜಿಲ್ಲೆಯಲ್ಲೂ ೫ ರಿಂದ ೮ ಲಕ್ಷ ಮೊಟ್ಟೆಗಳನ್ನು ಉತ್ಪಾದನೆ ಮಾಡಿ ಮಾರುಕಟ್ಟೆಯ ಏರಿಳಿತ ಮತ್ತು ಸಮತೋಲನೆಯನ್ನು ತಡೆಯಲಿಕ್ಕೆ ಆಗುತ್ತದೆ. ಈ ನೆಲೆಯಲ್ಲಿ ಆಂಧ್ರದಲ್ಲಿ, ಮಹಾರಾಷ್ಟ್ರದ ಬೊಂಬಾಯಿಯಲ್ಲಿ ಕೇರಳ ತ್ರಿವೇಂಡ್ರಂನಲ್ಲಿ ಇಂತಹ ಯಂತ್ರಗಳನ್ನು ಇಟ್ಟು ಇವತ್ತು ಆ ರಾಜ್ಯಗಳಲ್ಲಿ ಪ್ರತಿ ದಿವಸಕ್ಕೆ ೧೦ ರಿಂದ ೧೫ ಲಕ್ಷ ಮೊಟ್ಟೆಗಳನ್ನು ಉತ್ಪಾದಿಸಿ ಜನಗಳ ಬೇಡಿಕೆಯನ್ನು ಪೂರೈಸುತ್ತಿದೆ, ಮೊಟ್ಟೆಗಳನ್ನು ನಿರ್ಯಾತ ಮಾಡುತ್ತಿದ್ದಾರೆ. ಹಾಗೆ ಮಾಡಿದಾಗ ಕೃಷಿಕನಿಗೆ ರಾಸಾಯನಿಕ ಗೊಬ್ಬರಕ್ಕಿಂತಲೂ ಒಳ್ಳೆಯ ಗೊಬ್ಬರ ಈ ಕೋಳಿ ಗೊಬ್ಬರ. ಹೈನುಗಾರಿಕೆ ಸಾಕಾಣಿಯಿಂದ ಏನಾಗುತ್ತದೆಂದು ತಾವು ಕೇಳಬಹುದು. ಜಾನುವಾರುಗಳು ಅಂದರೆ ಎಮ್ಮೆ, ದನ, ಕರುಗಳು ಇರುತ್ತವೆಯಲ್ಲ ಅವುಗಳಿಂದ ಸಾಕಾಗುವುದಿಲ್ಲವೇ ಎಂದು ಕೇಳಬಹುದು. ಇವತ್ತು ನಿಜವಾಗಿಯೂ ಜಾನುವಾರುಗಳನ್ನು ಸಾಕುವ ಸಂಖ್ಯೆಗಿಂತ ಅವು ತಿನ್ನುವ ಆಹಾರದಲ್ಲಿ ಸತ್ವ ಇರುತ್ತದೆಯೋ, ಗೊಬ್ಬರದ ಪ್ರಮಾಣ ಇರುತ್ತದೆಯೋ ? ಈ ಹೈನುಗಾರಿಕೆ ಕೇಂದ್ರದಲ್ಲಿ ಹಾಲು ಉತ್ಪಾದನೆಯಲ್ಲಿ ಅದರ ಸಮತೋಲನೆಯನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಮಾಣಬದ್ಧವಾದ ಆಹಾರಪದಾರ್ಥಗಳನ್ನು ಕೊಡುವುದರಿಂದ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಅದರ ಸಮತೋಲನೆಯನೆಯನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಾವು ಆ ಪ್ರಮಾಣದಲ್ಲಿಯೇ ಗೊಬ್ಬರವನ್ನು ಪಡೆಯುತ್ತೇವೆ. ಈ ಗೊಬ್ಬರ ಸಾರವತ್ತು ಮತ್ತು ಶಕ್ತಿಯುತ

ವಾದದ್ದು ಇರುತ್ತದೆ. ಅದು ಭೂಮಿಗೆ ಬೀಳುವಾಗ ಬೆಳೆಯುವ ಉತ್ಪಾದನೆ ಸ್ವಾಭಾವಿಕವಾಗಿ ಹೆಚ್ಚುತ್ತದೆ. ನಮ್ಮ ಎಲ್ಲಾ ಭೂಮಿಗಳು ಸೌಭಾಗ್ಯಕ್ಕೆ ನಮ್ಮದೇಶಕ್ಕೆ ಇಡೀ ಪ್ರಪಂಚದಲ್ಲಿ ಇಲ್ಲದಷ್ಟು ಪ್ರಕಾಶಯುತವಾದ ನಿಸರ್ಗದ ಬೆಂಬಲ ಯಾವ ರಕ್ಷಣೆಯೂ ಇರುವುದಿಲ್ಲ. ಹಾಗೆ ಕೃಷಿ ಉತ್ಪಾದನೆಯಲ್ಲಿ ಬಹಳ ಬೆಂಬಲವಾದ ಹವಾಮಾನ ಇರುವುದನ್ನು ಅರ್ಥಮಾಡಿಕೊಂಡಿದ್ದು ಬಹಳ ಕಡಿಮೆ. ಹಾಗೆ ಹೈನುಗಾರಿಕೆ ಯೋಜನೆಯಿಂದ ಹೆಚ್ಚು ಹಾಲು ಉತ್ಪಾದನೆಗೆ ಪೂರಕವಾದ ದೀರ್ಘಾವಧಿ ಸಾಲಗಳನ್ನು ಕೊಡಬೇಕಾಗುತ್ತದೆ. ಮೂರು ವರ್ಷಗಳ ಐದು ವರ್ಷಗಳ ವಟ್ಟಿಗೆ ಸಾಲವನ್ನು ಕೊಟ್ಟರೆ ಸಾಕಾಗುವುದಿಲ್ಲ. ಮಧ್ಯಾಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ೧೦ ವರ್ಷಗಳವರೆಗೆ ಕೊಡಬೇಕಾಗುತ್ತದೆ. ಒಂದು ಎಮ್ಮೆ ಅಥವಾ ಹಸುವನ್ನು ೪ ಸಾವಿರ ಅಥವಾ ೫ ಸಾವಿರ ಕೊಟ್ಟು ತಂದರೆ ಅದು ೬ ತಿಂಗಳು ಅಥವಾ ೧೨ ತಿಂಗಳುಗಳವರೆಗೆ ಹಾಲು ಕರೆಯುವುದಿಲ್ಲ ಸಾಲ ತೀರುವುದಿಲ್ಲ. ಕಾಲು ಅಂಶ ಸಾಲ ತೀರುವುದಿಲ್ಲ. ಸಮತೋಲನ ಆಹಾರವನ್ನು ಕೊಟ್ಟು ಅದು ಮೂರು ನಾಲ್ಕು ಕರುಗಳನ್ನು ಹಾಕಿದಾಗ ಆ ಕರುಗಳ ಬೆಲೆಯ ಮೂಲಕ ಅಭಿವೃದ್ಧಿಯನ್ನು ಸಾಧಿಸಿದಾಗ, ಒಟ್ಟು ಲಾಭದಾಯಕವಾಗುತ್ತದೆ. ಸಾಲ ಕೊಟ್ಟು ಹಿಂದೆಯೇ ವಸೂಲಿ ಮಾಡಿದರೆ ಅದು ಸಾಲಗಾರನಿಗೆ ಲಾಭವಾಗುವುದಿಲ್ಲ ಇದು ಗೊತ್ತಿರುವವರಿಗೆ ಗೊತ್ತು, ನನಗೆ ಗೊತ್ತಿಲ್ಲ. ಆದುದರಿಂದ ದೀರ್ಘಾವಧಿ ಸಾಲದ ಯೋಜನೆ ಅವಶ್ಯ ಇದೆ, ಕಡಿಮೆ ಬಡ್ಡಿ ದರದಲ್ಲಿ ಕೊಡುವುದು ಒಳ್ಳೆಯದು. ಈ ಹಿನ್ನೆಲೆಯಲ್ಲಿ ಕೃಷಿಕನಿಗೆ ಪ್ರೋತ್ಸಾಹ ಕೊಟ್ಟರೆ, ಆತನ ಉತ್ಪಾದನೆಯನ್ನು ಖಂಡಿತಾ ಹೆಚ್ಚಿಸಲಿಕ್ಕೆ ಸಾಧ್ಯವಿದೆ.

ಇನ್ನು ಗೋಬರ್‌ಗ್ಯಾಸ್ ಪ್ಲಾಂಟ್ ಇದು ಕೃಷಿಗೆ ಪೂರಕವಾದುದು, ಬದಲಿ ವ್ಯವಸ್ಥೆ. ಗಾಳಿ ಬೆಳಕರಿ ಇರುವಹಾಗೆ, ಅಡಿಗೆ ಮಾಡಲಿಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ. ಬಹುಶಃ ೮ ಸಾವಿರ ಅಥವಾ ೬ ಸಾವಿರ ಗೋಬರ್‌ಗ್ಯಾಸ್ ಪ್ಲಾಂಟ್‌ಗಳನ್ನು ಕಳೆದ ವರ್ಷ ಕೊಟ್ಟಹಾಗೆ ಕಾಣುತ್ತದೆ. ಈಗ ಹೆಬ್ಬಾಳದಲ್ಲಿ ಹೊಸ ಪ್ರಯೋಗ ಮಾಡುವುದರ ಮೂಲಕ ಮೊದಲನೆಯಕ್ಕಿಂತ ಅರ್ಧದಲ್ಲಿ ಆಗುವ ಒಂದು ಹೊಸ ಪ್ರಯೋಗ ಬಂದಿದೆ. ಆದರೆ, ಕಳೆದವರ್ಷ ಮುಂಗಡಪತ್ರದಲ್ಲಿ ಕೇಳಿ ಆಯಿತು, ಈ ವರ್ಷ ಮುಂಗಡ ಪತ್ರದಲ್ಲಿ ಕೇಳಿ ಆಯಿತು, ಸಹಾಯಧನ ಕೊಟ್ಟು ನೊಂದಾಯಿಸಲ್ಪಡುತ್ತಿರುವುದು ಗೋಬರ್ ಗ್ಯಾಸನ್ನು ಹೆಚ್ಚು ಪಡೆಯುವ ಸಾಧ್ಯತೆ ಇದೆ. ಹಾಗೆಯೇ ಕೃಷಿಗೆ ಪೂರಕದೊಂದಿಗೆ ಮಾರ್ಕೆಟ್ಟಿನ ವಿಚಾರದಲ್ಲಿ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇರೆಯವರು ಈ ಬಗ್ಗೆ ಮಾತನಾಡಿದ್ದಾರೆ ಶೇಕಡ ೨ ರಷ್ಟು ತೆರಿಗೆಯನ್ನು ಮಾರ್ಕೆಟ್‌ಗಳಲ್ಲಿ ವಸೂಲ್ಮಾಡುತ್ತಿದ್ದಾರೆ. ಪ್ರತಿ ಜಿಲ್ಲೆಯಲ್ಲೂ ಆಯಾಯ ಮಾರ್ಕೆಟ್‌ಗಳಲ್ಲಿ ವಸೂಲ್ಮಾಡಿ ಗ್ರಾಮಾಂತರ ಕೃಷಿಕರಿಗೆ ಪೂರಕವಾಗಿ ರಸ್ತೆಗಳನ್ನು ಮಾಡಲು ಲೋಕೋಪಯೋಗಿ ಇಲಾಖೆಯ ಮುಖಾಂತರ ಬಳಸಿಕೊಳ್ಳಬೇಕೆಂದು ಇದೆ. ಅದು ಎಲ್ಲಿ ಇದೆ ಎಂಬುದು ಗೊತ್ತಿಲ್ಲ. ಪಡೆಯುವಾಗಿನ ಚುರುಕು, ಕೊಡುವಾಗ ಆ ಚುರುಕುತನ ಕಾಣಿಸುವುದಿಲ್ಲ

ಇನ್ನು ಮಾರ್ಕೆಟ್ಟಿನ ಬಗ್ಗೆ ಹೇಳುವುದಾದರೆ, ಸಾಕಷ್ಟು ವ್ಯವಸ್ಥಿತ ದಕ್ಷ ಆಡಳಿತ ಕಾಣುವುದಿಲ್ಲ. ಇದು ವ್ಯಾಪಕವಾಗಿ ಕೃಷಿಕ್ಷೇತ್ರದಿಂದ ಬೆಳೆಯಬೇಕೇ ಹೊರತು ಬೇರೆ ಅಲ್ಲ. ಇನ್ನು ಸಹಕಾರಕ್ಷೇತ್ರದ ಬಗ್ಗೆ ಮಾನ್ಯ ಸದಸ್ಯರು ಬೇಕಾದಷ್ಟು ಹೇಳಿದ್ದಾರೆ. ನಾನು ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಲ್ಲ, ಬೇರೆ ಜಿಲ್ಲೆಗೆ ಹೇಳುವುದಲ್ಲ ನನ್ನ ಒಂದು ಅನುಭವನ್ನು ಹೇಳುತ್ತಿದ್ದೇನೆ. ಇದಕ್ಕೆ ಸಂಯುಕ್ತವಾಗಿ ಈ ದೇಶದಲ್ಲಿ ಈ ರಾಜ್ಯದಲ್ಲಿ ಜವಾಬ್ದಾರಿ ಸ್ಥಳಗಳೆಲ್ಲಾ ಬುದ್ಧಿವಂತರ ವಿಹಾರಸ್ಥಳಗಳು ಎಂದು ನನ್ನ ಅಭಿಪ್ರಾಯ. ಕೆಲವರು ಕಾಯಿಂದೆಯಲ್ಲಿ ಸಿಕ್ಕುತ್ತಾರೆ, ಕೆಲವರು ಸಿಗುವುದಿಲ್ಲ. ಮಾನ್ಯ ಉಪಾಧ್ಯಕ್ಷರು ಸಮಯವಿಲ್ಲ ಅಂದರೆ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ ಅದರಲ್ಲಿ ನನ್ನ ಮತಭೇದವೇನು ಇಲ್ಲ. ಆದುದರಿಂದ ವ್ಯಕ್ತಿ ಪ್ರಜ್ಞೆ, ಜಾಗೃತಿ, ಪ್ರಾಮಾಣಿಕತನವನ್ನು ಎಲ್ಲಾ ಹಂತಗಳಲ್ಲೂ ಉಳಿಸಿಕೊಂಡು ಅಥವಾ ಉಳಿಸಿಕೊಳ್ಳುವುದರ ಮೂಲಕ ಯಾವುದೇ ಸಂಸ್ಥೆ ಅಥವಾ ಸರ್ಕಾರ ಉಳಿಯಬೇಕಾಗುತ್ತದೆ. ಪ್ರಜ್ಞಾಪೂರ್ವಕವಾಗಿ ಕೆಲಸಮಾಡದಿದ್ದರೆ ಪರಿಣಾಮ ಹೇಗೆ ಆಗುತ್ತದೆ ? ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI C. M. ARUMUGHAM (K.G.F.).—Mr. Deputy Speaker Sir, I thank you very much for having given me a chance to speak on these Demands. Last year I had a unique opportunity of discussing on the Agro Industries Corporation. In fact when I raised so many

points with regard to the irrelevant and illegal transactions, resulting in amassing wealth by certain individuals, the Government came forward with the reply that they would refer the matter to COD. I would like to know from the Hon. Minister who is in-charge of this Agriculture portfolio and what action he has taken on the charges leveled against this Agro Industries Corporation? I am just looking into this Annual Report of this Agriculture Department. They have not mentioned anything about the Agro Industries Corporation. You kindly see page 47 of this Annual Report. This Corpotion is itself running in loss every year. They may say that there are lot of experts in it and some expert Ministers also one there; but nevertheless every year this Agro Industries Corporation is inevled in heavy losses. What are the reasons? What are all the actions the Government has taken? If a peop is responsible for los of one paise, action is taken against him but this Corporation is losing lakhs and crores of rupees every year. Why the Government has not taken any action against these wonderful officers, the Board of Directors? If they are not competent and qualified, well, you remove or replace them. How is is everything is going under loss? If a small unit, a small consumers' cooperative society incurs small loss of say, or Rs. 10/- or Rs. Rs. 100/- or Rs. 500/-, you give show-cause-notice, saying why action should not be taken to supersede? What about this Corporation? In fact, I did not know that I will get a chance to speak because I was not in Bangalore for some time, Therefore, I did not give much attention to this. But nevertheless this is not a subject which require a lot of study. Everybody knows that this Corporation is incurring losses. You can see how these bulldozers, tractors, well-boring rigs are working. What is expenditure? What is the loss? Why there is no improvement? You can see that from 1974 onwards, this Agro Industries Corporation is incurring losses on the bulldozers. Income for 1973-74 is Rs. 116.48 lakhs and the expenditure is Rs. 145.65 lakhs. The loss is Rs. 29.16 lakhs From that year onwards, you can see, right up to this day, it is running under loss. They have not given that imformation in the Annual Report. They have also not said No, no, we are running under profit. In 1977-78 the loss is about Rs. 82 lakhs. And about tractors, it is the same thing. I wonder how the Government is permitting this Corporation to be like this. It is a vital affair. They have a lot of money. They go to Delhi by Air; stay in a big hotel and in conducting the affair of the corporation there is recontinuous loss.

About the well-boring rigs, I would like to say that they are not functioning. We have got scarcity places wherein they are not

working. It has not been overhauled. It requires some replacements. The Technical organisation of the Agro Industries Corporation is under loss even when the well-boring rigs are needed urgently.

SRI MALLUR ANANDA RAO.—They are out-dated also.

SRI C.M. ARUMUGHAM.—When once they fit it, it will immediately collapse Again they will erect it and then immediatley it will collapse That is called Agro Industries Corporation. It is known for that.

ಶ್ರೀ ಮಳ್ಳೂರು ಆನಂದರಾವ್.—ಇವರು ಸಪ್ಲೈ ಮಾಡಿದಂಥಾ ರಿಗ್ಸ್ ಏನು ಇದೆ ಅದರಲ್ಲಿ ಒಂದು ಬಾವಿ ತೋಡಬೇಕಾದರೆ ೧೦೦-೧೫೦ ಅಡಿ ಆಳ ಮಾಡಬೇಕಾದರೆ ಸುಮಾರು ಒಂದು ತಿಂಗಳ ಮೇಲೆ ಹಿಡಿಯುತ್ತದೆ. ಕಾರಣ ಒಂದು ದಿವಸಕ್ಕೆ ಆ ರಿಗ್ಸ್‌ನಲ್ಲಿ ೩-೪ ಅಡಿಗಿಂತ ಜಾಸ್ತಿ ಕೊರೆಯುವುದಕ್ಕಾಗುವುದಿಲ್ಲ. ಮೇಲಾಗಿ ಅದರ ಕೆಪಾಸಿಟಿ ಇರುವುದೂ ಸಹ ಅಷ್ಟೆ. ಅದೇ ಪ್ರೈವೇಟ್ ರಿಗ್ಸ್ ಏನು ಇದೆ ಅವರು ಬೆಳಗ್ಗೆ ಬಂದು ಸಾಯಂಕಾಲದವರೆಗೆ ಎಷ್ಟು ಆಳ ಬೇಕೋ ಅಷ್ಟು ಆಳ ಮಾಡಿಬಿಟ್ಟು, ತೋಡಿಬಿಟ್ಟು ಹೊರಟು ಹೋಗುತ್ತಾರೆ. ಹೀಗಿರುವಾಗ ಇವರು ಸಪ್ಲೈ ಮಾಡಿದಂಥಾ ಬೋರ್ ರಿಗ್ಸ್ ಯಾವ ರೀತಿಯಲ್ಲಿ ಕೆಲಸ ಮಾಡಬಹುದು ನೋಡಿ. ಅಲ್ಲದೆ ಇವರು ಹಾಕಿರುವ ರಿಗ್ಸ್ ಅದು ಸರಿಯಾಗಿ ವರ್ಕ್ ಮಾಡದೇನೋ ಅಥವಾ ಈ ಮಿಷನ್ ಅನ್ನು ಯಾರು ಸೆಟ್ ಮಾಡುತ್ತಾರೋ ಅವರಿಗೆ ಅದರ ಕೆಲಸ ಸರಿಯಾಗಿ ಬಾರದೇನೋ ಒಟ್ಟಿನಲ್ಲಿ ಇವರು ಹಾಕಿದಂಥಾ ರಿಗ್ಸ್‌ನಿಂದ ಆ ಬಾವಿಯನ್ನು ಆಳ ಮಾಡುವುದಕ್ಕಾಗುವುದಿಲ್ಲ. ಇನ್ನಷ್ಟು ಕುಸಿದು ಬಿದ್ದು ಹೋಗುತ್ತದೆ.

SRI V. MASIYAPPA.—The slow rigs can be put in the open wells. As you say, it will do 3 or 4 feet a day. There are also fast rigs, even in the minor irrigation department and PHE department and this Agro Industries Corporation These fast rigs will do 6″ dia metre bore. If they start in the morning, by evening or by next morning, they would have completed the bore and they would have given the water. They have gone 120 or 140 feet also.

SRI C. M. ARUMUGHAM.—Mr. Mallur Ananda Rao confines only to Rajajinagar and Bangalore City or the School or the Corporation work only.

MR. DEPUTY SPEAKER.—Mr. Arumugham, time is up, do not yield.

SRI C. M. ARUMUGHAM.—No. I will not yield. It is a very important demand. You permit us. Let the Ministers reply tomorrow. You don't think I am touching minor points. I am only touching points about Agriculture Department proper and Cooperative Societies and Regulated Markets. Agro Industries Corparation is the preamble for me.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಆರ್ಮುಗಂರವರು ನನ್ನನ್ನು ರಾಜಾಜಿನಗರದಲ್ಲಿದ್ದಾರೆ, ಇವರಿಗೇನು ಈ ವೃತ್ತಿ ಗೊತ್ತು ಅಂತ ಹೇಳಿದ್ದಾರೆ. ಅವರಿಗೆ ಹೇಳಬೇಕಾದರೆ ನಾನು ರಾಜಾಜಿನಗರದಲ್ಲಿ ವಾಸವಾಗಿದ್ದರೂ ಕೂಡ ವೃತ್ತಿಯಲ್ಲಿ ವ್ಯವಸಾಯಗಾರನಾಗಿದ್ದೇನೆ. ಅಲ್ಲದೇ ಈ ಸಭೆಗೆ ನಾನು ಬರುವಾಗ ನೇರವಾಗಿಯೇ ನನ್ನ ತೋಟದಿಂದ ಇಲ್ಲಿಗೆ ಬಂದಿದ್ದೇನೆ. ನನಗೆ ೧೬ ಎಕರೆ ಜಮೀನು ಇದೆ.

ನಾನು ಸ್ವತಃ ವ್ಯವಸಾಯ ಮಾಡುತ್ತಿದ್ದೇನೆ. ನಮ್ಮ ಕಾರ್ಪೊರೇಷನ್ ರಿಗ್ಸ್ ಅನ್ನು ನಾನು ತೆಗೆದುಕೊಂಡು ಹೋಗಿದ್ದೆ. ಆದರಿಂದ ತೋಡಲಿಕ್ಕೆ ಆಗಲಿಲ್ಲಾ. ಈ ಮಾತನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ತಮಗೆ ಹೇಳಬೇಕಾದರೆ ನಾನು ವೃತ್ತಿಯಲ್ಲಿ ವ್ಯವಸಾಯಗಾರ ಅಲ್ಲದೆ ನಾನು ಪೌಲ್ಟ್ರಿಯನ್ನೂ ಕೂಡ ಇಟ್ಟಿದ್ದೇನೆ ಅನ್ನುವ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

SRI C. M. ARUMUGHAM.—You are an expert agriculturist and you are also an expert on these educational institutions particularly private.

Sir, I was saying that the Agro Industries Corporation is running under lose. I want to bring to the notice of the Hon. Minister and the House that because the rates were uneconomical, the Board wanted to revise the rates for tractors, for buldozers, for borewell rigs, But what happened then is a funny thing. Who was the Minister for Agriculture in 1973-74? His private secretary wrote to the Chairman in the Government letter head,

It reads as follows :—

"To

The Chairman,

Karnataka Agro Industries Corporation Ltd.,
Hebbal, Bangalore-4.

Sir,

SUB: Revision of hire charges of machinery on adhoc basis.

REF: No.......dated 19th April, 74 addressed to the Minister.

In inviting your kind attention to the above letter on the above-subject cited I am desired by the Minister for Agriculture and Animal Husbandry to inform you that the hire charges may not be increased from 1st May, 74 as proposed by you."

The Private Secretary of a Minister writes to the Chairman of Agro Industries Corporation not to revise the rates. If the Agro Industries Corporation has revised the rates in 1974 they will not be losing. Whether this Private Secretary was authorised by the Minister?

SRI H. C. SRIKANTAIAH.—It is desired by the Minister.

SRI C.M. ARUMUGHAM.—Whether he is authorised by the Minister Oral instruction by a Minister cannot be taken as order. Even, as a matter of fact, a letter from the Minister is not an order; much less the letter from the Private Secretary. One Private Secretary may come to-day, to-morrow he may go away. If the Minister does not like a Private Secretary, his style of functioning, the very next day he will be sent out. That is what I want to bring to your notice. That is how it happens. Why do you want to involve yourself allowing a Private Secretary to write to the Chairma.? However, Sir, this organisation, from the beginning whatever may be the reason, was not competent, incompetent organistion involing the Government in heavy loss. You must take action against those officers and last year I have asked about this I do not know whether they have referred to it to COD. If they have not referred, it must be referred to COD for inquiry. That is my submission Any loss should not be permitted. It is running under loss, every year and they have invested money to the tune, I think, of several lakhs. In the report also they have mentioned it. These are the organisations in which they have deposited huge amount *i.e.*, Karnataka State Corn Products Ltd., Mangalore Chemical Fertilisers Ltd., Gadag Co-operative Textiles Ltd., Where is the need for the Agro Industries Corporation to invest in Gadag? What is the reason? Who was interested in it? Sombody is interested. Therefore, you have put Government money to the Gadag Textile Mills. You have invested in the Davanagare Sugar Co., Mysore Tobacco Company and the Karnataka Compost Development Corporation Ltd Sir. what happens, they have invested lakhs of rupees in these corporations? So far most of the corporations have not declared the dividends The Agro Industries Corporation has taken heavy loan from the banks and is paying heavy interest. But, in turn they have not declared any dividend and not paying any interest. Why not you look into the affairs of these companies? It appears that, last year or year before, the Mysore Tobacco Company have incurred heavy loss. They say they were not able to appoint qualified persons.

SRI H. C. SRIKANATAIAH.—It is closed.

SRI C.M. ARUMUGHAM.—Closed! Now, for sometime one Chairman was there. He has appointed 700 persons; mostly from the Mysore District and Hunsur Taluk. He appointed them on temporary basis, as casual labourers. After sometime they have regularised it.

Even to-day, as per the report, they have given some figures and finally they say that as per the tentative profit and loss account for the perion a loss of Rs. 49 lakhs, is incurred.

SRI H. C. SRIKANTAIAH.—It has considerably come down.

SRI C. M. ARMUGHAM.—I do not know. It is not there in the performance. They have made some departments like Planning Department, Agro Supplies Department, Agro Engineering Services Department, Planning Development Department, Finances and Accounts Department, Administration Department, Agro Fruits Unit. Why all these thing unnecessarily? There is no planning at all. You create the Planning Department. But, people are sitting idle. I do not know what to say. When I say, they dislike. I am not against some officers. If they are competent, then it is alright. Otherwise, you remove them. So, here is the Department created unnecessarily. Agro Industries Corporaion is not useful to the State not useful to the people and not useful to the poor farmers. This Department is exclusively meant for the farmers. But, they are not helping them. Why not the Agriculture Department take it? Do not make it a corporation. You are providing some appointments, some promotions, some big cars and allow him to travel to Delhi. Please see that if this Department is not useful, then it would be better to wind up, iestead of maintaining a white elephant.

Then, I come to the Regulated Market and Muzrai One thing, I like the Minister because, regarding Muzrai he is doing well. Muzrai means, going to temple. When he came to Bangarpet, he was only in search of temples and when he visited Bangarpet sometime back he visited almost all temples in Bangarpet. Like that, he visits so many temples. But what about the regulated market? He is not regulating it. Reglated Market is established in order to help the agriculturists The farmers' products should find a market. There should be no exploitation on it. Now, what has happened? Levy has been imposed over this Market Committee for the services. You are entitled for the services. But, when you do not render any service you are not entitled to collect any levy. For instance, in Kolar District, there is no Regulated Market in Mulbagal, ther is no Regulated Market in Kolar, there is Regulated in Srinivaspur. I do not know about other taluks in Kolar District.

4.30 p.m.

But there is one a Bangarpet. When there is no regulted market and when you are not rendering any service to the farmers, you are collecting this levy. Even the markets have not been constructed, not even the excavation work is going on, but you still collect. It if unreasonable. Please stop it. God will not leave you. God will direct you. When you sleep God will come in your dream and will tell that what Arumugham told is correct. Therefore, you should

collect levy from places whers there is no regulated market. God has come to such a position in our contry there is a minister forhim. There can be a minister for human beings. There is a minister tor piggery, a minister for cattle and a minister for sheep. If it is for office or administrative work it is alright. But there is a minister for God. God is tolerating Mr. Kasbe. So, therefore, please stop collecting levy.

Then the levy in all other parts of country is very little. For instance, Taminadu, Kerala, Andhra Pradesh, Maharashtra, U.P., Rajasthan, Gujarat, Bihar and in West Bengal it is very little. It is only 50 paise or one rupee. But here it is only 2%.

SRI BHIMANNA KHANDRE.—In Maharashtra and Andra Pradesh it is 30 Paise and 50 Paise.

SRI C. M. ARUMUGHAM.—It is less. That is what I said, You are there in a better position, you are in the party. Raise the issue and help the farmers.

SRI C. M. ARUMUGHAM.—If it is 1% and single point, the income will be more. What is happening today is, they charge 2% at multi-points. Wherever it is carried from Shimoga it passes through half a dozen Regulated Markets and at every market the farmer has to pay levy. It is harassment and it increases the prices. The consumer is affected. If the Government is for money only, you collect it. If the Government is for the people, then don't collect. Some officer may collect, because he is not bothered about the common man and the farmer. He is only for the rich. Therefore, please help the farmers and the consumers. It covers the entire State, that means three crore and sixty lakhs people will be benefitted if it is reduced. I appeal to the Hon'ble Minister for Muzrai and Regulated Markets to kindly help the farmer and the consumer. Don't think, because somebody has gone to the World Bank and brought money on loan for construction of buildings that you must levy. It should not be. If you are rendering service you take something. There is a proposal that rural roads must be improved. But no action has been taken so far. Rural Bridges should be improved for easy communication from village to the city and village to the taluk. That is also not being done. Therefore, there should be a master plan for the regulated markets to improve rural roads and also render service. Also the levy should be reduced from 2% to 1%.

SRI BHIMANNA KHANDRE.—In Bhalki market when there was a levy of 50 Paise at that time the income was Rs. 5 lakhs. When it was enhanced to Rs. 2 the income reduced to Rs. 3 lakhs.

SRI C.M. ARUMUGHAM.—It is a good thing. Sir, the hon. Minister will agree with me, when there was 2% levy in Bangarpet, the income per year was Rs. 3 lakhs. When they went to High Court and brought a stay now the market is imposing only 1%. Now their income is Rs. 6 lakhs. The man who was working there has been transferred. You have got a wonderful transfer system. I don't care if you transfer this or that man. But the man who was working hard, helped the farmers and consumers and who collected Rs. 6 lakhs has been transferred. I don't know what were the considerations for you to transfer him. But anyway please see that the levy is reduced to 1%, so that revenue will be more. If the levy is less there won't be harassment the farmers, merchants and the consumers.

SRI H. C. SRIKANTAIAH.—But they come to the Market if there is a loss......

(SRI K. BHASKAR NAIDU in the Chair)

SRI C.M. ARUMUGHAM.—When it was 2% the income was Rs. 3 lakhs. When it has become 1%, the income is Rs. 6 lakhs. What is the reason ? The hon'ble Minister may kindly check up.

Sir, so far as the Agriculture Department is concerned, it is a very important department concerning the farmers of our State. The Majority—75 to 80%—of people of our State are farmers; they are living in rural areas. Therefore, the Agriculture Department must help these farmers; help this rural population. Last time there was some farmers' agitation. They came from far off places to Bangalore. The Government announced certain concessions. How far these concessions have helped these farmers, please give a statemert. What are the fields in which the farmers have been helped, either in pumpsets, either in recovery of loans or waiving of loans and then the other demand like supply of inputs, good variety of seeds, how it has been supplied and whether the production has increased. If not, why it has not increased ? Farmers are differntiated like big farmers, middle-class farmers or small and marginal farmers. Sir, when scarcity is there all of them suffer. Whether it is big or small or marginal farmer, everybody suffers. Therefore, the Government must extend support and help all these farmers instead of isolating the big farmer or isolating the small or marginal farmer. When there is no water everybody suffers. If they want to recover the loans, they say, if he is marginal farmer, don't recover. If he is a big farmer whether he has got money when there is no rain, is the point. Allow him some time, postpone recovery of loans for some time and then recover. The Hon'ble Co-operation Minister must note down and

help these farmers, who are in distress and aggrieved on account of failure of rains. Therefore, they require immediate support. Sir, so far I could see, our Government or the Department whatever you may call it, they have not come forward as to what would be its plans to improve the farmers' condition. I was going through a magazine; of course I could not bring it today. The magazine speaks about, every year how many tractors should be produced by the Agriculture Department. I was asking sombody whether the Agriculture Department has got any workshop or any factory or industry to produce tractors. They said, no. They go in for some private concerns. They have allowed bullocks for all these years. How long it will continue? Can't the Agriculture Department have a scientific method where one man can cultivate about 100 acres, or 50 acres or 25 acres as in the case of America where four persons are employed in agriculture. If not, how they are going to improve agricultral production. That is all I want. The same old system continues, the same ministry continues, and the same old officers giving their opinion continue. There is no change at all. We want a change.

SRI H. C. SRIKANTAIAH.—What change the hon. member desires? Does he want a change in the Ministry?

SRI C. M. ARMUGHAM.—Sir, whoever becomes the Chief Minister Sri. Srikantaiah will be there. He is inevitable. Without Sri Srikantaiah it is imposible to run the Government. So, he should be there. I do not want a change.

Coming to the point, Sir, what I am suggesting is that the Agricultural Department should go in for mechanised methods in agriculture. Some time back I had been to University of Agricultural Sciences and there I saw a big cow. When I asked them that how much milk that cow gives, I was told that it gives 20 litres. I feel that, Sir, if such cows are given to the villagers it will be very helpful to them. Sir, now we are at experimental stage and it should not stop there. We must see that the research message reach the farming community. This message must reach them through the officers of the Agricultural Department. Therefore, I suggest to the Government to appoint only technical persons as the Director, Commissioner and secretary to the Agriculture because those who are at the helm of affairs must know everything about agriculture. Here, I would like to mention that one of the officers of the Government recently visited Colombo to study how to remove the poverty. Why a Government officer should go to a foreign country to study the poverty? Where was the need to visit Colombo to study that matter? The basic structure of India itself is poverty. You can study everything here. If

we go to slums we will know what is poverty. There is no need to visit a foreign country for this. So, I suggest that you must have persons who have a desire to go to rural places for studying the problems of the agriculturists. Sir, there are farmers who have got 4 acres of land and some have got 3 acres of land and some others have got only 1 acre of land. These poor farmers are not in a position to plough their lands individually. They possess lands without any produce from it. Therefore, a collective farming must be there. It is there in Russia. You have visited Itali, France, West Germany, Switzerland etc. but not Russia. You can see there how the collective farming is working. It is a good method. In India our poor farmers do not have such a facility. Hence I urge upon the Government to think of collective farming so that the poor farmers could concentrate more in agriculture. If Government initiates collective farming others will also follow. So, the Department of Agriculture should take a lead in this behalf. I do not know how far they will initiate the programme. Sir, here I would like to quote an instance. Recently, one of our officers was sent to Japan for studying sheep breeding. After his return from the study tour he wes posted as Private Secretary to Governor instead of posting him in the Department. Again, one of the officers of Department of Industries was sent to Australia, I think, some two years back to suggest ways and means for industrial development in our State. In that case also after his return he was posted to some other Department. Sir, what I am suggesting is, Government must make use of their training by posting them to the posts in which they were working and not somewhere else. Not it is not happening. Some officers will get training in some subjects and after their training they will be posted somewhere else. You must have men who have interest to serve the farmers especially at rural places. Sir, today the farmers are put to lot of hardship. This is because they are not at all getting profit out of their produce. Nobody has bothered about them. This is not so in the case of other sectors. They will produce some products and sell them at a considerable margin of profit. They have no problem, whereas our agriculturists are not getting minimum profit by selling their produce. They are at a loss because their produces are controlled by the Government. Farmers in this country work hard from morning 8 a.m. to night 9 p.m. They do not have any working hours. The farmer, his children, his wife-everyone will be on the field. Inspite of working hard they will not get reasonable price and therefore they are becoming labourers. Today, in our country our farmers are agitating for better price and lot of agitations are going on. Why this agitation? It is because the farmers are in need of financial aid and other facilities from the

Government side. I hope. Sri. Kushnoor who was a Minister agrees that farmers need heed help from Government side. As a Minister he has visited half a dozen countries in the world and he knows the problems of the farmers. Therefore, I request the Government to implement its promises made during last year and urge upon the Government to direct the Co-operative Societies to stop recoveries. I am not asking you to waive off. I am only asking you to postpone it.

SRI H. C. SRIKANTAIAH.—Do you say it should be made applicable even to big farmers ?

SRI C.M. ARMUGHAM.—Yes. Big farmers or small farmers does not make any difference. When there is no rain all the farmers, whether he is big or small suffers a lot. So, I request the Government to consider the problems of our farmers on humanitarian grounds and thus help that community. Thank you.

† ಜಿ. ರಾಜುಗೌಡ (ಹನೂರು) — ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಋಣ ಪರಿಹಾರ ಕಾಯಿದೆ ಜಾರಿಗೆ ಬಂದಮೇಲೆ ಈ ಸಹಕಾರ ಸಂಘಗಳ ಪಾತ್ರ ಬಹಳ ಮುಖ್ಯ ಎಂದು ನನಗನ್ನಿಸುತ್ತದೆ. ಆದಕಾರಣ ಈ ಸಹಕಾರ ಸಂಘಗಳು ಚೆನ್ನಾಗಿ ಬೆಳೆಯಬೇಕಾಗಿದೆ. ನಮಗೆ ಕೊಟ್ಟಿರುವ ವಾರ್ಷಿಕ ವರದಿಯಲ್ಲಿ ಒಟ್ಟು ೨೧೫೧೨ ವಿವಿಧ ಸಹಕಾರ ಸಂಘಗಳ ಮೂಲಕ ೭೮.೩೩ ಲಕ್ಷ ಸದಸ್ಯರನ್ನು ನೋಂದಾಯಿಸಲಾಗಿದೆ ಎಂದು ಹೇಳಿದ್ದಾರೆ. ಈ ಸದಸ್ಯರ ಒಂದು ಬೇಡಿಕೆಗಳನ್ನು ಸಮರ್ಪಕವಾಗಿ ಹಾಗೂ ಪರಿಪೂರ್ಣವಾಗಿ ಈಡೇರಿಸತಕ್ಕಂಥ ಒಂದು ಕೆಲಸ ನಡೆದಿದೆಯೋ ಎಂದು ನೋಡಿದಾಗ, ಇಲ್ಲ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಮೊದಲನೆಯ ಕಾರಣವೇನೆಂದರೆ, ಪಂಚಾಯಿತಿ ಮಟ್ಟದಲ್ಲಿದ್ದ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬ ಕಾರಣದಿಂದ ೩-೪ ಸೊಸೈಟಿಗಳನ್ನು ಒಟ್ಟುಗೂಡಿಸಿ ಒಂದು ಸಹಕಾರ ಸಂಘ ಮಾಡಿದ್ದು. ಇದರಿಂದ ಪ್ರತಿ ಪಂಚಾಯಿತಿ ಮಟ್ಟದಲ್ಲಿ ಯಾವ ರೀತಿ ಕೆಲಸ ಮಾಡಬೇಕೋ ಆ ರೀತಿ ಮಾಡಲು ಈ ಸಹಕಾರ ಸಂಘಗಳಿಗೆ ಸಾಧ್ಯವಾಗುತ್ತಿಲ್ಲ. ಮಾನ್ಯ ಸಹಕಾರ ಸಚಿವರು ಒಂದು ಕಡೆ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಹೇಳಿದರು. ಏನೆಂದರೆ, ಈ ಒಂದು ಪಂಚಾಯಿತಿ ಮಟ್ಟದಲ್ಲಿ ಸಹಕಾರ ಸಂಘಗಳನ್ನು ತರಬೇಕು, ರಿಸರ್ವ್ ಬ್ಯಾಂಕ್ ನಾರ್ಮ್ಸ್ ಪ್ರಕಾರ ಹೊಸ ವ್ಯವಸ್ಥೆ ಏನು ಮಾಡಿದ್ದೇವೋ ಅದನ್ನು ಹೋಗಲಾಡಿಸಬೇಕು, ಗ್ರಾಮ ಮಟ್ಟದಲ್ಲಿ ಸಹಕಾರ ಸಂಘಗಳನ್ನು ಮಾಡಬೇಕು ಎಂದು ತಿಳಿಸಿದರು. ಇದನ್ನು ಬಹಳಷ್ಟು ಬೇಗ ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾಗಿತ್ತು, ಇನ್ನೂ ಏಕೆ ತರಲಿಲ್ಲ ಎಂದು ಕೇಳುತ್ತೇನೆ. ಈ ವಿಷಯದಲ್ಲಿ ಆಲೋಚನೆ ಮಾಡಿ ಭಾಷಣ ಮಾಡಿದ್ದು ಮುಖ್ಯವಲ್ಲ ಈ ಒಂದು ಕಾರ್ಯವನ್ನು ಕಾರ್ಯತಃ ಜಾರಿಗೆ ತರಬೇಕು ಎಂದು ಮಾನ್ಯ ಸಚಿವರಲ್ಲಿ ಮೊಟ್ಟಮೊದಲನೆಯದಾಗಿ ಕೇಳಿಕೊಂಡು ಮತ್ತೊಂದು ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಶೇಕಡ ೯೦ರಷ್ಟು ಸಹಕಾರ ವ್ಯಾಪ್ತಿಗೆ ಒಳಪಡಿಸಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದರು. ಉದಾಹರಣೆಗೆ ಹೇಳುವುದಾದರೆ. ತಾವು ಈ ಸಾಲವನ್ನು ಮನ್ನಾ ಮಾಡಬೇಕು ಎಂದು ಹೇಳಿ ಸಣ್ಣ ರೈತರಿಂದ ಅರ್ಜಿಗಳನ್ನು ಕರೆದಿರಿ. ಐದೂವರೆ ಲಕ್ಷ ಜನರಿಂದ ಅರ್ಜಿಗಳು ಬಂತು. ಸುಮಾರು ೩೬.೯೬ ಕೋಟಿ ರೂಪಾಯಿ ಸಾಲ ಅದರಲ್ಲಿ ಅಡಕವಾಗಿತ್ತು. ಅರ್ಜಿಗಳನ್ನು ತರಿಸಿಕೊಂಡಿರಿ, ವಿಮರ್ಶೆ ಮಾಡಿದಿರಿ, ಸಾಲ ಮನ್ನಾ ಮಾಡಲಿಕ್ಕೆ ಆಗಲಿಲ್ಲ. ಈ ರಾಜ್ಯದಲ್ಲಿ ಒಂದು ಹೆಕ್ಟೇರ್‌ಗಿಂತ ಕಡಿಮೆ ಹಿಡುವಳಿದಾರರ ಸಂಖ್ಯೆ ೧೦ ೮ ಲಕ್ಷ. ಹೊಂದಿರತಕ್ಕ ಜಮೀನು ವಿಸ್ತೀರ್ಣ ೫.೧ ಲಕ್ಷ ಹೆಕ್ಟೇರ್. ಒಂದರಿಂದ ಎರಡು ಹೆಕ್ಟೇರ್ ಒಳಗೆ ಇರತಕ್ಕಂಥವರು ೮.೧ ಲಕ್ಷ. ಜಮೀನು ೧೨.೨ ಲಕ್ಷ ಹೆಕ್ಟೇರ್. ಸಣ್ಣ ಅತಿ ಸಣ್ಣ ರೈತರು ೧೯.೨ ಲಕ್ಷ ಜನರಿದ್ದಾರೆ ಎಂದು ನಮಗೆ ಅರ್ಥವಾಗುತ್ತದೆ. ಕೇವಲ ಐದೂವರೆ ಲಕ್ಷ ಜನ ಮಾತ್ರ ಸಾಲದ ವಿನಾಯಿತಿ ಕೊಡಿ ಅಂದರೆ ಯಾರು ಸಹಕಾರ ಸಂಘಗಳಲ್ಲಿ ಸಾಲ ಪಡೆದಿದ್ದಾರೋ ಅವರು ಅರ್ಜಿ ಸಲ್ಲಿಸಿದರೇ ? ಐದೂವರೆ ಲಕ್ಷ ಜನರನ್ನು ನೋಂದಾಯಿಸಿಕೊಂಡು ಸಹಕಾರ ಸಂಘಗಳ ಮೂಲಕ ಸಾಲವನ್ನು ವಿತರಣೆ ಮಾಡಿದರೆ ೧೧ ಲಕ್ಷ ಜನ

ರನ್ನು ಏಕೆ ನೇಮಿಸಿಕೊಂಡಿಲ್ಲ, ಸಾಲ ವಿತರಣೆ ಮಾಡಲಿಲ್ಲ ? ಶೇಕಡ ೯೦ರಷ್ಟು ಮಾತ್ರ ಸದಸ್ಯರು ಇದ್ದಾರೆ ಎಂದು ಹೇಳಿದಿರಿ. ರಾಜ್ಯದಲ್ಲಿ ೩೫ ಲಕ್ಷ ಕುಟುಂಬಗಳಿವೆ. ಸಣ್ಣ ಮತ್ತು ಅತಿ ಸಣ್ಣ ರೈತರು ಎಷ್ಟಿದ್ದಾರೆ ಅವರೆಲ್ಲರನ್ನೂ ಏಕೆ ನೋಂದಾಯಿಸಿಕೊಂಡಿಲ್ಲ ? ಐದೂವರೆ ಲಕ್ಷ ಜನ ಮಾತ್ರ ಅರ್ಜಿ ಹಾಕಿಕೊಂಡಿದ್ದಾರೆ. ಉಳಿದವರು ಉಳಿದುಕೊಂಡಿದ್ದಾರೆ. ನಾಲ್ಕಾರು ಪಂಚಾಯಿತಿಗಳನ್ನು ವಿಸ್ತರಿಸಿದ್ದೀರಿ. ಕೆಲವನ್ನು ನೋಂದಾಯಿಸಿಕೊಳ್ಳುವುದಕ್ಕೆ ಆಗಲಿಲ್ಲ. ಹಾಗೆ ಮಾಡಬಾರದು. ನಿಮ್ಮ ವರ್ಗದ ೧೩,೧೮೮ ಜನರಿಗೆ ೨೮ ಲಕ್ಷ ರೂಪಾಯಿಗಳನ್ನು ವಿತರಣೆ ಮಾಡಿದ್ದೀರಿ. ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಅವರು ಯಾವ ವಿಷಯಗಳನ್ನು ಬಿಟ್ಟಿದ್ದಾರೆ ಅದನ್ನು ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಆಡಿಟ್ ಬಗ್ಗೆ ನಾನು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆಡಿಟ್ ವಿಂಗ್ ಮಾಡಿದಿರಿ. ಎಷ್ಟು ಸಹಕಾರ ಸಂಘಗಳಲ್ಲಿ ತಾವು ಕರಾರುವಾಕ್ಕಾಗಿ ಕಾಲಕ್ಕೆ ಸರಿಯಾಗಿ ಆಡಿಟ್ ಮಾಡಿದಿರಿ ಎಂದು ಹೇಳುತ್ತೀರಾ ? ಯಾವುದೋ ಒಂದು ಸಹಕಾರ ಸಂಘದಲ್ಲಿ ತಾವು ನಾಲ್ಕಾರು ವರ್ಷಗಳಿಂದ ಆಡಿಟ್ ವಿಂಗ್ ಮಾಡಿದರೂ ಪ್ರಯೋಜನವಾಗಲಿಲ್ಲ. ಆಡಿಟ್ ಸಕಾಲದಲ್ಲಿ, ಸಮರ್ಪಕವಾಗಿ, ಸರಿಯಾದ ರೀತಿಯಲ್ಲಿ ಮಾಡದೇ ಇದ್ದುದರಿಂದ ದುರುಪಯೋಗವಾಗಿದೆ. ೧೧.೧೨ ತಿಂಗಳಿಂದ ಸಹಕಾರ ಸಂಘಗಳಲ್ಲಿ ವ್ಯವಹಾರ ಮಾಡಿದಾಗ ಲೆಕ್ಕ ಪರಿಶೋಧನೆ ಮಾಡದೇ ಇದ್ದುದರಿಂದ ಅನೇಕ ವಿಧವಾದ ಲೋಪದೋಷಗಳಿಗೆ ತಾವೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಈ ಬಗ್ಗೆ ಮಾನ್ಯ ಸಚಿವರಿಗೆ ಪ್ರಶ್ನೆ ಹಾಕಿದಾಗ, ಐದಾರು ವರ್ಷಗಳಿಂದ ಲೆಕ್ಕ ಪರಿಶೋಧನೆ ಆಗಲಿಲ್ಲ, ಅವರು ಸರಿಯಾಗಿ ಲೆಕ್ಕಪತ್ರಗಳನ್ನು ಬರೆದಿಲ್ಲ, ಅದಕ್ಕಾಗಿ ಆಡಿಟ್ ಮಾಡಿಲ್ಲ ಎಂದು ಹೇಳಿದರು. ಇದು ಬಹಳ ಅನ್ಯಾಯವೆಂದು ನನಗನ್ನಿಸುತ್ತದೆ. ಹೊರಗಡೆಯಿಂದ ಬೇಕಾದಷ್ಟು ಹಣವನ್ನು ತಂದು ಸಹಕಾರ ಸಂಘಗಳಿಗೆ ವಿವಿಧ ರೂಪದಲ್ಲಿ ಸಾಲ ಕೊಟ್ಟು ಸಾಲ ವಿತರಣೆ ಸರಿಯಾಗಿ ಆಗಿದೆಯೋ, ಚೆನ್ನಾಗಿ ನಡೆದಿದೆಯೋ ಇಲ್ಲವೇ ಎಂದು ಲೆಕ್ಕ ಸಂಶೋಧನೆ ಮಾಡತಕ್ಕ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ ಆಂದರೆ ಸಹಕಾರ ಸಂಘಗಳು ಎಷ್ಟರಮಟ್ಟಿಗೆ ಬೆಳೆಯುತ್ತದೆ ಎಂದು ಆಲೋಚನೆ ಮಾಡಬೇಕು. ಅನೇಕ ಸಹಕಾರ ಸಂಘಗಳಲ್ಲಿ ೬೪ನೇ ಸೆಕ್ಷನ್ ಕೆಳಗೆ ಎನ್‌ಕ್ವೈರಿ ಮಾಡಿ ನಾಲ್ಕೈದು ವರ್ಷಗಳಾದರೂ ಕೂಡ ಏಕೆ ವರದಿ ಬಂದಿಲ್ಲ. ಇದಕ್ಕೆ ಏನು ಕಾರಣ ಎಂದು ಯೋಚನೆ ಮಾಡಬೇಕು. ಕೆಲವು ಕಡೆ ಆಡಿಟ್ ಮಾಡಿ ಸಮರ್ಪಕವಾಗಿದೆ ಎಂದು ಹೇಳುತ್ತಾರೆ, ವರದಿ ಸಲ್ಲಿಸುತ್ತಾರೆ. ಅದು ಆದಮೇಲೆ ೬೪ನೇ ಸೆಕ್ಷನ್ ಕೆಳಗೆ ಎನ್‌ಕ್ವೈರಿ ಮಾಡಿದಾಗ ಲೋಪದೋಷವಿದ್ದು ೪ ವರ್ಷಗಳಿಂದ ದುರ್ವ್ಯವಹಾರ ನಡೆದಿದೆ ಎಂದು ಅವರು ವರದಿ ಸಲ್ಲಿಸುತ್ತಾರೆ. ಇದರಲ್ಲಿ ಯಾವುದನ್ನು ನಂಬೋಣ. ಈ ಎರಡು ವರದಿಗಳಲ್ಲಿ ಒಂದಕ್ಕೊಂದಕ್ಕೆ ವಿರೋಧಾಭಾಸವಾಗುತ್ತದೆ. ಇದರ ಅರ್ಥವೇನು ? ಅಂದರೆ ಸರಿಯಾಗಿ ಲೆಕ್ಕ ಪರಿಶೋಧನೆ ಮಾಡಲಿಲ್ಲವೇ ? ಸಂಬಂಧಪಟ್ಟ ಸಹಕಾರ ಸಂಘಗಳ ಅಧಿಕಾರಿಗಳು ಶಾಮೀಲಾಗಿದ್ದಾರೆಯೋ ಎಂದು ಸಂಶಯ ಬರುತ್ತದೆ. ಆದುದರಿಂದ ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ೧೯ ಡಿ.ಸಿ.ಸಿ. ಬ್ಯಾಂಕುಗಳಿವೆ. ಇದರಲ್ಲಿ ಮುಕ್ಕಾಲು ಭಾಗ ಸರಿಯಾದ ರೀತಿಯಲ್ಲಿ ಸಾಲವನ್ನು ವಿತರಣೆ ಮಾಡತಕ್ಕ ಅರ್ಹತೆ ಮುಟ್ಟಿಲ್ಲ, ಸಹಕಾರ ಸಂಘಗಳಿಂದ, ಪ್ರೈಮರಿ ಸೊಸೈಟಿಗಳಿಂದ ಸದಸ್ಯರುಗಳು ಕೊಡತಕ್ಕ ಬಾಕಿ ಬರಲಿಲ್ಲ, ಆದುದರಿಂದ ಹೊಸದಾಗಿ ಸಾಲ ಪಡೆಯತಕ್ಕ ಅರ್ಹತೆ ಇಲ್ಲ ಎಂದು ಹೇಳುತ್ತಾರೆ. ಯಾರು ಸದಸ್ಯರು ಸಾಲವನ್ನು ಪಡೆದಿದ್ದಾರೋ ಅವರು ಎಷ್ಟು ಹಣ ತೆಗೆದುಕೊಂಡು ತೀರಿಸುತ್ತಾರೋ ಅಷ್ಟು ಮಾತ್ರ ಕೊಡುತ್ತೇವೆ ಎಂದು ಹೇಳುತ್ತಾರೆ. ಕಳೆದ ವರ್ಷ ಎಷ್ಟು ರೂಪಾಯಿಗಳ ಸಾಲವನ್ನು ಪಡೆದಿದ್ದಾರೋ, ಆ ಸಾಲವನ್ನು ಪೂರ್ತಿಯಾಗಿ ಪಾವತಿ ಮಾಡಿದರೆ ಅಷ್ಟೇ ಸಾಲಕ್ಕೆ ಅರ್ಹರು ಎಂದು ಹೇಳುತ್ತಾರೆ. ಹೋದಸಾರಿ ನಾನು ಒಂದು ಎಕರೆಯಲ್ಲಿ ಕಡಲೆಕಾಯಿ ಹಾಕಿದಾಗ ಒಂದು ಸಾವಿರ ರೂಪಾಯಿ ತಗೆದುಕೊಂಡು ತೀರಿಸಿರುತ್ತೇನೆ. ಈ ವರ್ಷ ಭತ್ತ ಅಥವಾ ಕಬ್ಬು ಹಾಕಿದಾಗ ಸಾಲ ಕೇಳಿದರೆ ಹಿಂದಿನ ವರ್ಷದಷ್ಟು ಮಾತ್ರ ಕೊಡಲಿಕ್ಕೆ ಸಾಧ್ಯ ಅಂದರೆ ರೈತ ಎಲ್ಲಿಗೆ ಹೋಗಬೇಕು ? ಉದಾಹರಣೆಗೆ ಹೇಳುವುದಾದರೆ, ಅನೇಕ ಕೈಗಾರಿಕೆಗಳು ಸಿಕ್ ಇಂಡಸ್ಟ್ರೀಸ್ ಇದ್ದಾಗ ಅವುಗಳನ್ನು ಸರ್ಕಾರ ಸಿಕ್ ಇಂಡಸ್ಟ್ರೀಸ್ ಎಂದು ಪರಿಗಣಿಸಿ ಪುನಶ್ಚೇತನಗೊಳಿಸಲು ಸಾಕಷ್ಟು ಧನಸಹಾಯ ಮಾಡುತ್ತಾರೆ. ಅದೇ ರೀತಿ ಸುಸ್ತಿ ಆದ ಸಹಕಾರ ಸಂಘಗಳಿಗೆ ಮತ್ತೆ ರೈತನಿಗೆ ಸಾಲ ಕೊಡಬೇಕು ಎನ್ನತಕ್ಕ ಉದ್ದೇಶದಿಂದ ರಿಸರ್ವ್‌ಬ್ಯಾಂಕ್‌ನಿಂದ ಪಡೆಯತಕ್ಕ ಧನವನ್ನು ಕೊಡಬೇಕು. ಏಕೆಂದರೆ ರೈತನಿಗೆ ಬೆಳೆಯನ್ನು ಒಡ್ಡಲಿಕ್ಕೆ ರೈತನಿಗೆ ಹಣ ಸಾಲುವುದಿಲ್ಲ. ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಬೆಳೆಯನ್ನು ಕಳೆದುಕೊಂಡಾಗ ಸಾಲವನ್ನು ಮರು ಪಾವತಿ ಮಾಡುವ ಸಂದರ್ಭ ರೈತನಿಗೆ ಬರುವುದಿಲ್ಲ. ಆಗ

ಮತ್ತೊಂದು ಬೆಳೆ ಬರುವವರೆಗೆ ಕಾಲವನ್ನು ವಿಸ್ತರಿಸಬೇಕು. ರೈತ ತಾವು ಒಡ್ಡಿರತಕ್ಕ ಬೆಳೆ ಪರಿಪೂರ್ಣ ವಾಗಿ ತನ್ನ ಕೈಗೆ ಸಿಗುವತನಕ ಅವಧಿಯನ್ನು ವಿಸ್ತರಿಸಬೇಕು, ಸಾಲವನ್ನು ಕೊಡಬೇಕು. ಬೆಳೆ ಆಗ ದಿದ್ದರೆ ಕಂದಾಯ ಹೇಗೆ ಕಡಿಮೆ ಮಾಡುತ್ತಾರೋ ಅದೇ ರೀತಿ ಸಹಕಾರ ಸಂಘದಲ್ಲಿ ಪಡೆದಿರತಕ್ಕ ಸಾಲ ವನ್ನು ಕೊಡುವುದಕ್ಕೆ ಬೆಳೆ ತನ್ನ ಕೈಗೆ ಬರುವವರೆಗೆ ಕಾಲವನ್ನು ವಿಸ್ತರಿಸಬೇಕು. ಬೆಳೆ ಒಡ್ಡಲಿಕ್ಕೆ ಸಹಾಯ ಮಾಡಬೇಕು. ಕೇವಲ ೫೦೦ ರೂಪಾಯಿ ಕೊಟ್ಟು ಮರು ಪಾವತಿ ಮಾಡಲಿಲ್ಲ ಎಂದು ಸುಸ್ತಿ ದಾರ ಎಂಬ ಪಟ್ಟಿಯನ್ನು ತಲೆಗೆ ಕಟ್ಟಿ ಸಹಕಾರ ಸಂಘದಲ್ಲಿ ಕಾಲು ಇಡಲಿಕ್ಕೆ ಆಗದಂತೆ ತೊಂದರೆ ಮಾಡಿ ದ್ದಾರೆ. ಪ್ರಕೃತಿ ವಿಕೋಪಕ್ಕೆ ಅನೇಕ ರೈತರು ಸಿಕ್ಕಿದ್ದಾರೆ. ವಸೂಲಾಗಿರುವುದು ಕಡಿಮೆ ಎಂದು ನನ ಗನ್ನಿಸುತ್ತದೆ. ತಾವು ವಿನಾಯಿತಿ ಕೊಟ್ಟಿದ್ದೀರಿ. ಇದರ ಜೊತೆಗೆ ಅವಧಿಯನ್ನು ವಿಸ್ತರಿಸಬೇಕು. ಡಿಸೆಂಬರ್ ಅಥವಾ ಮುಂದಿನ ಜನವರಿವರೆಗೆ ಅವಧಿಯನ್ನು ವಿಸ್ತರಿಸಿ ಮತ್ತು ದುಡ್ಡನ್ನು ಪಡೆಯಲಿಕ್ಕೆ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮೂಲಕ ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಕರ್ನಾಟಕ ಸಿವಿಲ್ ಕೊ–ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಕೆಲವು ಅಂಶ ಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ರಾಜ್ಯಮಟ್ಟದ ಸಂಸ್ಥೆ. ಅಲ್ಲಿ ನಾನು ಕೆಲವು ಕಾಲ ಉಪಾಧ್ಯಕ್ಷನಾಗಿ ಕೆಲಸ ಮಾಡಿದೆ ಅಲ್ಲಿ ವ್ಯವಹಾರ ಸರಿಯಾಗಿ ನಡೆದಿಲ್ಲ ಎಂದು ನನ್ನ ಸ್ಥಾನಕ್ಕೆ ರಾಜೀ ನಾಮೆ ಕೊಟ್ಟಿದ್ದೇನೆ. ಅಲ್ಲಿ ನಡೆದ ದುರ್ವ್ಯವಹಾರದ ಬಗ್ಗೆ ಓಳನೇ ಎನ್‌ಕ್ವೈರಿಯನ್ನು ನಾಲ್ಕೈದು ವರ್ಷಗಳಲ್ಲಿ ಮಾಡಿದರೂ ಸರಿಯಾದ ರೀತಿಯಲ್ಲಿ ಮಾಡಲಿಲ್ಲ. ಸರ್ಕಾರಕ್ಕೆ ವರದಿ ಕೊಟ್ಟಿಲ್ಲ. ಕಾರ್ಯ ಮಂಡಲಿ ಸದಸ್ಯರು ಹಣ ಪಡೆದು ಮೂರು, ನಾಲ್ಕು ವರ್ಷಗಳ ಕಾಲ ತಮ್ಮ ಸ್ವಂತ ಬಂಡವಾಳವಾಗಿಟ್ಟು ಕೊಂಡು ಮರು ಪಾವತಿ ಮಾಡಲಿಲ್ಲ. ಸೆಕ್ಷನ್ ೨೯ ಸಿ ಪ್ರಕಾರ ನಿವೃತ್ತಿ ಮಾಡಬೇಕು ಎಂದು ಅನೇಕ ಸಲ ರಿಜಿಸ್ಟ್ರಾರ್‌ಗೆ ತಿಳಿಸಿದ್ದೇನೆ. ಒಬ್ಬಿಬ್ಬರನ್ನು ನಿವೃತ್ತಿ ಮಾಡಿದರೆ ಬೇರೆಯವರಿಗೆ ಭಯ ಬಂದು ದುಡ್ಡನ್ನು ವಾಪಸ್ ಕೊಡುತ್ತಾರೆ, ಈ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿ ಗಳು ಉತ್ತರ ಕೊಟ್ಟರು.

೫–೦೦ ಪಿ.ಎಂ.

ಇವತ್ತಿನ ದಿವಸ ಫೆಡರೇಷನ್ ಆಗಿರಲಿ, ಇಲ್ಲವೇ ಟಿ.ಎ.ಪಿ.ಎಂ ಸಿ. ಯಾಗಿರಲೀ ಯಾವುದೇ ಸಂಸ್ಥೆಯಾಗಿರಲಿ. ತೆಗೆದುಕೊಂಡಂಥ ಸಾಲವನ್ನು ಕ್ಲಿಯರ್ ಮಾಡದ ಹೊರತು ಅವರನ್ನು ನಿವೃತ್ತಿ ಮಾಡಬಾರದು ಇಲ್ಲದೇ ಹೋದರೆ ಯಾವ ಸಂಸ್ಥೆಗಳೂ ಉದ್ಧಾರವಾಗುವುದಿಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಒಬ್ಬರೇ ೨–೩ ಲಕ್ಷ ರೂಪಾಯಿಗಳನ್ನು ದೋಚಿಕೊಂಡು ಹೋದರೆ ಯಾವ ಸಂಸ್ಥೆ ತಾನೇ ಉದ್ಧಾರವಾಗುತ್ತದೆ ಸ್ವಾಮಿ ? ಅದೇ ಇವತ್ತು ಒಬ್ಬ ಬಡವರಾಗಿರತಕ್ಕಂಥವರು ೨ ರೂಪಾಯಿ ಬಡ್ಡಿ ಕೊಟ್ಟಿರಲಿಲ್ಲವೆಂದು ಅವನನ್ನು ಚುನಾವಣೆಯಲ್ಲಿ ನಿಲ್ಲುವುದಕ್ಕೆ ಅವಕಾಶ ಕೊಡಲಿಲ್ಲ ಅದೇ ಇವತ್ತು ಡೈರೆಕ್ಟರ್‌ಗಳವರು ತೆಗೆದುಕೊಂಡಂಥ ಸಾಲಕ್ಕೆ ಬಡ್ಡಿ ಕಟ್ಟದಿದ್ದರೂ ಅವರ ಮೇಲೆ ಸರಿಯಾದ ಕ್ರಮವನ್ನು ಏತಕ್ಕೆ ಕೈಗೊಂಡಿಲ್ಲವೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ಇದರ ಬಗ್ಗೆ ತಾವು ಕೂಲಂಕಷವಾಗಿ ವಿಚಾರಣೆ ಮಾಡಬೇಕು. ಇವತ್ತು ಅನೇಕ ಜನ ಮಾಜಿ ಡೈರೆಕ್ಟರ್‌ಗಳವರು ತಮ್ಮ ಸ್ವಂತಕ್ಕಾಗಿ ಹಣವನ್ನು ಉಪಯೋಗಿಸಿಕೊಂಡು, ತಮ್ಮ ಸ್ವಂತ ಬಂಡವಾಳವನ್ನಾಗಿ ಮಾಡಿ ಕೊಂಡಿದ್ದಾರೆ, ಅಂಥವರ ಮೇಲೆ ಏತಕ್ಕೆ ಸ್ವಾಮಿ ನಿಮ್ಮ ಕಾನೂನು ೨೯ (ಸಿ) ಪ್ರಕಾರ ಕ್ರಮ ತೆಗೆದು ಕೊಳ್ಳುವುದಕ್ಕೆ ಮರೆತು ಹೋದಿರಾ ? ಎಂದು ಕೇಳಬಯಸುತ್ತೇನೆ. ಇದಕ್ಕಾಗಿ ನಾನು ಉಪಾಧ್ಯಕ್ಷ ಸ್ಥಾನಕ್ಕೇ ರಾಜೀನಾಮೆ ಕೊಟ್ಟಿದ್ದೇನೆ. ಇವತ್ತಿನ ದಿವಸ ನಾನು ಒಬ್ಬ ಶಾಸಕನಾಗಿ ಸಂಬಂಧಪಟ್ಟ ಮಂತ್ರಿಗಳವರ ಮತ್ತು ಅಧಿಕಾರಿಗಳವರ ಗಮನಕ್ಕೆ ಈ ವಿಷಯವನ್ನು ತಂದಾಗ್ಯೂ ಸಹ ಏನೂ ಕ್ರಮ ವನ್ನು ಅವರ ಮೇಲೆ ಇಲ್ಲಿಯವರೆಗೆ ಕೈಗೊಂಡಿಲ್ಲ. ಇವತ್ತು ಸರ್ಕಾರ ಒಂದು ಮಾರ್ಕೆಟ್ ಕಮಿಟಿ ಎಂದು ಮಾಡಿದೆ, ಇದೇ ಕೆಲಸವನ್ನು ಫೆಡರೇಷನ್ ಕೂಡ ಮಾಡುತ್ತಿದೆ. ಹೀಗೆ ಎರಡೆರಡು ಇರುವುದ ರಿಂದ ಸರ್ಕಾರದ ಕೆಲಸ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇವೆರಡನ್ನೂ ವಿಲೀನಗೊಳಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಹೇಳಬೇಕೆಂದರೆ, ಸಹಕಾರ ಸಂಘಗಳಲ್ಲಿ ಚುನಾವಣೆಗಳು ನಡೆಯುತ್ತದೆ ಆದರೆ ಇದರ ಬಗ್ಗೆ ನಾನು ಬಹಳ ಪಶ್ಚಾತಾಪ ಪಟ್ಟುಕೊಂಡು ಹೇಳುವುದೇನೆಂದರೆ ನಮ್ಮ

ದೇಶದಲಿ ಕೇವಲ ೩೦ ರಷ್ಟು ಮಾತ್ರ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತರಿದ್ದಾರೆ. ಮಿಕ್ಕವರೆಲ್ಲರೂ ನಿರಕ್ಷರ ಕುಕ್ಷಿಗಳಾಗಿದ್ದಾರೆ. ಸಹಕಾರ ಸಂಘಗಳಲ್ಲಿ ಚುನಾವಣೆಗಳನ್ನು ಮಾಡತಕ್ಕ ಕಾಲದಲ್ಲಿ ಹಿಂದೆ ಹೆಸರುಗಳ ಜೊತೆಗೆ ಸಿಂಬಲ್ಸ್‌ನ್ನು ಕೊಡುತ್ತಿದ್ದರು. ಆದರೆ ಇವತ್ತು ಅದನ್ನು ಏಕೆ ಬೇಡವೆಂದು ತೆಗೆದು ಹಾಕಿದ್ದೀರೋ ಗೊತ್ತಾಗಲಿಲ್ಲ. ಇವತ್ತು ಚುನಾವಣೆಗಳು ಬಂದಾಗ ನಿರಕ್ಷರ ಕುಕ್ಷಿಗಳು ಅವಿದ್ಯಾವಂತರಾದಂಥವರು ಹೆಸರನ್ನು ಓದುವುದಕ್ಕೆ ಗೊತ್ತಾಗದಿದ್ದರೆ ಸಿಂಬಲ್‌ನ್ನು ನೋಡಿ ಓಟನ್ನು ಹಾಕುತ್ತಿದ್ದರು. ಈಗ ಆ ಪದ್ಧತಿಯನ್ನು ತೆಗೆದು ಹಾಕಿರುವುದರಿಂದ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ಇವತ್ತು ಸಹಕಾರ ಸಂಘಗಳೇ ಆಗಿರಲೀ ಅಥವಾ ಇನ್ನು ಯಾವುದೇ ಸಂಸ್ಥೆಯ ಚುನಾವಣೆಗಳು ಆದಾಗ ಹೆಸರುಗಳ ಜೊತೆಗೆ ಸಿಂಬಲ್ ಕೂಡ ಇಡಲೇಬೇಕೆಂದು ಒತ್ತಾಯ ಪಡಿಸುತ್ತೇನೆ. ಇನ್ನು ಈ ಸಹಕಾರ ಸಂಘಗಳಲ್ಲಿರತಕ್ಕ ಸೆಕ್ರಟರಿ ಏನು ಮಾಡುತ್ತಾನೆ ಎಂದರೆ ಆ ಸೊಸೈಟಿಗೆ ೨-೩ ಮೂಟೆ ಸಕ್ಕರೆ ಅಲಾಟ್ ಆಗಿದ್ದರೆ ಒಂದು ಮೂಟೆ ಮಾತ್ರ ತಂದು ಮಿಕ್ಕದ್ದನ್ನು ಅವರು ಕಾಳಸಂತೆಯಲ್ಲಿ ಮಾರಿಕೊಳ್ಳುತ್ತಾರೆ. ಮತ್ತೆ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆಂದು ೧ ಸಾವಿರ ರೂಪಾಯಿಗಳ ಸಂಬಳವನ್ನು ಕೊಡುತ್ತೀರಿ. ಅದಕ್ಕೆ ನಾನು ತಮಗೆ ಸಲಹೆ ಮಾಡುವುದೇನೆಂದರೆ ನಮ್ಮಲ್ಲಿ ಸಾಕಷ್ಟು ಜನ ಪದವೀಧರರು ನಿರುದ್ಯೋಗಿಗಳಾಗಿದ್ದಾರೆ, ಬಿ.ಎ. ಬಿ.ಕಾಂ. ಎಂ.ಎ. ಮಾಡಿರತಕ್ಕಂಥವರು ಇದ್ದಾರೆ ಅವರಿಗೆ ಅಲ್ಲಿ ಸೆಕ್ರೆಟರಿ ಕೆಲಸ ಕೊಡಿ ಅವರು ಇವತ್ತು ಹೊರಗಡೆ ೨೦೦, ೨೫೦ ರೂ.ಗಳಿಗೆಲ್ಲಾ ಕೆಲಸ ಮಾಡುತ್ತಿದ್ದಾರೆ. ಅಂಥವರಿಗೆ ನೀವು ೫೦೦ ರೂ.ಗಳ ಸಂಬಳ ಕೊಟ್ಟು ಅಲ್ಲಿ ಇಡಿ ಇವರು ಅವರಿಗಿಂತ ಚೆನ್ನಾಗಿಯೇ ಕೆಲಸ ಮಾಡುತ್ತಾರೆ. ಇದರಿಂದ ಸೊಸೈಟಿಗಳು ಸಹ ಲಾಭದಾಯಕವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನಿರುದ್ಯೋಗ ಕೂಡ ನಿವಾರಣೆಯಾಗುತ್ತದೆಂದು ಸಲಹೆ ಮಾಡಬಯಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಪ್ರಕೃತಿ ವಿಕೋಪಕ್ಕೆ ಒಳಗಾಗಿ ಅದರಿಂದ ತೊಂದರೆಯಾಗಿರುವುದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಆ ವಿಷಯವನ್ನು ಬಿಟ್ಟು ನಾನು ಬೇರೆ ಕೆಲವಾರು ವಿಷಯಗಳನ್ನು ಹೇಳಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಯಾವುದೇ ತರಹದ ಭೂಮಿಯಾಗಿರಲಿ, ಅದು ಕುಷ್ಕಿ ಭೂಮಿಯಾಗಿರಲಿ ಇಲ್ಲವೇ ತರಿ ಜಮೀನು ಆಗಿರಲಿ ರಾಸಾಯನಿಕ ಗೊಬ್ಬರವನ್ನು ಹಾಕಿ ಬೆಳೆಯುತ್ತಿರುವುದರಿಂದ ಇವತ್ತು ರಾಸಾಯನಿಕ ಗೊಬ್ಬರವರನ್ನು ಪ್ರತಿ ವರ್ಷವೂ ಹಾಕದೇ ಬೆಳೆಯನ್ನು ತೆಗೆಯುವುದಕ್ಕೇ ಬರುವುದಿಲ್ಲ. ಆ ರೀತಿಯಾಗಿ ಇವತ್ತು ಭೂಮಿಯಲ್ಲಿರತಕ್ಕ ಸಾರವೆಲ್ಲಾ ಹೊರಟು ಹೋಗಿ ಬಿಟ್ಟಿದೆ. ಇವತ್ತು ಒಂದು ಎಕರೆಯಲ್ಲಿ ೧೦ ಕ್ವಿಂಟಾಲ್ ಭತ್ತವನ್ನು ಬೆಳೆಯಬೇಕಾದರೆ ಎಷ್ಟು ಗೊಬ್ಬರವನ್ನು ಹಾಕಿರುತ್ತೇವೆಯೋ ಅಷ್ಟೇ ಗೊಬ್ಬರವನ್ನು ಮುಂದಿನ ವರ್ಷವೂ ಹಾಕಬೇಕಾಗುತ್ತದೆ. ಇಲ್ಲದಿದ್ದರೆ ಆ ಭೂಮಿಯಲ್ಲಿ ಅಷ್ಟು ಒಳ್ಳೆಯ ಫಸಲು ಬರುವುದಿಲ್ಲ. ಇದರಿಂದಾಗಿ ಪ್ರಕೃತಿ ದತ್ತವಾಗಿ ಭೂಮಿಯಲ್ಲಿದ್ದ ಸಾರವೆಲ್ಲಾ ನಶಿಸಿ ಹೋಗಿದೆ. ಇದೇ ರೀತಿಯಾದರೆ ಇನ್ನು ೧೦ ವರ್ಷಗಳಲ್ಲಿ ಭೂಮಿಯಲ್ಲಿರತಕ್ಕ ದೈವದತ್ತವಾಗಿರತಕ್ಕ ಸಾರವೆಲ್ಲಾ ಹೊರಟು ಹೋಗಿ ಬಿಟ್ಟು ಅಲ್ಲಿ ಹುಲ್ಲು ಸಹ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ ಅಂಥಾ ಪರಿಸ್ಥಿತಿ ಉಂಟಾಗಿ ಬಿಡುತ್ತದೆ. ಆದುದರಿಂದ ಇವತ್ತು ಬರೀ ರಾಸಾಯನಿಕ ಗೊಬ್ಬರವನ್ನು ಮಾತ್ರ ಉಪಯೋಗಿಸುತ್ತಿದ್ದು, ಮೊದಲು ಹಳ್ಳಿಯವರು ಉಪಯೋಗಿಸುತ್ತಿದ್ದ ಕಾಂಪೋಸ್ಟ್ ಗೊಬ್ಬರವನ್ನು ಉಪಯೋಗಿಸದೇ ಇರುವುದರಿಂದ ಆಗತಕ್ಕಂಥ ಪರಿಣಾಮವೇನೆಂಬುದನ್ನು ತಾವು ಮತ್ತು ತಜ್ಞರು ಆಲೋಚನೆ ಮಾಡಿ ನೋಡಿ. ಇದಕ್ಕೆ ಏನು ಪರಿಹಾರ ವೆಂಬುದನ್ನು ತಜ್ಞರು ಸಲಹೆ ನೀಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಬೆಳೆಗೆ ವಿಮಾ ಯೋಜನೆ ಜಾರಿಗೆ ತರಬೇಕೆಂದು ನಾವು ಅನೇಕ ಸಲ ಹೇಳಿದ್ದೇವೆ. ಪ್ರಯೋಗಾರ್ಥವಾಗಿಯಾದರೂ ೨-೩ ತಾಲ್ಲೂಕ್‌ಗಳನ್ನು ತೆಗೆದುಕೊಂಡು ನೋಡಿ ಎಂದು ನಾವು ಎಷ್ಟೋ ಸಾರಿ ಸಲಹೆಗಳನ್ನು ಕೊಟ್ಟರೂ ಸಹ ಸರ್ಕಾರ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಇದರ ಬಗ್ಗೆ ತಾವು ಸೂಕ್ತವಾದ ಯೋಜನೆಯನ್ನು ಅಳವಡಿಸಿದರೆ ಅದರಿಂದ ನಿಜವಾಗಿಯೂ ರೈತರಿಗೆ ಒಳ್ಳೆಯದಾಗುತ್ತದೆಂದು ಹೇಳಬಯಸುತ್ತೇನೆ ಇನ್ನು ರಾಜ್ಯದಲ್ಲಿ ಹಸಿರು ಕ್ರಾಂತಿ ಬಂತು, ಹಸಿರು ಕ್ರಾಂತಿ ಬಂತು ಎಂದು ಅನೇಕ ಜನ ಸಂತೋಷ ಪಟ್ಟರು, ಆದರೆ ನಾನು ಮಾತ್ರ ಸಂತೋಷ ಪಡುವುದಿಲ್ಲ. ಏತಕ್ಕೆಂದರೆ ಇವತ್ತು ಹಸಿರು ಕ್ರಾಂತಿಯಾದರೆ ಏನು, ಹಳದಿ ಕ್ರಾಂತಿಯಾದರೆ ಏನು ? ಕೊಂಡುಕೊಳ್ಳತಕ್ಕವನಿಗೆ ಮತ್ತು ಬೆಳೆಯುತಕ್ಕವನಿಗೆ ಅದರಿಂದ ಪ್ರಯೋಜನವಾಗದಿದ್ದರೆ ? ಇದರಿಂದ ಇವತ್ತು

ಕೊಂಡುಕೊಳ್ಳತಕ್ಕವನಿಗೂ ತೃಪ್ತಿಯಿಲ್ಲ, ಬೆಳೆದವನಿಗೂ ತೃಪ್ತಿಇಲ್ಲ ಇಂಥ ಕ್ರಾಂತಿಯಿಂದ ಏನು ಪ್ರಯೋಜನವೆಂದು ಕೇಳಬಯಸುತ್ತೇನೆ. ಆದುದರಿಂದ ಇದರಲ್ಲಿ ಇರತಕ್ಕಂಥ ದೋಷವನ್ನು ಸರಿಪಡಿಸಿದರೆ ಆಗ ಮಾತ್ರ ಸಾರ್ಥಕವೆಂದು ಹೇಳಬಯಸುತ್ತೇನೆ.

ಇನ್ನು ಈ ಅಗ್ರಿಕಲ್ಚರ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಇವತ್ತು ಪಾಂಡವಪುರ ಕಾರ್ಖಾನೆಯವರು ಒಂದು ಟನ್ನಿಗೆ ೩೦೫ ರೂ.ಗಳನ್ನು ಕೊಟ್ಟರೆ ಮಂಡ್ಯಾ ಕಾರ್ಖಾನೆಯವರು ಅಷ್ಟು ಕೊಡುವುದಿಲ್ಲ ಇದಕ್ಕೆ ಕಾರಣವೇನು ? ಇವತ್ತು ಅಕ್ಕಪಕ್ಕದಲ್ಲಿರತಕ್ಕ ಗದ್ದೆಯವರ ಪೈಕಿ ಒಬ್ಬರು ಪಾಂಡವಪುರ ಕಾರ್ಖಾನೆಗೆ ಕೊಟ್ಟರೆ ಅಲ್ಲಿ ೧೧.೫ ಇಳುವರಿ ಸಿಗುತ್ತದೆ. ಅದೇ ಪಕ್ಕದ ಗದ್ದೆಯವನು ಮಂಡ್ಯಾ ಕಾರ್ಖಾನೆಗೆ ಕೊಟ್ಟರೆ ಅಲ್ಲಿ ೯.೫ ಇಳುವರಿ ಬರುತ್ತದೆ. ಆದುದರಿಂದ ಇವತ್ತು ಪಾಂಡವಪುರದಲ್ಲಿ ಜಾಸ್ತಿ ಬರುವುದಕ್ಕೆ ಕಾರಣವೇನು ? ಮಂಡ್ಯಾ ಕಾರ್ಖಾನೆಯಲ್ಲಿ ಕಡಿಮೆ ಬರುವುದಕ್ಕೆ ಕಾರಣವೇನು ? ಇದರಲ್ಲಿ ಏನು ಲೋಪದೋಷವಿದೆ ಎನ್ನತಕ್ಕದ್ದನ್ನು ಕಂಡು ಹಿಡಿಯಬೇಕೆಂದು ಹೇಳಬಯಸುತ್ತೇನೆ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ಬಗ್ಗೆ ಒಂದು ಮಾತನ್ನು ಹೇಳಬಯಸುವುದೇನೆಂದರೆ, ನಮ್ಮ ತಾಲ್ಲೂಕಿನಲ್ಲಿ ಸಹ ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದಾರೆ, ಆದರೆ ಅಲ್ಲಿ ಸರಿಯಾಗಿ ವ್ಯವಹಾರ ನಡೆಯುತ್ತಿಲ್ಲ. ಅಲ್ಲಿ ಒಂದು ಕಟ್ಟಡವನ್ನು ಮಾತ್ರ ಕಟ್ಟಿಸಿದ್ದಾರೆ. ಆದರೆ ಅಲ್ಲಿ ರಾತ್ರಿ ಹೊತ್ತು ಕತ್ತೆಗಳು ಮಾತ್ರ ನಿಂತಿರುತ್ತವೆ. ಅಕಸ್ಮಾತ್ ಏನಾದರೂ ಯಾರಾದರೂ ಅಧಿಕಾರಿಗಳು ಬಂದರೆ ಅದನ್ನು ಗೆಸ್ಟ್ ಹೌಸ್ ಆಗಿ ಉಪಯೋಗಿಸುತ್ತಿದ್ದಾರೆ. ಚಾಮರಾಜನಗರ, ಕೊಳ್ಳೆಗಾಲದ ಕೆಲವು ರೈತರಿಂದ ೨ ಪರ್ಸೆಂಟ್ ಶುಲ್ಕವನ್ನು ತೆಗೆದುಕೊಳ್ಳುತ್ತಾರೆ ಮತ್ತೆ ಕೆಲವರಿಂದ ತೆಗೆದುಕೊಳ್ಳುವುದಿಲ್ಲ. ಈ ರೀತಿಯಾಗಿ ನೀವು ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದರೂ ಸಹ ರೈತರಿಗೆ ಯಾವ ಅನುಕೂಲವನ್ನೂ ಸಹ ಒದಗಿಸಿ ಕೊಟ್ಟಿಲ್ಲ. ತಾವು ಇದರ ಬಗ್ಗೆ ಸರಪ್ರೈಜ್ ವಿಜಿಟ್ ಕೊಟ್ಟು ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ ಮತ್ತು ಬಡ ರೈತರಿಗೆ ಈ ಎರಡು ಪರ್ಸೆಂಟ್ ಶುಲ್ಕವೇನಿದೆ ಅದನ್ನು ತೆಗೆದು ಹಾಕುವುದು ಒಳ್ಳೆಯದೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಸೋಮಪ್ಪ (ಕೂಡ್ಲಿಗಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕಗಳಿಗೆ ನಾನು ಸಂಪೂರ್ಣವಾಗಿ ಬೆಂಬಲ ಸೂಚಿಸುತ್ತಾ, ಬೇಸಾಯ, ಸಹಕಾರ ಹಾಗೂ ಮಾರುಕಟ್ಟೆ ಎಂಬ ಈ ಮೂರು ಇಲಾಖೆಗಳ ಹೊಂದಾಣಿಕೆ ಯಾವ ರೀತಿ ಇರಬೇಕೆಂದರೆ ಒಂದು ಸಂಸಾರದಲ್ಲಿ ಗಂಡ ಹೆಂಡತಿ ಮಕ್ಕಳು ಯಾವ ರೀತಿ ಹೊಂದಿಕೊಂಡು ಇರುತ್ತಾರೋ ಆ ರೀತಿ ಇರಬೇಕಾಗುತ್ತದೆ. ಈ ಪ್ರಕಾರ ಈ ಮೂರು ಇಲಾಖೆಗಳೂ ಪರಸ್ಪರ ಹೊಂದಿಕೊಂಡು ಹೋದಾಗ ಮಾತ್ರ ಸಹಕಾರ ಸಂಸ್ಥೆಗೂ, ವ್ಯವಸಾಯಗಾರನಿಗೂ ಅನುಕೂಲವಾಗುತ್ತದೆ. ವ್ಯವಸಾಯಕ್ಕೆ ಒಂದು ಸರಿಯಾದ ರೀತಿಯ ಬೆಲೆ ಬರುತ್ತದೆ. ಒಂದಕ್ಕೊಂದು ಸರಿಯಾದ ರೀತಿಯಲ್ಲಿ ಹೊಂದಿಕೊಂಡು ಹೋಗದೆ ಹೋದರೆ ಯಾವ ರೀತಿ ಒಬ್ಬೊಬ್ಬರಿಗೂ ಅನಾನುಕೂಲವಾಗುತ್ತದೆಂಬುದನ್ನು ಈಗಾಗಲೇ ಮಾನ್ಯ ಮಿತ್ರರನೇಕರು ಸಾಕಷ್ಟು ಹೇಳಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಸಹಕಾರ ಸಂಸ್ಥೆಗಳಿಂದ ರೈತನಿಗೆ ಯಾವ ರೀತಿ ಸಹಾಯ ಆಗಬೇಕೋ ಆ ರೀತಿ ಆಗದೇ ಇರುವುದರಿಂದ, ರೈತ ಬೆಳೆ ಬೆಳೆದರೂ ಅದಕ್ಕೆ ಸರಿಯಾದ ಬೆಲೆ ಸಿಗದೇ ಇರುವುದರಿಂದ ರೈತ ಆದಷ್ಟುಮಟ್ಟಿಗೆ ನಿರಾಶನಾಗಿರುವುದು ಕಂಡು ಬರುತ್ತದೆ. ಚಳುವಳಿಯಾಗಲೀ, ಯಾವುದೇ ಆಗಲಿ ನಡೆಯುವುದಕ್ಕೆ ರೈತರಲ್ಲಿ ಈ ರೀತಿ ನಿರಾಶಾ ಭಾವನೆ ಹುಟ್ಟಿರುವುದೇ ಕಾರಣವೆಂದು ನಾನಾದರೂ ಹೇಳಬಯಸುತ್ತೇನೆ. 'ಒಕ್ಕಲಿಗನೊಕ್ಕಿದರೆ ಬಿಕ್ಕುವುದು ಜಗವೆಲ್ಲ' ಎಂಬ ಆದ್ಯರ ನುಡಿಯನ್ನು ಗಮನಕ್ಕೆ ತೆಗೆದುಕೊಂಡು ಅವನು ಒಕ್ಕುವುದಕ್ಕೆ ಯಾವ ರೀತಿ ಅವಕಾಶ ಮಾಡಿಕೊಡಬೇಕೆಂಬುದನ್ನು ಆಲೋಚಿಸತಕ್ಕದ್ದು ಅಧಿಕಾರಿಗಳ ಹಾಗೂ ಸರ್ಕಾರದ ಧರ್ಮ. ಸರ್ಕಾರದಲ್ಲಿ ರೈತನಿಗೆ ಸಹಾಯ ಮಾಡತಕ್ಕ ನಾನಾ ಯೋಜನೆಗಳು ಇವೆ. ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರಲು ಅಧಿಕಾರಿಗಳು ಗಮನ ನೀಡದೆ ಇರುವುದು ನಮ್ಮ ದುರಾದೃಷ್ಟ. ತಾಲ್ಲೂಕು ಮಟ್ಟದಲ್ಲಾಗಲೀ ಜಿಲ್ಲಾ ಮಟ್ಟದಲ್ಲಾಗಲಿ ಅಧಿಕಾರಿಗಳು ನಾವು ಕೂಡ ರೈತರು ಎಂಬ ಭಾವನೆಯನ್ನು ಬೆಳಸಿಕೊಳ್ಳದೆ ಹೋದರೆ ಸರ್ಕಾರದ ಧೋರಣೆಯನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿರತಕ್ಕ

ಅಧಿಕಾರಿಗಳು ರೈತರೊಡನೆ ಬೆರೆತುಕೊಂಡು ಕೆಲಸ ಮಾಡಿದರೆ ಮಾತ್ರ ರೈತರ ಉದ್ಧಾರವಾಗುವುದಕ್ಕೆ ಸಾಧ್ಯವಾಗುತ್ತದೆಯೆ ಹೊರತು ಯಾವುದೇ ಸರ್ಕಾರದ ಯೋಜನೆಗಳನ್ನು ವಾರಕ್ಕೋ, ೧೫ ದಿವಸಕ್ಕೋ ಒಮ್ಮೆ ತಾಲ್ಲೂಕು ಮಟ್ಟದಲ್ಲಿ ಮೀಟಿಂಗ್ ಕರೆದು ತಿಳಿಸಿದರೆ ಅವು ಫಲಪ್ರದವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದವರು ರೂಪಿಸತಕ್ಕ ಯೋಜನೆಗಳು ತಾಲ್ಲೂಕು ಮಟ್ಟದಲ್ಲಿರತಕ್ಕ ಹಳ್ಳಿಗಳ ರೈತರಿಗೆ ಮುಟ್ಟುತ್ತವೆಯೋ ಇಲ್ಲವೇ, ಅದಕ್ಕೆ ಬೇಕಾದ ಹಣಕಾಸನ್ನು ಒದಗಿಸುತ್ತಾರೆಯೋ ಇಲ್ಲವೇ ಎಂಬ ಬಗ್ಗೆ ಪರಿಶೀಲನೆ ಕಡಿಮೆಯಾಗಿದೆ. ಹೀಗಾಗಿ ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳೂ ಕೂಡ ಆ ಬಗ್ಗೆ ಗಮನ ನೀಡುತ್ತಿಲ್ಲ. ತತ್ಪರಿಣಾಮವಾಗಿ ಅವು ರೈತನಿಗೆ ಮುಟ್ಟುತ್ತಿಲ್ಲ. ಆ ಯೋಜನೆಗಳು ಖಂಡಿತವಾಗಿ ರೈತನಿಗೆ ಮುಟ್ಟಿದರೆ ರೈತರು ಉದ್ಧಾರವಾಗಲು ಅನುಕೂಲವಾಗುತ್ತದೆ ಆದ್ದರಿಂದ ಈ ಬಗ್ಗೆ ಸರ್ಕಾರವಾಗಲೀ ಅಥವಾ ಸಂಬಂಧಪಟ್ಟ ಮೇಲ್ಪಟ್ಟ ಅಧಿಕಾರಿಗಳಾಗಲೀ ನಿಗಾ ಇಟ್ಟು ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಅಧಿಕಾರಿಗಳು ಎಷ್ಟರಮಟ್ಟಿಗೆ ರೈತರ ಬಗ್ಗೆ ಕಳಕಳಿಯಿಂದ ಕೆಲಸ ಮಾಡುತ್ತಿದ್ದಾರೆಂಬುದನ್ನು ಖುದ್ದಾಗಿ ಹೋಗಿ ನೋಡಬೇಕೆಂದು ಸೂಚಿಸುತ್ತೇನೆ. ಸಾಮಾನ್ಯವಾಗಿ, ರೈತರಿಗೆ ಯಾವ ಯಾವ ಭೂಮಿಯಲ್ಲಿ ಯಾವ್ಯಾವ ಹವಾಮಾನದಲ್ಲಿ ಏನೇನು ಬೆಳೆಯನ್ನು ಬೆಳೆಯಬೇಕೆಂಬ ಅನುಭವ ಇರುವುದಿಲ್ಲ. ಅವನು ಯಾವುದೋ ಒಂದು ಮೂಢ ಪದ್ಧತಿಯ ಪ್ರಕಾರ ಬೀಜ ಬಿತ್ತುತ್ತಿರುತ್ತಾನೆ. ಉದಾಹರಣೆಗೆ, ನಮ್ಮ ಭಾಗದಲ್ಲಿ ಇಲ್ಲಿಯವರೆಗೆ ಮಳೆಯಾಗಿಲ್ಲ. ಈಗ ಮಳೆಯಾಗಿ ಹೈಬ್ರಿಡ್ ಜೋಳವನ್ನು ಹಾಕಿದರೆ ಫಲಪ್ರದವಾಗುವುದಿಲ್ಲವೆಂಬುದು ನಮಗೆಲ್ಲ ತಿಳಿದ ವಿಷಯ. ಆದರೆ, ರೈತರಿಗೆ ಮಳೆ ಬಂದರೆ ಸಾಕು, ಜೋಳವನ್ನು ತೆಗೆದುಕೊಂಡು ಹೋಗಿ ಹೊಲಕ್ಕೆ ಹಾಕೋಣವೆಂಬ ಅಭಿಪ್ರಾಯದಲ್ಲಿರುತ್ತಾರೆ. ಈ ರೀತಿ ಬಿತ್ತತಕ್ಕ ಜನರನ್ನು ಕಂಡು ಅಧಿಕಾರಿಗಳು, ಇದು ಖಂಡಿತವಾಗಿ ಹೈಬ್ರಿಡ್ ಜೋಳವನ್ನು ಬಿತ್ತತಕ್ಕ ಕಾಲ ಅಲ್ಲ, ದಯವಿಟ್ಟು ಈಗ ಬಿತ್ತಬಾರದು ಎಂದು ಕಟ್ಟುನಿಟ್ಟಾಗಿ ಹೇಳುವ ಮನೋಭಾವನೆಯನ್ನು ತಾಳಬೇಕು. ಆಗ ಮಾತ್ರ ರೈತನಿಗೆ ತಿಳಿವಳಿಕೆ ಮೂಡುತ್ತದೆ. ಆ ಬಗ್ಗೆ ಯಾರೂ ಆಲೋಚಿಸುವುದಿಲ್ಲ. ಯಾವ ಯಾವ ಸಂದರ್ಭದಲ್ಲಿ ಬೀಜ ಹಾಕಿದರೆ ಒಳ್ಳೆಯದೆಂಬುದನ್ನು ಖುದ್ದು ಪರಿಶೀಲಿಸಿ ರೈತರಿಗೆ ಮನವರಿಕೆ ಮಾಡಿಕೊಟ್ಟರೆ ಅವರು ಆಯಾಯ ಕಾಲದಲ್ಲಿ ಆಯಾಯ ಬೀಜಗಳನ್ನು ಹಾಕುವುದಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತರಿಗೆ ಈ ಪ್ರಕಾರವಾಗಿ ಆಗತಕ್ಕ ಅನಾನುಕೂಲಗಳನ್ನು ಅಧಿಕಾರಿಗಳು ಹೆಚ್ಚಿನ ರೀತಿಯಲ್ಲಿ ನಿಗಾವಹಿಸಿ ತಪ್ಪಿಸಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ರೈತರು ಏತಕ್ಕಾಗಿ ಚಳುವಳಿ ಮಾಡುತ್ತಿದ್ದಾರೆಂಬುದನ್ನು ಆಲೋಚಿಸಿದಾಗ ಅದಕ್ಕೆ ಬೇರೆ ಕಾರಣಗಳಿದ್ದರೂ ಇದೂ ಒಂದು ಕಾರಣವಾಗಿದೆ ಎಂದು ನಾನಾದರೂ ಹೇಳುತ್ತೇನೆ, ರೈತ ಉತ್ತು ಬಿತ್ತಿ ಕಷ್ಟಪಟ್ಟು ಬೆಳೆದರೂ ಕೇವಲ ೫–೬ ತಿಂಗಳುಗಳಿಗಾಗುವ ಕಾಳು ಸಿಗುತ್ತಿದೆಯೋ ವಿನಹ ಹೆಚ್ಚಿನ ರೀತಿಯಲ್ಲಿ ಸಿಗುತ್ತಿಲ್ಲ. ಏಕೆಂದರೆ ಅವನು ಹವಾಮಾನವನ್ನು ಅರಿತು ಕೆಲಸ ಮಾಡುವುದಿಲ್ಲ. ಕೆಲವು ರೈತರು ಈಗ ಬಿತ್ತಿದ್ದಾರೆ ಮತ್ತೆ ಕೆಲವರು ಇನ್ನೂ ಬಿತ್ತೇ ಇಲ್ಲ. ಇಂಥ ರೈತರಿಗೆ ಯಾವ ರೀತಿ ಸಹಾಯ ಮಾಡಬೇಕೆಂಬುದನ್ನು ಯೋಚಿಸಬೇಕು. ಇಂಥ ಸನ್ನಿವೇಶದಲ್ಲಿ ಬೆಳೆ ವಿಮಾ ಯೋಜನೆಯನ್ನು ಅಗತ್ಯವಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ರೈತನಿಗೆ ಯಾವ ರೀತಿಯಲ್ಲೂ ಲುಕ್ಸಾನಾಗಬಾರದೆಂಬ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತಂದರೆ ಅವನಿಗೆ ಅನಾನುಕೂಲವಾಗತಕ್ಕ ಸಂದರ್ಭದಲ್ಲಿ ಅಂದರೆ ಹಾಕಿರತಕ್ಕ ಪೈರು ಒಣಗಿ ನಿಂತರೂ ಅವನಿಗೆ ಆ ನಷ್ಟವನ್ನು ತುಂಬಿಕೊಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ಕಡ್ಡಾಯವಾಗಿ ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಸಾಯಿಲ್ ಕನ್‌ಸರ್ವೇಷನ್ ಯೋಜನೆಯನ್ನು ಮಾಡಿರತಕ್ಕದ್ದು ಬಹಳ ಒಳ್ಳೆಯದು ಮತ್ತು ಅದು ಉತ್ತಮವಾದ ಯೋಜನೆ ಕೂಡ ಆಗಿದೆ. ಆದರೆ ಇದರಲ್ಲಿ ಒಂದು ರೀತಿಯ ಹುಡುಗಾಟಿಕೆಯ ಆಟ ನಡೆಯುತ್ತಿದೆ. ಮುಂದೆ ಮುಂದೆ ಮಾಡಿಕೊಂಡು ಹೋದ ಹಾಗೆಲ್ಲಿ ಹಿಂದುಗಡೆ ಹಾಳಾಗುತ್ತಿದೆ. ಸಾಯಿಲ್ ಕನ್‌ಸರ್ವೇಷನ್ ಎಷ್ಟು ಎಂಬುದನ್ನು ನಿಗದಿ ಮಾಡಿ ಎಲ್ಲೆಲ್ಲಿ ಅಧಿಕಾರಿಗಳು ಒಡ್ಡುಗಳನ್ನು ಹಾಕಿದ್ದಾರೋ ಅವುಗಳನ್ನು ಜನರು ಶೋಷಿಸುತ್ತಿದ್ದಾರೆ. ಆದ್ದರಿಂದ, ಅವುಗಳನ್ನು ಪುನರ್‌ಪರಿಶೀಲನೆ ಮಾಡಿ ಮ್ಯಾಪ್ ಪ್ರಕಾರ ಎಲ್ಲೆಲ್ಲಿ ಒಡ್ಡುಗಳನ್ನು ಹಾಕಲಾಗಿದೆ ಮತ್ತು ಅವುಗಳ ಪೈಕಿ ಯಾವುವು ನಾಶವಾಗಿವೆ ಹಾಗೂ ಅದಕ್ಕೆ ಕಾರಣರು ಯಾರು ಎಂದು ಪತ್ತೆ ಹಚ್ಚಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಹಾಳು ಮಾಡತಕ್ಕವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ನಿಗಾ ಇಟ್ಟು ಎಚ್ಚರಿಕೆ ನೀಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಸಾಯಿಲ್ ಕನ್‌ಸರ್ವೇಷನ್ ಯೋಜನೆ

ಯನ್ನೇ ಕೈಬಿಡಬೇಕಾಗುತ್ತದೆ. ಇವತ್ತಿನ ದಿವಸ. ಶೇಕಡ ೬೦ರಷ್ಟು ಜನ ಹೊಲಗಳಲ್ಲಿ ಹಾಕಿರುವ ಒಡ್ಡುಗಳನ್ನು ಬಂದ್ ಮಾಡಿರುವುದರಿಂದ ಭೂಮಿ ಹಿಂದೆ ಯಾವ ರೀತಿ ಇತ್ತೋ ಅದೇ ರೀತಿ ಇವತ್ತಿಗೂ ಇರತಕ್ಕ ಪರಿಸ್ಥಿತಿ ಬಂದಿದೆ. ಈ ಬಗ್ಗೆ ಅಧಿಕಾರಿಗಳು ತೀವ್ರ ಗಮನ ಹರಿಸಿ ಹೆಚ್ಚಿನ ರೀತಿಯಲ್ಲಿ ಕಾರ್ಯ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಸಾಯಿಲ್ ಕನ್‌ಸರ್ವೇಷನ್ ಯೋಜನೆಯಲ್ಲೂ ಒಂದು ತಪ್ಪಿದೆ. ಅದೇನೆಂದರೆ, ಅವರು ತಯಾರು ಮಾಡಿರುವ ನಕ್ಷೆಯಲ್ಲಿ ತೋಟದಲ್ಲಿ ಒಡ್ಡು ಹಾಕತಕ್ಕ ಪ್ರಸಂಗ ಬಂದಾಗ ರೈತ ಎಷ್ಟು ಕೇಳಿಕೊಂಡರೂ ಅವನ ಮಾತಿಗೆ ಬೆಲೆ ಕೊಡದೆ ನಾವು ನಮ್ಮ ಪ್ಲಾನ್ ಪ್ರಕಾರವೇ ಮಾಡುತ್ತೇವೆಂದು ಹೇಳುತ್ತಾರೆ. ಇದು ಸರಿಯಲ್ಲ, ಈ ಕ್ರಮ ತಪ್ಪಬೇಕು. ರೈತನ ಮಾತಿಗೂ ಸ್ವಲ್ಪ ಬೆಲೆ ನೀಡಿ ಅವನಿಗೆ ಅದರಿಂದ ತೊಂದರೆಯಾಗುತ್ತಿದ್ದರೆ ಬೇರೆ ಕಡೆ ಒಡ್ಡನ್ನು ನಿರ್ಮಿಸುವ ಕಾರ್ಯವನ್ನು ಕೈಗೊಂಡು ಆತನಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಮ್ಯಾಪ್‌ನಲ್ಲಿರುವ ಹಾಗೆಯೇ ಮಾಡುವುದಕ್ಕೆ ಹೋಗದೆ ರೈತನಿಗೆ ಹೊಂದಿಕೊಂಡು ಹೋಗುವ ರೀತಿಯಲ್ಲಿ ಕಾರ್ಯಕ್ರಮ ವನ್ನು ರೂಪಿಸಿಕೊಳ್ಳಬೇಕು. ಆ ಪ್ರಕಾರ ರೈತನಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಅನೇಕ ತಾಲ್ಲೂಕುಗಳಲ್ಲಿ ಮಾರುಕಟ್ಟೆಯ ಸೌಲಭ್ಯ ಇಲ್ಲ. ನಮ್ಮ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಮತ್ತು ಹರಪನಹಳ್ಳಿ ಈ ಎರಡು ತಾಲ್ಲೂಕುಗಳಿಗೆ ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಕೊಟ್ಟಿದ್ದಾರೆ. ರೈತನು ಬೆಳೆಯುತಕ್ಕ ಪ್ರತಿಯೊಂದು ಬೆಳೆಯನ್ನು ರೆಗ್ಯುಲೇಟೆಟೆಡ್ ಮಾರುಕಟ್ಟೆಗೆ ಕಳುಹಿಸಬೇಕಾದರೆ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಒಂದೊಂದು ರೆಗ್ಯುಲೇಟೆಡ್ ಮಾರುಕಟ್ಟೆಗಳ ವ್ಯವಸ್ಥೆ ಆಗಬೇಕು. ಎರಡೆರಡು ತಾಲ್ಲೂಕುಗಳಿಗೆ ಒಂದೊಂದು ರೆಗ್ಯುಲೇಟೆಡ್ ಮಾರುಕಟ್ಟೆಯನ್ನು ಮಾಡಿದರೆ ಏನಾಗುತ್ತದೆಂದರೆ, ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿರುವ ರೆಗ್ಯುಲೇಟೆಡ್ ಮಾರುಕಟ್ಟೆಗಳ ಇನ್ನೊಂದು ತಾಲ್ಲೂಕಿಗೆ ಹೆಚ್ಚಿನ ರೀತಿಯಲ್ಲಿ ಖರ್ಚು ಮಾಡದೆ ಇರುವ ಪ್ರಸಂಗಗಳು ಇರುವುದರಿಂದ ಪ್ರತಿಯೊಂದು ತಾಲ್ಲೂಕಿಗೂ ಪ್ರತ್ಯೇಕವಾಗಿ ರೆಗ್ಯುಲೇಟೆಡ್ ಮಾರುಕಟ್ಟೆಗಳನ್ನು ಮಾಡಿದರೆ ಎಲ್ಲ ರೈತಾಪಿ ಜನರಿಗೂ ಅನುಕೂಲವಾಗುತ್ತದೆಂದು ಹೇಳುತ್ತೇನೆ. ದಯವಿಟ್ಟು ಮಾನ್ಯ ಸಚಿವರು ಈ ಬಗ್ಗೆ ತೀವ್ರವಾಗಿ ಆಲೋಚಿಸಿ ಪ್ರತಿಯೊಂದು ತಾಲ್ಲೂಕಿಗೂ ಪ್ರತ್ಯೇಕವಾಗಿ ಒಂದೊಂದು ಮಾರುಕಟ್ಟೆಗಳನ್ನು ನಿರ್ಮಾಣ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇವತ್ತಿನ ದಿವಸ. ಕೆಲವು ಕಡೆ ಎಣ್ಣೆ ಕಾಳುಗಳು ಅಭಾವ ಬಹಳವಾಗಿದೆ. ಉದಾಹರಣೆಗೆ, ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ರೀತಿಯಲ್ಲಿ ಎಣ್ಣೆಕಾಳುಗಳನ್ನು ಬೆಳೆಯುವುದಕ್ಕೋಸ್ಕರ ನಿಗದಿಯಾದ ಭೂಮಿ ಇದೆ. ಆ ಭೂಮಿಯಲ್ಲಿ ಎಣ್ಣೆಕಾಳುಗಳನ್ನು ಬೆಳೆಯುತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದರೆ ಸಾಕಷ್ಟು ಎಣ್ಣೆಕಾಳುಗಳನ್ನು ಬೆಳೆಯಬಹುದು. ಬ್ಯಾಂಕಿನವರು ಯಾವ ರೀತಿ ಎಣ್ಣೆಕಾಳುಗಳನ್ನು ಬೆಳೆಯಲು ನಿಗದಿಯಾಗಿರತಕ್ಕ ಹಳ್ಳಿಗಳನ್ನು ಅಳವಡಿಸಿಕೊಂಡು ಸರ್ವತೋಮುಖವಾಗಿ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತಾರೋ ಅದೇ ಪ್ರಕಾರ ವ್ಯವಸಾಯ ಇಲಾಖೆಯವರು ಕೂಡ ಆಯಾಯ ಬೆಳೆಗಳಿಗೆ ನಿಗದಿ ಯಾಗಿರುವ ಹಳ್ಳಿಗಳನ್ನು ಅಥವಾ ಭೂಮಿಗಳನ್ನು ಬೇರ್ಪಡಿಸಿಕೊಂಡು ಬೆಳೆ ಬೆಳೆಯತಕ್ಕ ವ್ಯವಸ್ಥೆ ಮಾಡಿದರೆ ಸಾಕಷ್ಟು ಎಣ್ಣೆಕಾಳುಗಳನ್ನು ಬೆಳೆಯಬಹುದು. ಈ ಸಂಬಂಧದಲ್ಲಿ ನಿಗದಿಯಾಗಿರುವ ಪ್ರದೇಶಗಳಲ್ಲಿರತಕ್ಕ ರೈತರಿಗೆ ಸಾಲ ಸೌಲಭ್ಯಗಳನ್ನು ನೀಡತಕ್ಕ ವ್ಯವಸ್ಥೆ ಮಾಡಿ ಬೆಳೆ ತೆಗೆಯುವುದಕ್ಕೆ ಪ್ರೋತ್ಸಾಹಿಸಿದರೆ ಅವರೂ ಕೂಡ ಸಾಕಷ್ಟು ಎಣ್ಣೆಕಾಳುಗಳನ್ನು ಬೆಳೆದು ಬಹುಪಾಲು ಆ ಒಂದು ಕೊರತೆ ಯನ್ನು ನಿವಾರಿಸಲು ಸಾಧ್ಯವಾಗುತ್ತದೆ. ಅದೇ ರೀತಿ ಇನ್ನು ಉಳಿದ ಸಂಸ್ಥೆಗಳನು ಕೂಡ ಬೆಳೆಯು ವುದಕ್ಕೆ ಅನುಕೂಲವಾಗುತ್ತದೆ.

(ಅಧ್ಯಕ್ಷರ ಪೀಠವನ್ನು ಉಪಾಧ್ಯಕ್ಷರು ಅಲಂಕರಿಸಿದರು)

ನಾನು ಹೇಳತಕ್ಕದ್ದು ಬರೀ ಶೇಂಗಾದ್ದು ಮಾತ್ರವಲ್ಲ. ನಿಗದಿಯಾಗಿರತಕ್ಕ ಕೆಲವು ಪ್ರದೇಶಗಳನ್ನು ತೆಗೆದುಕೊಳ್ಳುವುದಕ್ಕೆ ವ್ಯವಸಾಯ ಇಲಾಖೆಯವರು ಪ್ರಯತ್ನ ಮಾಡಬೇಕು. ಆ ಪ್ರಕಾರ ಆದರೆ ಮಾತ್ರ ಕೆಲಸವಾಗುತ್ತದೆ. ಈಗ ವ್ಯವಸಾಯ ಇಲಾಖೆಯವರು ತಮ್ಮಷ್ಟಕ್ಕೆ ತಾವೇ ಯೋಜನೆಗಳನ್ನು ಪೇಪರ್ ಮೇಲೆ ಹಾಕಿಕೊಂಡು ಪೇಪರ್ ಕರೆಸ್ಪಾಂಡೆನ್ಸ್ ಮಾಡಿಕೊಂಡು ಸುಮ್ಮನೆ ಕುಳಿತಿರುತ್ತಾರೆ. ಅವರಿಗೆ ನಿಗದಿಯಾದ ಕೆಲಸವನ್ನು ಹಾಕಬೇಕು. ೫೦೦ ಎಕರೆಯಲ್ಲಿ ಬೆಳೆ ಬೆಳೆದು ತೋರಿಸಿ ಎಂದು ಕಡ್ಡಾಯವಾಗಿ ಹೇಳಿದರೆ ಆಗ ರೈತರಿಗೆ ಇರತಕ್ಕ ಕಷ್ಟ ಪರಿಸ್ಥಿತಿ ಏನು ಎಂಬುದು ಗೊತ್ತಾಗುತ್ತದೆ. ರೈತರೂ ಕೂಡ ಅಧಿಕಾರಿಗಳ ಜೊತೆ ಬೆರೆತು ಬೆಳೆ ಬೆಳೆಯುವ ಬಗ್ಗೆ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆ.

ಈ ಪ್ರಕಾರ ಕಾರ್ಯಕ್ರಮಗಳನ್ನು ಆದಷ್ಟು ಮಟ್ಟಿಗೆ ಡೀಸೆಂಟ್ರಲೈಸ್ ಮಾಡಬೇಕಾಗುತ್ತದೆ. ಮತ್ತು ಎಲ್ಲ ರೈತರಿಗೂ ಸರಿಯಾದ ರೀತಿಯಲ್ಲಿ ಸಾಲ ಸೌಲಭ್ಯ ಸೊಸೈಟಿ ಮುಖಾಂತರವಾಗಲೀ, ಬ್ಯಾಂಕುಗಳ ಮುಖಾಂತರವಾಗಲೀ ಕೊಡಿಸಬೇಕು. ರೈತರು ರೈತಾಪಿ ಮಾಡುವುದನ್ನು ಒಲ್ಲೆ ಎಂದು ಹೇಳುತ್ತಿದ್ದಾರೆ. ಎರಡು ಮೂರು ವರ್ಷದಿಂದ ಲುಕ್ಸಾನಾಗಿ ೧೦ ಎಕರೆ ಜಮೀನಿದ್ದರೂ ನನಗೆ ಉಪಯೋಗವಿಲ್ಲ, ಎಲ್ಲಾದರೂ ವಾಚ್‌ಮನ್ ಕೆಲಸವನ್ನೋ, ಜವಾನನ ಕೆಲಸವನ್ನೋ ಕೊಡಿಸಿದರೆ ನಾನು ಅದನ್ನು ಮಾಡುವುದಕ್ಕೆ ತಯಾರು ಎಂದು ಹೇಳುತ್ತಾರೆ. ಸ್ವತಂತ್ರ ಜೀವನವನ್ನು ಮರೆತು ಸರ್ಕಾರದಲ್ಲಿ ಜವಾನನ ಕೆಲಸ ಮಾಡುತ್ತೇನೆ ಎಂಬ ಮನೋಭಾವ ರೈತಾಪಿ ವರ್ಗದಲ್ಲಿ ಬೆಳೆಯಬೇಕಾದರೆ ಇದಕ್ಕೆ ಕಾರಣ ಏನೆಂಬುದನ್ನು ನೋಡಬೇಕು. ಅಂದರೆ ಇದರ ಅರ್ಥ ಕಸ ಹೊಡೆಯುವ ಜವಾನನ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಆದರೆ ರೈತಾಪಿ ಮಾಡುವುದಕ್ಕೆ ಮಾತ್ರ ಸಾಧ್ಯವಿಲ್ಲ ಎಂಬುದು. ಆದ್ದರಿಂದ ಅವರಿಗೆ ಇನ್‌ಸೆಂಟೀವ್ ಕೊಡುವ ಕಾರ್ಯಕ್ರಮ ಹಾಕಿದರೆ ಮಾತ್ರ ರೈತ ಉಳಿಯುತ್ತಾನೆಯೇ ಹೊರತು ಇಲ್ಲದಿದ್ದರೆ ಉಳಿಯುವುದಿಲ್ಲ. ನಮಗೆ ಆಹಾರವನ್ನು ಒದಗಿಸತಕ್ಕ ರೈತರು ನಮಗೆ ರೈತಾಪಿ ಬೇಡ, ಜವಾನಿಕೆ ಮಾಡುತ್ತೇವೆ ಎಂದು ಹೇಳಲು ತಯಾರಾದರೆ ನಮ್ಮ ರೈತರು ಯಾವ ರೀತಿ ಉದ್ಧಾರವಾಗುತ್ತಾರೆ ಎಂಬುದನ್ನು ಆಲೋಚನೆ ಮಾಡಬೇಕು ರೈತರಲ್ಲಿ ಯಾವ ರೀತಿ ಮನೋಭಾವನೆ ಬದಲಾವಣೆಯಾಗುತ್ತಿದೆ ಎಂಬುದನ್ನು ನೋಡಬೇಕು. ರೈತರಿಗೆ ಏರಿಯಾವೈಸ್ ರಿಗ್‌ವೆಲ್ ಹಾಕಿಕೊಟ್ಟು ಸಾಯಿಲ್ ಕನ್‌ಸರ್ವೇಷನ್‌ನಲ್ಲಿ ಯಾವ ರೀತಿ ಕಾರ್ಯಕ್ರಮ ತೆಗೆದುಕೊಂಡಿದ್ದೀರೋ ಅದೇ ಪ್ರಕಾರವಾಗಿ ೧೦ ಎಕರೆಗಿಂತ ಮೇಲ್ಪಟ್ಟಿರತಕ್ಕ ರೈತರಿಗೆ ರಿಗ್‌ವೆಲ್ ಹಾಕಿಕೊಟ್ಟು ಹಣ ಮರುಪಾವತಿ ಮಾಡುವಂತೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಹೀಗೆ ಮಾಡಿ ರೈತರಿಗೆ ರೈತಾಪಿ ಮಾಡಬೇಕು ಎಂಬ ಮನೋಭಾವನೆ ಬರುವ ರೀತಿಯಲ್ಲಿ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI VEERSHETTY KUSHNOOR (Bidar).—Mr. Speaker Sir, I support all the three demands *i.e.*, Agriculture, Co-operation and Regulated Markets. Unfortunately all these big demands have been clubbed together and there is no proper discussion on Co-operation, Infact co-operation itself would have required two days time. A very few speakers have spoken on Co-operation in the last two days and I think there are only few speakers today and it is going to be closed. It seems so.

Sir, this time the Annual Report is not properly printed. There are a number of mistakes. I do not know how these mistakes have crept in. Even the corrections which are supplied, are not correct. In the Annual Report, in the first page it is mentioned that the Membership is 78.33 Lakhs whereas in the second page you have shown it as 78.33. Which of these is correct? A large number of corrections are necessary. This goes to show that there is inefficiency somewhere and the persons who have been entrusted with this work have not taken proper care. I hope in future this kind of mistakes would not be repeated.

The progress in the last one year, which I have seen, is commendable and the membership has increased. Ninety per cent of the agricultural families have been enrolled and I hope in the near future the entire agricultural families will be enrolled. But from the

Annual Report it is not clear whether all the agricultural families that have been enrolled have obtained loans or what is the percentage of persons who have obtained the loans. As hon. Member Sri Raju Gowda pointed out, only five lakh persons have applied for waiving of the loans from the agricultural families. Out of thirty-five lakh families, seventeen lakh are small and marginal farmers. These figures are also necessary to judge the performance because you have amended the Act and on the basis of that Act you have made it compulsory for even small and marginal farmers and also the scheduled castes and scheduled tribes to became members. The Government is paying for the share amount and so you are enrolling large number of people. It is a very healthy sign. At the same time you will have to take care that all the persons who have been enrolled will be provided with loans. I hope, next year you will supply all this information namely, the percentage of the membership, how many of them have got loans and also how many of these beneficiaries are small and marginal farmers and their percentage This information should be given in the Annual Report. Without this information, we cannot show the effects of the Co-operative movement and say that it has done a good job.

Before going to the Demand, I would like to mention one more point. We have brought Karnataka Agricultural Debtors Relief Act in 1976. On the basis of debt Act that nearly three lakh petitions are pending before the Munsiff Courts in Karnataka as on today. There were writ petitions before the High Court and the High Court struck down that Act. After the High Court struck down that Act, the State Government filled a writ petition before the Supreme Court and the Supreme Court upheld that Act. The Supreme Court stated that Act was valid. That was the Judgement of the Supreme Court. What has happened now is that for the last two years though these petitions are pending before the Munsiff Courts, no action has been taken by the Department. The Karnataka Agricultural Debtors Relief Act comes under the Co-operation Department and so the file is pending with the Co-operation Department. There are two alternatives. One is to extend the date and another is to use another Act which is just like this one i.e., Karnataka Debt Relief Act. There was a Section i.e., Section 24 in the Karnataka Agricultural Debtors Relief Act. We have introduced the same Section in the form of Section 13 in the Karnataka Debtors Relief Act. Section 24 of the Karnataka Agricultural Debtors Act and Section 13 of the Karnataka Debt Relief Act are the same.

5-30 P.M.

If you feel that there is any difference, you will have to consult the Law Department. You will have to call a meeting of the Officers of the Law Department with yourself and decide whether all these petitions pending before the Munsiff Court will have to be tra sferred. If the petitions are under Section 4 of the Karnataka Debt Relief Act, the petitions have to be transferred to Tahsildar. If they pertain to Sction 13, they will have to be transferred to the Assistant Commissioner because we have given powers to the Assistant Commissioners. This is very essential because for the last two years nearly 3 lakh petitions are pending before the Munsiff Court. Some action will have to be taken in consultation with the Law Department.

Now I will come again to the Co-operation Department. This Department is always being criticised for whatever new measures and for whatever scheme we introduce. About amalgamation, there is a criticism that amalgamations have not been done properly. One Hon. member has said that the Secretary of a small society must be paid Rs. 500. If the society is not in a position to pay, where from it will bring that money? Are these societies Government Departments? If he feels that they are Government Departments, then he can expect from the Government Department this money. Sometimes it is said that these societies are independent and nobody should interfere in the affairs with regard to nomination and all that. But where from we will have to get this Rs. 500 to pay the Secretary? The Society will have to earn money and pay him. The loan transactions must be about Rs. 5 lakhs and you will be getting only 2% margin. Some of my friends here said that the rate of interest should be reduced. Even if there is 2% margin on this 5 lakhs transactions, every year that society is going to get Rs. 10,000. Out of this, if you pay Rs. 500 to a clerk, Rs. 6000 will go to a Clerk. What about office rent and peon? We are entrusting the work of distribution of controlled cloth, distribution of sugar and so many other things to the Society. There must be atleast two or three persons that a society has to employ. How can these societies pay to all these persons? You say that for every panchayat there must be one society. Unless you think over the viability of these societies, you cannot advocate one socicty for each panchayat Thinking on these lines, the Reserve Bank of India, has for the last 5 or 6 years, advocated that there must be a viable society and that viable society must have atleast 2 lakhs business with atleast one Clerk and a peon. Maximum it can go even to 20 or 30 lakhs, there is no limit. When

these are the problems, you cannot say that we will have to go back to the old system that there must be one Society in every panchayat. It is not going to work in the changed atmosphere because the society in the village has got to take responsibility of so many things. Even the Food and Civil Supplies Department is going to entrust work to these Societies. Even our Co-operation Department is asking to take some responsibilities. Under these circumstances, my submission to the Hon. Minister is that while advocating one society for each panchayat, he must also think over the viability of the societies.

